ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 10 ಶನಿವಾರ 2023

ಸಂಪುಟ: 44 | ಸಂಚಿಕೆ: 55 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com




ಕರ್ನಾಟಕ ರಾಜ್ಯದಲ್ಲಿ 2ನೇ ಬಾರಿಗೆ ಮುಖ್ಯಮಂತ್ರಿಯಾಗಿ
ಪ್ರಮಾಣ ವಚನ ಸ್ವೀಕರಿಸಿ ಮೊದಲ ಬಾರಿಗೆ
ಸಾಂಸ್ಕೃತಿಕ ನಗರಿ ಮೈಸೂರು ಜಿಲ್ಲೆಗೆ ಪ್ರವೇಶ ಮಾಡುತ್ತಿರುವ
ಗೌರವಾನ್ವಿತ ಮುಖ್ಯಮಂತ್ರಿಗಳಾದ
ಸನ್ಮಾನ್ಯ ಶ್ರೀ ಸಿದ್ದರಾಮಯ್ಯರವರಿಗೆ
ಗೌರವಪೂರ್ವಕ ಸುಸ್ವಾಗತ
93437 06416
: ಸ್ವಾಗತಕೋರುವವರು :
ನಾಗರಾಜು ಬಸವೇಗೌಡ
ಸಂಸ್ಥಾಪಕರು ಬಿ.ಕೆ.ಟಿ ಪಬ್ಲಿಕ್ ಶಾಲೆ
ಹಾಗೂ ಶ್ರೀ ಬೀರೇಶ್ವರ ಸ್ವಾಮಿ ಮತ್ತು
ಶ್ರೀ ಕಾಳಮ್ಮ ಟ್ರಸ್ಟ್ ಅಧ್ಯಕ್ಷರು ಕಡಕೊಳ



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜೂನ್ 10 ಶನಿವಾರ 2023

ಸಂಪುಟ: 44 | ಸಂಚಿಕೆ: 55 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4





ಮೈಸೂರಿನ ಪ್ರಮುಖ ಮೂರು ವಾಣಿಜ್ಯ ರಸ್ತೆ, ಟೌನ್‌ಹಾಲ್ ಬಳಿ ಪ್ರಾಯೋಗಿಕವಾಗಿ

‘ಪೇ ಅಂಡ್ ಪಾರ್ಕ್’ ಜಾರಿ

● ಪಾಲಿಕೆ ವ್ಯಾಪ್ತಿಯ 1941 ಮಳಿಗೆಗಳ ಬಾಡಿಗೆ ದರ ಪರಿಷ್ಕರಣೆ ● ಮೈಸೂರು ಪಾಲಿಕೆ ಕೌನ್ಸಿಲ್ ಮಹತ್ವದ ನಿರ್ಧಾರ



ಮೈಸೂರು, ಜೂ.9(ಎಸ್‌ಬಿಡಿ)– ಮೈಸೂರು ನಗರದ ಪ್ರಮುಖ ವಾಣಿಜ್ಯ ರಸ್ತೆಗಳಲ್ಲಿ ಪ್ರಾಯೋಗಿಕವಾಗಿ ವಾಹನಗಳ ನಿಲುಗಡೆಗೆ ಶುಲ್ಕ ವಸೂಲಿ(ಪೇ ಅಂಡ್ ಪಾರ್ಕ್) ಜಾರಿ ಮತ್ತು ಪಾಲಿಕೆಗೆ ಸೇರಿದ 1941 ಮಳಿಗೆಗಳಿಗೆ ಪರಿಷ್ಕೃತ ಬಾಡಿಗೆ ದರ ನಿಗದಿಗೆ ನಗರ ಪಾಲಿಕೆ ನಿರ್ಧರಿಸಿದೆ.

ಪಾಲಿಕೆಯ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಮೇಯರ್ ಶಿವಕುಮಾರ್ ಅಧ್ಯಕ್ಷತೆ, ಉಪಮೇಯರ್ ಜಿ.ರೂಪಾ ಹಾಗೂ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ಸಮ್ಮುಖದಲ್ಲಿ ನಡೆದ ಕೌನ್ಸಿಲ್ ಸಭೆಯಲ್ಲಿ ಹಲವು ವರ್ಷಗಳಿಂದ ಚರ್ಚೆಯಲ್ಲಿದ್ದ ಈ ಪ್ರಮುಖ ● 7ನೇ ಪುಟಕ್ಕೆ

ಪೇ ಅಂಡ್ ಪಾರ್ಕ್ ಮಾಹಿತಿ

ಮೈಸೂರಿನ ಹೃದಯ ಭಾಗದಲ್ಲಿರುವ ಮೂರು ಪ್ರಮುಖ ವಾಣಿಜ್ಯ ರಸ್ತೆಗಳು ಹಾಗೂ ಟೌನ್‌ಹಾಲ್(ಪುರಭವನ) ಆವರಣದಲ್ಲಿ ವಾಹನ ನಿಲುಗಡೆಗೆ ಶುಲ್ಕ ವಸೂಲಿ ಮಾಡುವ ಪ್ರಾಯೋಗಿಕ ವ್ಯವಸ್ಥೆ ಜಾರಿಗೆ ಪಾಲಿಕೆ ನಿರ್ಧರಿಸಿದೆ. ದ್ವಿಚಕ್ರ ವಾಹನಗಳಿಗೆ ಮೊದಲ ಎರಡು ಗಂಟೆಗೆ 10 ರೂ., ನಂತರದ ಪ್ರತಿ ಗಂಟೆಗೆ 10 ರೂ. ಹಾಗೂ ನಾಲ್ಕು ಚಕ್ರದ ವಾಹನಗಳಿಗೆ ಮೊದಲೆರಡು ಗಂಟೆಗೆ 30 ರೂ., ನಂತರದ ಪ್ರತಿ ಗಂಟೆಗೆ 10 ರೂ.ಗಳಂತೆ ಶುಲ್ಕ ವಸೂಲಿ ಮಾಡಲು ನಿರ್ಣಯ ಮಾಡಲಾಗಿದೆ. ಹಾಗೆಯೇ ಉದ್ದೇಶಿತ ಒಟ್ಟು 7 ಸ್ಥಳಗಳಲ್ಲಿ ಎಷ್ಟು ವಾಹನಗಳನ್ನು ನಿಲುಗಡೆ ಮಾಡಬಹುದು ಎಂಬ ವಿವರವನ್ನೂ ಸಂಗ್ರಹಿಸಲಾಗಿದೆ.

ರಸ್ತೆ	ದ್ವಿಚಕ್ರ ವಾಹನ	4 ಚಕ್ರದ ವಾಹನ
ಡಿ.ದೇವರಾಜ ಅರಸು ರಸ್ತೆ	900	220
ಅಶೋಕ ರಸ್ತೆ	200	60
ಟೌನ್‌ಹಾಲ್	200	270
ಸಯ್ಯಾಜಿರಾವ್ ರಸ್ತೆ	500	130
ವಿನೋಬಾ ರಸ್ತೆ	800	60
ಹರ್ಷ ರಸ್ತೆ	30	80
ಧನ್ವಂತ್ರಿ ರಸ್ತೆ	400	30

ಸೀವೆಜ್ ಫಾರಂನಲ್ಲಿ 46 ವೀಳ್ಯದೆಲೆ ಬೆಳೆಗಾರರಿಗೆ ತಲಾ 5 ಗುಂಟೆ ಭೂಮಿ ಮಂಜೂರು

ಬಹಳ ವರ್ಷದ ನಂತರ ದಕ್ಕಿತು ಬಡ ಜೀವಿಗಳಿಗೆ ಭೂಮಿ

ಮೈಸೂರು, ಜೂ.9(ಎಸ್‌ಬಿಡಿ)– ವೀಳ್ಯದೆಲೆ ಬೆಳೆಗಾರರಿಗೆ ಸೀವೆಜ್ ಫಾರಂನಲ್ಲಿ ಜಮೀನು ನೀಡಬೇಕೆಂಬ ನಾಲ್ಕೂವರೆ ದಶಕಗಳ ಆಗ್ರಹ ಇಂದು ಈಡೇರಿದ್ದು, ಸಮರ್ಪಕ ದಾಖಲೆ ಹೊಂದಿರುವ 46 ಜನರಿಗೆ ತಲಾ ಐದು ಗುಂಟೆ ಜಮೀನು ಮಂಜೂರು ಮಾಡುವ ಮಹತ್ವದ ನಿರ್ಣಯವನ್ನು ಕೈಗೊಳ್ಳಲಾಯಿತು.

ಈ ಕಾರ್ಯಸೂಚಿ ಬಗ್ಗೆ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಜಮೀನಿಗಾಗಿ ಅರ್ಜಿ ಸಲ್ಲಿಸಿದವರಲ್ಲಿ ಸರ್ಕಾರದ ಮಾನದಂಡಗಳು ಹಾಗೂ ನಿಯಮಾನುಸಾರ ದಾಖಲೆಗಳು ಸಲ್ಲಿಸಿರುವ 46 ಫಲಾನುಭವಿಗಳಿಗೆ ಜಮೀನು ಮಂಜೂರು ಮಾಡಲು ಕೌನ್ಸಿಲ್ ಒಪ್ಪಿಗೆ ಸೂಚಿಸುವಂತೆ ಮನವಿ ಮಾಡಿದರು. ಷರತ್ತುಗಳನ್ನು ಮೀರದಂತೆ ಉದ್ದೇಶಿತ ಚಟುವಟಿಕೆಗಷ್ಟೇ ಜಮೀನು ಬಳಕೆ ಮಾಡಿಕೊಳ್ಳುವ ● 9ನೇ ಪುಟಕ್ಕೆ

ಹಾಸನ ‘ಉಸ್ತುವಾರಿ’ಯಲ್ಲೂ ಗೌಡರ ಕುಟುಂಬ ಟಾರ್ಗೆಟ್ ಮಾಡಲಾಗಿದೆಯೇ...!?

ಸಹಕಾರಿ ಸಚಿವ ಕೆ.ಎನ್.ರಾಜಣ್ಣರಿಗೆ ಹಾಸನ ಉಸ್ತುವಾರಿ

ಮೈಸೂರು ಜಿಲ್ಲಾ ಉಸ್ತುವಾರಿ ಡಾ.ಹೆಚ್.ಸಿ.ಮಹದೇವಪ್ಪರ ಹೆಗಲಿಗೆ


● ವೆಂಕಟೇಶ್–ಚಾಮರಾಜನಗರ, ಚಲುವರಾಯಸ್ವಾಮಿ–ಮಂಡ್ಯ, ಬೋಸರಾಜ್–ಕೊಡಗು

● ನಿರೀಕ್ಷೆಯಂತೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಬೆಂಗಳೂರು ಹೊಣೆಗಾರಿಕೆ

ಬೆಂಗಳೂರು, ಜೂ.9 (ಕೆಎಂಶಿ)– ಮಾಜಿ ಪ್ರಧಾನಮಂತ್ರಿ ಹೆಚ್.ಡಿ.ದೇವೇಗೌಡರ ಕುಟುಂಬವನ್ನು ಗುರಿಯಾಗಿಟ್ಟುಕೊಂಡು, ಅವರ ಕಡು ವೈರಿ ಸಹಕಾರಿ ಸಚಿವ ಕೆ.ಎನ್.ರಾಜಣ್ಣ ಅವರಿಗೆ ಹಾಸನ ಜಿಲ್ಲಾ ಉಸ್ತುವಾರಿ ವಹಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, 31 ಜಿಲ್ಲೆಗಳಿಗೂ ಇಂದು ಉಸ್ತುವಾರಿ ಸಚಿವರ ನೇಮಕ ಮಾಡಿ ಆದೇಶ ಹೊರಡಿಸಿದ್ದು, ತಾವು ಯಾವುದೇ ಜಿಲ್ಲೆಯ ಉಸ್ತುವಾರಿ ಹೊಣೆಗಾರಿಕೆ ತೆಗೆದುಕೊಂಡಿಲ್ಲ. ● 9ನೇ ಪುಟಕ್ಕೆ



ಡಿ.ಕೆ.ಶಿವಕುಮಾರ್


ಕೆ.ಎನ್.ರಾಜಣ್ಣ


ಹೆಚ್.ಸಿ.ಮಹದೇವಪ್ಪ


ಕೆ.ವೆಂಕಟೇಶ್


ಚಲುವರಾಯಸ್ವಾಮಿ


ಬೋಸರಾಜ್



ನಕ್ಕರೆ ಅದೇ ಸ್ವರ್ಗ

ಸಂದರ್ಶಕ : (ಕಂಪ್ಯೂಟರ್ ಜ್ಞಾನದ ಬಗ್ಗೆ) "ಮಿಸ್ಟರ್ ನಿಮಗೆ ಮೈಕ್ರೋಸಾಫ್ಟ್ ಆಫೀಸ್ ಗೊತ್ತಾ?"

ಅಭ್ಯರ್ಥಿ : "ಸಾರಿ ಸರ್, ನಂಗದು ಗೊತ್ತಿಲ್ಲ. ಆದ್ರೆ ನೀವು ಅಡ್ರೆಸ್ ಕೊಟ್ರೆ ನಾ ಖಂಡಿತ ಆ ಆಫೀಸ್ ಎಲ್ಲಿದೆ ಅಂತ ಪತ್ತೆ ಮಾಡ್ತೀನಿ"

ಮೈಸೂರು ಮಿತ್ರ

ಶನಿವಾರ, 10 ಜೂನ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ತನಗೆ ತೋರಿದ್ದೇ ಸರಿಯಾದ ದಾರಿ ಇರಬಹುದು. ಆದರೆ ಅದು ತನ್ನ ಹೊರತು ಇನ್ನೂ ಹತ್ತು ಜನಕ್ಕೆ ಸರಿಯಾಗಿ ಕಂಡಿರಬೇಕು. –ವಿ.ಎಂ. ಇನಾಂದಾರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಾಳು ಕೂಡಿದರೆ ಕಣಜ

ನಿಮ್ಮ ಪತ್ರಗಳು

ಎಂ.ಜಿ ರೋಡ್ ಮಾರುಕಟ್ಟೆಯಲ್ಲಿ ರೈತರ ಗೋಳು ಕೇಳುವವರ್ಯಾರು?



ಮಾನ್ಯರೆ,

ಮೈಸೂರು ಜಿಲ್ಲಾ ಕೇಂದ್ರದ ಎಂ.ಜಿ.ರಸ್ತೆಯಲ್ಲಿರುವ ತರಕಾರಿ ಮಾರುಕಟ್ಟೆಗೆ ದೂರದ ಹಳ್ಳಿಗಳಿಂದ ರೈತರ ತಾವು ಬೆಳೆದ ತರಕಾರಿಗಳನ್ನು ಮಾರುವುದಕ್ಕಾಗಿ ಹಿಂದಿನ ರಾತ್ರಿ ಏಳು ಗಂಟೆಗೆಲ್ಲ ಬಂದು ಸೇರುತ್ತಾರೆ. ಸುಮಾರು ಐದನೂರು ಮೀಟರ್ ಉದ್ದಕ್ಕೂ ರಸ್ತೆಯ ಇಕ್ಕೆಲಗಳಲ್ಲಿ ಚರಂಡಿಗಳ ಮೇಲೆಯೇ ತರಕಾರಿಗಳೊಂದಿಗೆ ಕೊಳ್ಳುವವರಿಗಾಗಿ ಕಾಯುತ್ತಿರುತ್ತಾರೆ. ಇವರಿಗೆ ಮಳೆ ಬಂದರೆ ಯಾವುದೇ ಮರೆ ಇಲ್ಲದೆ ಚಳಿ–ಮಳೆ–ಗಾಳಿಯಲ್ಲಿ ಬೆಳಗಿನವರೆಗೆ ನಿದ್ರೆ ಇಲ್ಲದೆ ಇರಬೇಕಾಗಿರುವುದು ಶೋಚನೀಯ. ರಾತ್ರಿ ಸಮಯದಲ್ಲಿ ಅ ರಸ್ತೆಗೆ ಭೇಟಿ ನೀಡಿದರೆ, ವ್ಯಾಪಾರದ ತಂತ್ರಗಾರಿಕೆಯನ್ನು ಅರಿಯದ ರೈತರ ಮೊಗದಲ್ಲಿನ ಕಾತುರತೆಯನ್ನು ನಗದು ಮಾಡಿಕೊಳ್ಳುವ ದಳ್ಳಾಳಿಗಳ ಕುತಂತ್ರದ ಮನವರಿಕೆ ನಿಮಗಾಗುವುದು. ನಿಜಕ್ಕೂ ಬೆವರು ಸುರಿಸುವ ಅನ್ನದಾತ ಇಲ್ಲಿ ಪಡುವ ಯಾತನೆ ಎಂತಹವರಿಗೂ ಮರುಕ ಉಂಟಾಗದಿರದು. ಸೂಕ್ತ ಬೆಲೆ ಸಿಗದೆ ಕೆಲವೊಮ್ಮೆ ಕೊಟ್ಟಷ್ಟು ಬೆಲೆಗೆ ಕೊಡುವುದುಂಟು. ಅದೂ ಸಾಧ್ಯವಾಗದಿದ್ದಲ್ಲಿ ವಾಪಸ್ಸು ತೆಗೆದುಕೊಂಡು ಹೋಗಲಾರದೆ ಪರಿತಪಿಸುವರು!

ಸದ್ಯದ ಬೇಡಿಕೆ, ಮನವಿ ಎಂದರೆ ದಯಮಾಡಿ ಮಳೆ ಬಂದರೆ ನೆನೆಯದಂತೆ ರಕ್ಷಣೆ ನೀಡಲು ಶೆಲ್ಟರ್‌ಗಳನ್ನು ನಿರ್ಮಿಸಿಕೊಟ್ಟರೆ ಒಳ್ಳೆಯದು. ಮಳೆ ಬಂದಾಗ ಅವರ ಬವಣೆಯನ್ನು ನೋಡಿದರೆ ಏನಪ್ಪ ನಮ್ಮ ರೈತರ ಬದುಕು ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದಲ್ಲಿದ್ದರೂ ಇನ್ನೂ ವಿಷಮ ಸ್ಥಿತಿಯಲ್ಲಿ ಇದೆಯಲ್ಲ? ಎಂದೆನಿಸುವುದಲ್ಲದೆ ಮನಸ್ಸಿಗೆ ನೋವಾಗದೆ ಇರದು. ಏಕೆ ಇಲ್ಲಿನ ಸಮಸ್ಯೆ ಯಾರ ಕಣ್ಣಿಗೂ ಬಿದ್ದಿಲ್ಲವೆ?!

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

ಉಳ್ಳವರು ಸ್ವತಃ ಗ್ಯಾರಂಟಿಗಳ ತ್ಯಜಿಸಲಿ

ಮಾನ್ಯರೆ,

ಗ್ಯಾರಂಟಿ ಯೋಜನೆಗಳ ಜಾರಿಗೆ ತಂದ ಕಾಂಗ್ರೆಸ್ ಸರಕಾರಕ್ಕೆ ಮೊದಲಿಗೆ ಅಭಿನಂದನೆಗಳು. ಈಗಾಗಲೇ ಜಾರಿಯಾಗಿರುವ ಗ್ಯಾರಂಟಿ ಯೋಜನೆಗಳು ಅರ್ಹ ಜನರಿಗೆ ತಲುಪುವ ಏಕೈಕ ಉದ್ದೇಶದಿಂದ ಕೆಲವು ಮಾನದಂಡಗಳನ್ನು ಪರಿಷ್ಕರಣೆ ಮಾಡಿ ಬಿಡುಗಡೆ ಮಾಡಲಾಗಿದೆ. ಈ ನೀತಿ ನಿಯಮಗಳನ್ನು ಹಾಕದಿದ್ದರೆ ಯೋಜನೆ ನಿಂತುಹೋಗುವ ಅಪಾಯವಿದೆ. ಏಕೆಂದರೆ ಅವುಗಳು ಅರ್ಹರಿಗೆ ತಲುಪದೇ ದುರುಪಯೋಗವಾದರೆ ಜಾರಿಗೆ ಬಂದ ಪರಮಾರ್ಥವಾದರೂ ಏನು ಹೇಳಿ? ಹಾಗಾಗಿ ಜನರನ್ನು ತಲುಪಿಸುವ ದೃಷ್ಟಿಕೋನ ಸರ್ಕಾರದ ಗುರುತರ ಹೊಣೆಗಾರಿಕೆಯಾಗಿದೆ. ಇದೇ ಸಂದರ್ಭದಲ್ಲಿ ಕೆಲ ಪ್ರಾಮಾಣಿಕ ಜನರು ತಾವೇ ಸ್ವತಃ ಮುಂದೆ ಬಂದು ತಮಗೆ ಈ ಯೋಜನೆ ಬೇಡವೆಂದು ತ್ಯಜಿಸಿದರೆ ಯೋಜನೆ ಪರಿಣಾಮಕಾರಿಯಾಗಿ ಬಡ ಜನರನ್ನು ತಲುಪುತ್ತದೆ. ಜತೆಗೆ ರಾಜ್ಯದ ಆರ್ಥಿಕ ಸ್ಥಿತಿ ಸುಧಾರಣೆಯಾಗಿ ಪ್ರಗತಿಯ ಕಡೆಗೆ ಮುಖ ಮಾಡುತ್ತದೆ.

ಕೆಲವರಿದ್ದಾರೆ, ಬರೋದು ಪುಗಸಟ್ಟೆ ಏಕೆ ಬೇಡ ಎನ್ನಲಿ, ಎಲ್ಲರಿಗೂ ಸಿಗೋವಾಗ ನನಗೂ ಸಿಗಲಿ ಎಂಬ ಮನೋಧೋರಣೆ ಬೇಡ. ನಿಮ್ಮ ಈ ಅಗತ್ಯಗಳನ್ನು ನೀವೇ ಈಡೇರಿಸಿಕೊಳ್ಳಲು ಸಾಧ್ಯವಾಗುವ ಸಂಪನ್ಮೂಲಗಳನ್ನು ನೀವು ಹೊಂದಿದ್ದೀರಿ ಎಂದಾದರೆ ಈ ಯೋಜನೆಯ ಫಲಾನುಭವಿ ನೀವಾಗೋದು ಬೇಡ. ಬೇರೆಯವರಿಗೆ ಕೊಟ್ಟರೆ ನೀವು ಸಹ ಮಾದರಿಯಾಗಿ ಬದುಕಬಹುದು. ಈ ನಿಟ್ಟಿನಲ್ಲಿ ಯೋಚಿಸಿದಾಗ ಯೋಜನೆಯ ದುರ್ಬಳಕೆಯ ಮಾತೇ ಇರದು.

–ಎ.ಎಸ್.ಗೋವಿಂದೇಗೌಡ, ಅರೇನಹಳ್ಳಿ, ಪಿರಿಯಾಪಟ್ಟಣ ತಾ.

ಆದಾಯ ತೆರಿಗೆದಾರರಿಗೆ 'ಗೃಹಲಕ್ಷ್ಮಿ' ಸಿಗುವುದಿಲ್ಲ; ಇದು ಸರ್ಕಾರದ ಆದೇಶ

ಮಾನ್ಯರೆ,


ರಾಜ್ಯ ಸರ್ಕಾರದ ಮಹತ್ವದ ಗ್ಯಾರಂಟಿ ಸ್ಕಿಂ ಆದ 'ಗೃಹ ಲಕ್ಷ್ಮೀ' ಯೋಜನೆಯು ಕುಟುಂಬದ ಯಜಮಾನಿ ಅಥವಾ ಯಜಮಾನಿಯ ಪತಿ ಆದಾಯ ತೆರಿಗೆ ಪಾವತಿಸುತ್ತಿದ್ದರೆ ಈ ಯೋಜನೆ ಸಿಗುವುದಿಲ್ಲವೆಂದು ಸರ್ಕಾರ ಆದೇಶ ಹೊರಡಿಸಿದೆ.

ಪ್ರತಿ ತಿಂಗಳು ಲಕ್ಷಾಂತರ ರೂಪಾಯಿ ಸಂಪಾದಿಸುವ ಬಹುತೇಕ ವಕೀಲರು ಆದಾಯ ತೆರಿಗೆ ಕಟ್ಟುತ್ತಾರಾ? ಖಾಸಗಿ ಕ್ಲಿನಿಕ್‌ನ ಡಾಕ್ಟರ್‌ಗಳು ಆದಾಯ ತೆರಿಗೆ ಕಟ್ಟುತ್ತಾರಾ? ಖಾಸಗಿ ಟ್ಯೂಷನ್ ಹೇಳಿಕೊಡುವ ಅಧ್ಯಾಪಕರು ಆದಾಯ ತೆರಿಗೆ ಕಟ್ಟುತ್ತಾರಾ, ಇವರು ತೆಗೆದುಕೊಳ್ಳುವ ಫೀಸ್‌ಗೆ ರಸೀದಿ ನೀಡುತ್ತಾರಾ. ಇವರೆಲ್ಲರೂ ಪ್ರತಿ ತಿಂಗಳು ಲಕ್ಷಾಂತರ ರೂಪಾಯಿ ಸಂಪಾದಿಸುವ ವರ್ಗದವರು. ಇವರಲ್ಲಿ ಬಹುತೇಕ ಮಂದಿ ಆದಾಯ ತೆರಿಗೆ ಕಟ್ಟುವುದಿಲ್ಲ.

ಆದರೆ ಸಣ್ಣ ಪುಟ್ಟ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುವ ನೌಕರರಿಗೆ ಆದಾಯ ತೆರಿಗೆ ಕಟಾಯಿಸಿ ಸಂಬಳ ನೀಡುತ್ತಾರೆ. ಇವರು 'ಗೃಹ ಲಕ್ಷ್ಮೀ' ಸ್ಕಿಂಗೆ ಅರ್ಹತೆ ಹೊಂದಿರುವುದಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಇನ್ಶೂರೆನ್ಸ್ ಕಂಪನಿಗಳಲ್ಲಿ ಪ್ರತಿನಿಧಿಗಳು ಕೇವಲ ವರ್ಷಕ್ಕೆ 20 ಸಾವಿರಕ್ಕಿಂತ ಹೆಚ್ಚು ತೆಗೆದುಕೊಳ್ಳುವ ಕಮಿಷನ್ ಹಣಕ್ಕೆ ಶೇ.5 ರಷ್ಟು ಆದಾಯ ತೆರಿಗೆಯನ್ನು ಕಟಾವು ಮಾಡಿಕೊಳ್ಳುತ್ತಾರೆ. ಇವರು ಗೃಹಲಕ್ಷ್ಮೀಗೆ ಅನರ್ಹರು. ಈ ಬಗ್ಗೆ ರಾಜ್ಯ ಸರ್ಕಾರ ಸರಿಯಾದ ಮಾಹಿತಿ ಸಂಗ್ರಹಿಸಿ ಅರ್ಹರಿಗೆ ಮಾತ್ರ ಗೃಹಲಕ್ಷ್ಮೀ ಸಿಗುವಂತಾಗಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

ಅಷ್ಟಾಂಗ ಯೋಗ, ಇದುವೇ ನಮ್ಮ ಸುಯೋಗ
ಆರೋಗ್ಯ ಕಾಪಾಡಲು ಮಾಡಿ, ಮುಂಜಾನೆ ಎದ್ದು ಬೇಗ
ಇಷ್ಟಪಟ್ಟರೇ ಸುಲಭದೀ, ತೊಲಗುವುದು ಮನಸ್ಸಿನ ಉದ್ವೇಗ
ಈಗಿನಿಂದಲೇ ಅಭ್ಯಸಿಸಿ ಯೋಗ, ಮುಂದೆ ಇರುವುದಿಲ್ಲ ಯಾವುದೇ ರೋಗ
ಉಪವಾಸ, ಧ್ಯಾನ, ಪ್ರಾಣಾಯಾಮ, ಭಜನೆ ಎಲ್ಲವೂ ಇದರದೇ ಭಾಗ
ಊಟ, ನಿದ್ರೆ ಅಷ್ಟೇ ಅಲ್ಲ ಸುಖಜೀವನದ ವೈಭೋಗ
ಋಷಿ ಪತಂಜಲಿ ಮುನಿಗಳು ಹೇಳಿಕೊಟ್ಟಿರುವರು ಬಹುಬೇಗ
ಅಂತರಾಷ್ಟ್ರೀಯ ಯೋಗ ದಿನವಿದು, ವಿಶ್ವ ಗುರುವಿನದೇ ನೊಗ



ಯೋಗ ಮಹಾಯೋಗಿ ಪತಂಜಲಿ ಮಹರ್ಷಿ

ಯೋಗೇನ ಚಿತ್ತಸ್ಯ ಪದೇನ ವಾಚಂ। ಮಲಂ ಶರೀರಸ್ಯ ಚ ವೈದ್ಯಕೇನ ಯೋಪಾಕರೋತ್ತಂ ಪ್ರವರಂ ಮುನೀನಾಂ। ಪತಂಜಲಿಂ ಪ್ರಾಂಜಲಿರಾನ ತೋಸ್ಮಿನ್ ಆಬಾಹು ಪುರುಷಾಕಾರಂ। ಶಂಖ ಚಕ್ರಾಸಿಧಾರಿಣಂ। ಸಹಸ್ರ ಶಿರಸಂ ಶ್ವೇತಂ। ಪ್ರಣಮಾಮಿ ಪತಂಜಲಿಂ।

ಅಂದರೆ, ಯೋಗ ಅಳವಡಿಕೆಯಿಂದ ಮನಸ್ಸಿನ ಮಾಲಿನ್ಯವನ್ನು, ವ್ಯಾಕರಣ ಮಹಾಭಾಷ್ಯದ ಮೂಲಕ ಸಂಭಾಷಣೆ ಹಾಗೂ ಬರಹದ ಮಾಲಿನ್ಯವನ್ನು, ವೈದ್ಯಶಾಸ್ತ್ರದಿಂದ ಶರೀರದ ದೋಷಗಳನ್ನು ದೂರಗೊಳಿಸಿದ, ಯೋಗದ ಹುಟ್ಟಿಗೆ ಕಾರಣರಾಗಿ ಯೋಗವನ್ನು ಪ್ರಪಂಚಕ್ಕೆ ಪರಿಚಯಿಸಿದ ಮುನಿಶ್ರೇಷ್ಠ ಪತಂಜಲಿ ಮಹರ್ಷಿಯವರಿಗೆ ಶಿರಸಾಷ್ಟಾಂಗ ಪ್ರಣಾಮಗಳನ್ನು ಅರ್ಪಿಸುವುದು ಎಂದರ್ಥ.

ಯೋಗ ಪಿತಾಮಹ ಪತಂಜಲಿ ಮಹರ್ಷಿಯವರ ಜೀವನ ರಹಸ್ಯ ಸಹಸ್ರಮಾನಗಳಿಂದ ಪ್ರತಿಯೊಬ್ಬರಲ್ಲೂ ಭಿನ್ನವಾಗಿದೆ. ಭಾರತದ ಪಂಡಿತರ ಪ್ರಕಾರ ಪತಂಜಲಿ ಮಹರ್ಷಿ ಶ್ರೀಕೃಷ್ಣಪರಮಾತ್ಮನ ಕಾಲಕ್ಕೆ ಸೇರಿದವರೆಂದು, ಇನ್ನೂ ಹಲವರ ಪ್ರಕಾರ ಕ್ರಿ.ಪೂ.4ರಿಂದ 7ನೇ ಶತಮಾನದವರೆಗೆ ಅಸ್ತಿತ್ವದಲ್ಲಿ ಇದ್ದರೆಂದು ಹೇಳಲಾಗಿದೆ. ತಮಿಳುನಾಡಿನ ಯೋಗಾಚಾರ್ಯ ಗುರು ನಂದಿದೇವರ ಎಂಟು ಮಂದಿ ಶಿಷ್ಯರಲ್ಲಿ ಪತಂಜಲಿ ಮಹರ್ಷಿಯವರು ಮೊದಲನೆಯವರು. ಇವರ ಕೃಪೆಯಿಂದಲೇ ಯೋಗವನ್ನು ಆಳವಾಗಿ ಅಭ್ಯಾಸ ಮಾಡಿದರೆಂದು ಉಲ್ಲೇಖಿಸಲಾಗಿದೆ.


ವಿಭಿನ್ನ ಅಭಿಮತ: ಪುರಾಣ ಇತಿಹಾಸಗಳ ಪ್ರಕಾರ ಹಲವಾರು ಉಲ್ಲೇಖಗಳಿದ್ದು ಅವುಗಳಲ್ಲಿ ಮೊದಲನೆಯದಾಗಿ ಅರ್ಕಿ ಅನಸೂಯ ದಂಪತಿಗಳ ಪುತ್ರನೆಂದು, ಎರಡನೆಯದಾಗಿ ಗೋಣಿಕ ಎಂಬ ತಾಯಿಯು ಸೂರ್ಯದೇವರಲ್ಲಿ ಮಗುವಿಗಾಗಿ ಪ್ರಾರ್ಥನೆ ಮಾಡಿದ ಸಂದರ್ಭದಲ್ಲಿ ಸೂರ್ಯ ದೇವನು ಮಗುವನ್ನು ಆಕೆಯ ಅಂಜಲಿ (ಹಸ್ತದ) ಮೇಲೆ ಬೀಳುವಂತೆ ಮಾಡಿದರು ಎಂಬ ಉಲ್ಲೇಖಗಳಿದ್ದು, ಈ ರೀತಿಯಾಗಿ ಮಗುವಿನ ಜನನವಾಗಿದ್ದರಿಂದ ಪತಂಜಲಿ, ಗೋಣಿಕಪುತ್ರ ಹಾಗೂ ಗೋನಾರ್ಧಿಯ ಎಂಬ ಹೆಸರು ಬಂದಿದೆ ಎಂದು ಹೇಳಲಾಗಿದೆ.

ಮೂರನೆಯ ಉಲ್ಲೇಖದಂತೆ, ಗೋನಾರ್ಥ ಎಂಬ ಮುನಿಗೆ ವರಪ್ರಸಾದವಾಗಿ ಪತಂಜಲಿ ಮಹರ್ಷಿಯವರು ಅವತರಿಸಿದರೆಂದು ಹೇಳಲಾಗಿದೆ, ಗೋನಾರ್ಥ ಮುನಿಯು ಸೂರ್ಯ ನಮಸ್ಕಾರ ಮಾಡುತ್ತಿರುವಾಗ ಆಗಸದಿಂದ ಹಸ್ತದಲ್ಲಿ ಮರಿಹಾವು ಬೀಳುತ್ತದೆ ಅದು ಬೆಳೆದ ಹಾಗೆ ಬಾಲಕನ ರೂಪತಾಳಿ 'ನಾನು ಆದಿಶೇಷ ನಿಮ್ಮ ಮಗನಾಗಿ ನನ್ನನ್ನು ಸ್ವೀಕರಿಸಿ' ಎಂದು ಗೋನಾರ್ಥ ಮುನಿಯವರಲ್ಲಿ ಬೇಡಿಕೊಂಡು ಜನ್ಮತಾಳಿದರು.

ಭಗವಂತ ಶ್ರೀಹರಿ ಕ್ಷೀರಸಾಗರದಲ್ಲಿ ಮಲಗಿ ವಿಶ್ರಮಿಸುವ ಆದಿಶೇಷನ ಮತ್ತೊಂದು ಅವತಾರ ಪತಂಜಲಿ ಮಹರ್ಷಿಗಳು ಎಂಬ ನಂಬಿಕೆ ಇದೆ. ಅಲ್ಲದೆ ಪ್ರಾಚೀನ ಗ್ರಂಥಗಳು ಸಾಮಾನ್ಯವಾಗಿ ಪತಂಜಲಿಯವರನ್ನು ಶೇಷ ಮತ್ತು ಅನಂತ ಎನ್ನುವ ಸಾವಿರ ತಲೆಯ ಸರ್ಪಗಳ ರಾಜನ ಅವತಾರವೆಂದು ಉಲ್ಲೇಖಿಸಿ, ಅರ್ಧಮಾನವ ಮತ್ತು ಇನ್ನರ್ಧ ಸರ್ಪದ ರೂಪದಲ್ಲಿ ಚಿತ್ರಿಸಲಾಗಿದೆ. ಈ ರೀತಿಯಾಗಿ ಮುನಿಶ್ರೇಷ್ಠ ಪತಂಜಲಿ ಮಹರ್ಷಿಯವರ ಜನನ ಕುರಿತಂತೆ ವಿಭಿನ್ನ ಉಲ್ಲೇಖಗಳಿವೆ.

ಪತಂಜಲಿ ಯೋಗ ಮಹತ್ವ: ಯೋಗಪಿತ ಪತಂಜಲಿ ಮಹರ್ಷಿಯವರು ಪರಿಚಯಿಸಿದ ಯೋಗವನ್ನು **ಪಾತಂಜಲ ಯೋಗ ದರ್ಶನ** ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಯೋಗದ ಅಧಿಕೃತ ಪ್ರಾಚೀನ ವ್ಯವಸ್ಥೆಯ ಸ್ಥಾಪಕ ಪತಂಜಲಿಯವರು **ಯೋಗಸೂತ್ರಗಳ** ಲೇಖಕ ಎಂದು ಕರೆಯಲಾಗುತ್ತದೆ. ಮಹರ್ಷಿಯವರು ತಮ್ಮ ಯೋಗ ಗ್ರಂಥದಲ್ಲಿ ನೂರಕ್ಕೂ ಹೆಚ್ಚಿನ ಸೂತ್ರಗಳನ್ನು ರಚಿಸಿದ್ದಾರೆ.

ಯೋಗ ಎನ್ನುವ ಪದವು ಸಂಸ್ಕೃತ ಮೂಲದ 'ಯಜ್' ಎಂಬ ಧಾತುವಿನಿಂದ ಉತ್ಪತ್ತಿಯಾಗಿದೆ. ಯಜ್ ಎಂದರೆ ಕೂಡು, ಸೇರು, ಒಂದಾಗು ಎಂದರ್ಥ. ಜೀವಾತ್ಮನು ಪರಮಾತ್ಮನನ್ನು ಕೂಡುವುದು. 'ಯಜ್ಯತೇ ಸಮಾಧೀಯತೇ ಅನೇನ ಇತಿಯೋಗಃ' **ಜೀವಾತ್ಮವನ್ನು ಯಾವುದು ಆತ್ಮಸಾಕ್ಷಾತ್ಕಾರದೆಡೆಗೆ ಸೇರಿಸುವುದೋ ಅದು ಯೋಗ. ಆತ್ಮನು ಪರಮಾತ್ಮನಲ್ಲಿ ಒಂದಾಗುವುದು ಯೋಗದ ಮೂಲ ಉದ್ದೇಶವಾಗಿದೆ.**



ಯೋಗವೆಂದರೆ,

'ಯೋಗಃ ಚಿತ್ತವೃತ್ತಿ ನಿರೋಧಃ' ಚಿತ್ತದ ವೃತ್ತಿಗಳನ್ನು ಸಂಪೂರ್ಣ ತಡೆಹಿಡಿದು ನಿಲ್ಲಿಸಿ ಏಕಾಗ್ರತೆ ಸಾಧಿಸುವುದು, **'ಯೋಗಃ ಕರ್ಮಸು ಕೌಶಲಂ'** ಕೌಶಲಪೂರ್ಣವಾದ ಕೆಲಸವೇ ಯೋಗ, **'ಸಮತ್ವಂ ಯೋಗ ಉಚ್ಯತೇ'** ಮನಸ್ಸಿನ ಸಮಸ್ಥಿತಿಯನ್ನು ಸಾಧಿಸುವುದು ಹಾಗೂ ನೋವು ದುಃಖಗಳ ಸ್ಪರ್ಶದಿಂದ ಬಿಡುಗಡೆಯಾಗುವುದೇ ಯೋಗವೆಂದು, ಒಟ್ಟಾರೆಯಾಗಿ ಪ್ರತಿಯೊಬ್ಬರ ಆತ್ಮವು ಜೀವನದ ಹಾದಿಯಲ್ಲಿ ಅನಂತ ಚೇತನದತ್ತ ಸಾಗಬೇಕೆಂದು ಯೋಗಪಿತ ಪತಂಜಲಿಯವರು ಯೋಗದ ವ್ಯಾಖ್ಯಾನವನ್ನು ಅರ್ಥಗರ್ಭಿತವಾಗಿ ತಿಳಿಸಿಕೊಟ್ಟಿದ್ದಾರೆ.

ಪತಂಜಲಿ ಯೋಗಸೂತ್ರ ಮತ್ತು ಅಷ್ಟಾಂಗಯೋಗ: ಯೋಗಪಿತ ಪತಂಜಲಿಯವರು ಪ್ರಾಚೀನ ಕಾಲದ ಶ್ರೇಷ್ಠ ಆಧ್ಯಾತ್ಮಿಕ ನಾಯಕರಾಗಿದ್ದು, ಆಧ್ಯಾತ್ಮಿಕ ಚೈತನ್ಯವನ್ನು ಯೋಗ ಸೂತ್ರಗಳಲ್ಲಿ ಬಣ್ಣಿಸಿದ್ದಾರೆ. ಯೋಗಸೂತ್ರದ ಸಂಸ್ಥಾಪಕರಾದ ಅವರು ಯೋಗಸೂತ್ರ ವ್ಯಾಕರಣ ಭಾಷ್ಯಗಳನ್ನು ರಚಿಸಿದ್ದಾರೆ. ಯೋಗಸೂತ್ರವು ಶಾಸ್ತ್ರೀಯಯೋಗ ತತ್ವಶಾಸ್ತ್ರದ ಪ್ರಮುಖ ಗ್ರಂಥಗಳಲ್ಲಿ ಒಂದಾಗಿದೆ.

ಯೋಗಸೂತ್ರ: ಯೋಗಸೂತ್ರವು ನಾಲ್ಕು ಅಧ್ಯಾಯಗಳಲ್ಲಿ ರಚಿಸಲ್ಪಟ್ಟಿದ್ದು, 196/195 ಸೂತ್ರಗಳು ಹಾಗು 8 ಅಷ್ಟಾಂಗ ಯೋಗಗಳನ್ನು ಒಳಗೊಂಡಿದೆ. ಯೋಗಸೂತ್ರಗಳನ್ನು ಕ್ರಿ.ಪೂ.500ರಿಂದ ಕ್ರಿ.ಪೂ.200ರ ಅವಧಿಯಲ್ಲಿ ಅಳವಡಿಸಲಾಯಿತು. ಪತಂಜಲಿ ಯೋಗಸೂತ್ರವು ಸಮಾಧಿ ಪಾದ, ವಿಭೂತಿ ಪಾದ, ಸಾಧನ ಪಾದ ಹಾಗೂ ಕೈವಲ್ಯಪಾದ 4 ಅಧ್ಯಾಯಗಳು, ಹಾಗೂ ಅಷ್ಟಾಂಗಯೋಗವು ಯಮ, ನಿಯಮ, ಆಸನ, ಪ್ರಾಣಯಾಮ, ಪ್ರತ್ಯಾಹಾರ, ಧರಣ, ಸಮಾಧಿಗಳನ್ನು ಒಳಗೊಂಡಿದೆ.

- **ಸಮಾಧಿ ಪಾದ :** ಪತಂಜಲಿ ಯೋಗಸೂತ್ರಗಳಲ್ಲಿ ಮೊದಲ ಅಧ್ಯಾಯವು ಸಮಾಧಿ ಪಾದವಾಗಿದೆ. ಸಮಾಧಿಪಾದದಲ್ಲಿ ಯೋಗದ ಅರ್ಥ ವಿವರಣೆ, ಉದ್ದೇಶ ಹಾಗೂ ಯೋಗವನ್ನು ಮಾಡುವ ವಿಧಾನಗಳನ್ನು ವಿವರಿಸಲಾಗಿದೆ.
- **ಸಾಧನಾ ಪಾದ :** ಪತಂಜಲಿ ಯೋಗಸೂತ್ರಗಳಲ್ಲಿ ಎರಡನೇ ಅಧ್ಯಾಯವು ಸಾಧನಾ ಪಾದವಾಗಿದೆ. ಸಾಧನಾ ಪಾದದಲ್ಲಿ ಯೋಗದ ಗುರಿ ಹಾಗೂ ಉದ್ದೇಶಗಳನ್ನು ಸಾಧಿಸುವ ಪ್ರಾಯೋಗಿಕ ವಿಧಾನಗಳನ್ನು ತಿಳಿಸಲಾಗಿದೆ ಜೊತೆಗೆ ಅಷ್ಟಾಂಗಯೋಗದ ವಿವರಣೆಯನ್ನು ಉಲ್ಲೇಖಿಸಲಾಗಿದೆ.
- **ವಿಭೂತಿ ಪಾದ :** ಪತಂಜಲಿ ಯೋಗಸೂತ್ರದಲ್ಲಿ ಮೂರನೆಯ ಅಧ್ಯಾಯವು ವಿಭೂತಿ ಪಾದವಾಗಿದೆ. ವಿಭೂತಿ ಪಾದದಲ್ಲಿ ಯೋಗ ಅಭ್ಯಾಸದಿಂದ ಪಡೆದ ಫಲಿತಾಂಶಗಳು ಹಾಗೂ ಶಕ್ತಿ ಮತ್ತು ಅಭಿವ್ಯಕ್ತಿಗಳ ಬಗ್ಗೆ ವಿವರಣೆ ನೀಡಲಾಗಿದೆ.
- **ಕೈವಲ್ಯ ಪಾದ :** ಪತಂಜಲಿ ಯೋಗಸೂತ್ರದ ನಾಲ್ಕನೆಯ ಅಧ್ಯಾಯವಾಗಿದೆ. ಸಾಧನಾ ಪಾದವು ಯೋಗ ಅಭ್ಯಾಸದಿಂದ ಸಾಧನೆಯನ್ನು ಭಕ್ತಿಮಾರ್ಗ, ಕರ್ಮದ ಹಾದಿ ಮತ್ತು ಜ್ಞಾನದ ಹಾದಿಯಿಂದ ಸಾಧಿಸಬಹುದೆಂದು ಅರ್ಥಪೂರ್ಣವಾಗಿ ವಿವರಿಸಲಾಗಿದೆ.

ಅಷ್ಟಾಂಗಯೋಗ

ಪತಂಜಲಿ ಮಹರ್ಷಿಯವರು ಮನುಷ್ಯನ ಪೂರ್ಣ ಕಲ್ಯಾಣಕ್ಕಾಗಿ ಶಾರೀರಿಕ, ಮಾನಸಿಕ ಮತ್ತು ಆತ್ಮದ ಶುದ್ಧಿಗಾಗಿ ಮನಸ್ಸಿನಲ್ಲಿ ಬರುವ ಚಿಂತೆಯನ್ನು ದೂರ ಮಾಡಲು ಎಂಟು ಅಂಗದ ಯೋಗ ವಿಧಾನಗಳನ್ನು ರಚಿಸಿದ್ದಾರೆ. ಯೋಗಸೂತ್ರಗಳಿಗೆ ಸಾಧನ ರೂಪವಾಗಿ ಯೋಗ ಸೂತ್ರದ ಎರಡನೇ ಅಧ್ಯಾಯ ಸಾಧನಾ ಪಾದದಲ್ಲಿ ಅಷ್ಟಾಂಗಯೋಗದ ಮಹತ್ವವನ್ನು ವಿವರಿಸಿದ್ದಾರೆ. ಅಂಗವೆಂದರೆ ಅಶುದ್ಧವಾದ ಚಿತ್ತಕಲ್ಮಶಗಳನ್ನು ನಾಶ ಮಾಡಿ ವಿವೇಕ ಖ್ಯಾತಿಯನ್ನು ಉಂಟು ಮಾಡುವುದಕ್ಕೆ ನೆರವಾಗುವ ಸಾಧನವಾಗಿದೆ.

- **ಯಮ:** ಯಮ ನಿಯಮಸ್ತುಮಾಲಾಃ ಎಂಬುದು ಯಮ ಯೋಗದ ಸೂತ್ರವಾಗಿದೆ, ಯಮಸೂತ್ರವು 5 ನಿಯಮಗಳನ್ನು ಪಾಲಿಸಬೇಕೆಂದು ತಿಳಿಸುತ್ತದೆ. ಅವುಗಳೆಂದರೆ, ಕೆಟ್ಟ ಪ್ರವೃತ್ತಿಗಳನ್ನು ತಡೆಯುವುದು, ಅಹಿಂಸಾ ತತ್ವ ಪಾಲನೆ, ಇತರರ ವಸ್ತುಗಳನ್ನು ಕದಿಯದೇ ಇರುವುದು, ನಿಷ್ಠಾವಂತನಾಗಿರುವುದು ಹಾಗೂ ಬ್ರಹ್ಮಚರ್ಯದ ಪಾಲನೆ.
- **ನಿಯಮ:** ನಿಯಮ ಸೂತ್ರವು 6 ಸೂತ್ರಗಳ ಪಾಲನೆಯನ್ನು ತಿಳಿಸುತ್ತದೆ. ಶೌಚ–ವ್ಯಕ್ತಿಯು ಕಾಯಾ, ವಾಚಾ, ಮನಸಾ ಶುದ್ಧತೆಯ ಪಾಲನೆ ಹಾಗೂ ತೃಪ್ತಿ–ಇರುವುದರಲ್ಲೇ ಸಂತೋಷಪಟ್ಟು ಸುಖ–ದುಃಖಗಳನ್ನು ಸಮನಾಗಿ ಅಳವಡಿಸಿ ಸ್ವಾಧ್ಯಾಯ–ಶಾಸ್ತ್ರದ ಅಧ್ಯಯನದೊಂದಿಗೆ ಆಧ್ಯಾತ್ಮಿಕತೆಯಲ್ಲಿ ತೊಡಗಿ ಭಗವಂತನಲ್ಲಿ ಸರ್ವಸಮರ್ಪಣೆಯಾಗುವುದಕ್ಕೆ ನಿಯಮಗಳ ಪಾಲನೆ ಅತ್ಯಗತ್ಯವಾಗಿದೆ.
- **ಆಸನ:** ಸ್ಥಿರ ಸುಖಾಸನಮ್ ಎಂಬುದು ಆಸನ ಯೋಗದ ಸೂತ್ರವಾಗಿದೆ. ಸುಖಕರವಾದ ಆಸನದಲ್ಲಿ ಬಹಳಕಾಲ ಸ್ಥಿರವಾಗಿ ಇರುವುದಾಗಿದೆ. ಆಸನಗಳು ದೇಹವನ್ನು ಶಕ್ತಿಯುತವಾಗಿಸಲು ಮತ್ತು ಮೃದುವಾಗಿಸಲು, ಸ್ಥಿರತೆ ಹಾಗೂ ಆತ್ಮವಿಶ್ವಾಸವನ್ನು ಗಳಿಸಲು ಸಹಕಾರಿಯಾಗಿದೆ.
- **ಪ್ರಾಣಾಯಾಮ:** ಪ್ರಾಣಾಯಾಮ ಎಂಬುದು ಶ್ವಾಸ ಪ್ರಶ್ವಾಸ ಕ್ರಿಯೆಗಳನ್ನು ನಿಲ್ಲಿಸುವುದಾಗಿದೆ. ಈ ಯೋಗವು ಉಸಿರಾಟದ ಪ್ರಮುಖ ಘಟ್ಟವಾಗಿದೆ. ಪ್ರಾಣಾಯಾಮವು ಉಸಿರಾಟದ ಚಕ್ರದಲ್ಲಿ ಸಮಯ, ಉಸಿರಾಟದ ನಿರ್ಬಂಧ ಮತ್ತು ಉಸಿರಾಟದ ವಿಸ್ತರಣೆಯನ್ನು ಒಳಗೊಂಡಿದೆ.
- **ಪ್ರತ್ಯಾಹಾರ:** ಪ್ರತ್ಯಾಹಾರವು ಇಂದ್ರಿಯಗಳ ನಿಯಂತ್ರಣ ಪಾಂಡಿತ್ಯವನ್ನು ಹೊಂದಿರುವುದಾಗಿದೆ. ಹೊರ ಮುಖವಾದ ಇಂದ್ರಿಯಗಳನ್ನು ತಡೆಯುವುದರ ಮೂಲಕ ಅಂತರ್ಮುಖಿಯಾಗಿಸಿ ವ್ಯಕ್ತಿಯು ತನ್ನ ಮತ್ತು ಆಂತರಿಕ ಸಂವೇದನೆಗಳ ಮೇಲೆ ಏಕಾಗ್ರತೆಯನ್ನು ಕೇಂದ್ರಿಕರಿಸಿ ಬಾಹ್ಯ ವಿಷಯಗಳತ್ತ ಗಮನ ನೀಡದೆ ಇರಲು ಸಹಕಾರಿಯಾಗಿದೆ.
- **ಧಾರಣ :** ಧಾರಣ ಎಂದರೆ ಏಕಾಗ್ರತೆ ಎಂದರ್ಥ. ಅಂತರಂಗದ (ನಾಭಿ, ಹೃದಯ ಇತ್ಯಾದಿ) ಯಾವುದಾದರೂ ಒಂದು ವಸ್ತುವಿನ ಮೇಲೆ ಚಿತ್ತವನ್ನು ಕೇಂದ್ರೀಕರಿಸಿ ಯೋಗವನ್ನು ಮಾಡಲು ಪ್ರೇರೇಪಿಸುವುದಾಗಿದೆ.
- **ಧ್ಯಾನ:** ತತ್ರ ಪತ್ಯಯೈಕ ತಾನತಾ ಧ್ಯಾನಂ ಎಂಬುದು ಯೋಗದ ಸೂತ್ರವಾಗಿದೆ. ಧ್ಯಾನಿಸಬೇಕಾದ ವಸ್ತುವನ್ನು ಏಕಾಗ್ರ ಚಿತ್ತದಿಂದ ಧ್ಯಾನಿಸುವುದಾಗಿದೆ.
- **ಸಮಾಧಿ :** ಚಿತ್ತದ ಏಕಾಗ್ರತೆಯ ಕೊನೆಯ ಹಂತವಾಗಿದೆ. ಚಿತ್ತ (ಮನಸ್ಸು) ಧ್ಯಾನಿಸುವ ವಸ್ತುವಿನಲ್ಲಿ ಲೀನವಾಗಿ ಹೊರ ಜಗತ್ತಿನ ಅರಿವು ಇಲ್ಲದಂತೆ ಸಂಪೂರ್ಣ ಪ್ರಜ್ಞೆಯ ಸ್ಥಿತಿಗೆ ತಲುಪುವುದಾಗಿದೆ.

ಈ ರೀತಿಯಾಗಿ 'ಜೀವಾತ್ಮ ಪರಮಾತ್ಮ ಐಕ್ಯಾವಸ್ಥಾ ಯೋಗಃ' ಅಂದರೆ ಜೀವಾತ್ಮವನ್ನು ಪರಮಾತ್ಮನಲ್ಲಿ ಸೇರಿಸುವ ಪ್ರಕ್ರಿಯೆ, ಇಂತಹ ಯೋಗದ ಸಾಧನೆಗೆ ಅತೀ ಸರಳವಾಗಿ ಜಗತ್ತಿನ ಎಲ್ಲೆಡೆಯು ಆಚರಣೆಯಲ್ಲಿ ಇರುವ ಹಾಗೆ ಯೋಗಸೂತ್ರಗಳನ್ನು ಹಾಗೂ ಅಷ್ಟಾಂಗಯೋಗದ ವಿಧಾನಗಳನ್ನು ತಿಳಿಯಪಡಿಸಿದ ಸಿದ್ಧಪುರುಷ ಯೋಗಪಿತ ಪತಂಜಲಿ ಮಹರ್ಷಿಯವರು ಉತ್ತಮವಾದ ಕೊಡುಗೆಯನ್ನು ಸಮಾಜಕ್ಕೆ ನೀಡಿ ಯೋಗ ಎಂಬ ಧ್ಯಾನ ಸಾಧನೆಯ ಅಂಶವನ್ನು ಪ್ರತಿಯೊಬ್ಬರು ತಿಳಿಯುವ ಮಹಾಯೋಗವನ್ನು ಕರುಣಿಸಿದ ಮಹಾಯೋಗಿ ಎಂದರೆ ತಪ್ಪಾಗಲಾರದು.

–ಪೂಜಾಮಠದ್, ಮೈಸೂರು

ಮೈಸೂರು ಜಿಲ್ಲಾಧಿಕಾರಿ ಕಚೇರಿ ಹಳೆ ಕಟ್ಟಡವನ್ನು ಮೈಸೂರು ವಿಶ್ವವಿದ್ಯಾಲಯಕ್ಕೆ ನೀಡುವುದು ಸೂಕ್ತ

● ಖ್ಯಾತ ಲೇಖಕ ಪ್ರೊ. ಕೆ.ಎಸ್.ಭಗವಾನ್ ಮನವಿ ● ಈ ಸಂಬಂಧ ಬಹಳ ಹಿಂದೆಯೇ ಮಾಜಿ ಮುಖ್ಯಮಂತ್ರಿ ದಿವಂಗತ ಕೆಂಗಲ್ ಹನುಮಂತಯ್ಯರ ಇಂಗಿತ ಪ್ರಸ್ತಾಪ



ಮೈಸೂರು, ಜೂ.9–ಮೈಸೂರು ಜಿಲ್ಲಾಧಿಕಾರಿಗಳ ಕಚೇರಿಯನ್ನು ಸಿದ್ಧಾರ್ಥನಗರದ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಿರುವ ಹಿನ್ನೆಲೆಯಲ್ಲಿ ಹಳೇ ಕಟ್ಟಡವನ್ನು ಮಾಜಿ ಮುಖ್ಯಮಂತ್ರಿ ದಿವಂಗತ ಕೆಂಗಲ್ ಹನುಮಂತಯ್ಯನವರ ಆಶಯದಂತೆ ಮೈಸೂರು ವಿಶ್ವವಿದ್ಯಾಲಯಕ್ಕೆ ನೀಡಬೇಕೆಂದು ಖ್ಯಾತ ಲೇಖಕ ಪ್ರೊ. ಕೆ.ಎಸ್.ಭಗವಾನ್ ಮನವಿ ಮಾಡಿದ್ದಾರೆ.

ಕೆಂಗಲ್ ಹನುಮಂತಯ್ಯನವರು ಒಮ್ಮೆ ಮೈಸೂರಿನ ಜಲದರ್ಶಿನಿಯಲ್ಲಿ ವಾಸ್ತವ್ಯ ಹೂಡಿದ್ದಾಗ ತಮ್ಮ ಜೊತೆಯಲ್ಲೇ ಊಟ ಮಾಡುವಂತೆ ತಮಗೆ (ಕೆ.ಎಸ್.ಭಗವಾನ್) ಆಹ್ವಾನಿಸಿದ್ದರು. ಅದರಂತೆ ನಾನು ಹೋಗಿದ್ದೆ. ಊಟದ ನಂತರ ಹೊರಗೆ ಅಡ್ಡಾಡಿಕೊಂಡು ಬರೋಣ ಎಂದು ನಾವಿಬ್ಬರೂ ಹೋದಾಗ, ಹಳೇ ಡಿಸಿ ಕಚೇರಿ (ಅಠಾರ ಕಚೇರಿ) ಬಳಿ ಬಂದಾಗ ಕೆಂಗಲ್ ಹನುಮಂತಯ್ಯನವರು **'ದಿಸ್ ಅಠಾರ ಕಚೇರಿ ಇಸ್ ಔಟ್ ಆಫ್ ಪ್ಲೇಸ್ ಹಿಂಯರ್'**



ಕೆಂಗಲ್ ಹನುಮಂತಯ್ಯ

(ಈ ಅಠಾರ ಕಚೇರಿ ಈ ಸ್ಥಳದಲ್ಲಿರುವುದು ಉಚಿತ ವಲ್ಲ) ಎಂದರು. 'ಅಂದ್ರೆ ಹೇಗೆ ಸಾರ್?' ಎಂದು ನಾನು ಪ್ರಶ್ನಿಸಿದಾಗ ಕೆಂಗಲ್‌ರು **'ನೋಡಿ, ಇದೆಲ್ಲಾ ಯೂನಿವರ್ಸಿಟಿ ಆವರಣ. ಇಲ್ಲಿ ಕಂದಾಯ ಕಚೇರಿ ಇರುವುದು ಸರಿಯಲ್ಲ. ಇದನ್ನು ವಿಶ್ವವಿದ್ಯಾಲಯಕ್ಕೆ ಕೊಟ್ಟುಬಿಡೋಣ ಅಂತ ಯೋಚಿಸಿದ್ದೆ. ಅಷ್ಟರಲ್ಲಿ ನನ್ನ ಮುಖ್ಯಮಂತ್ರಿ ಪದವಿ ಹೋಯ್ತು'** ಎಂದು ಹೇಳಿದ್ದಾಗಿ ಭಗವಾನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಾವು ಸಂಪಾದಿಸಿ, 2006ರಲ್ಲಿ ಮೊದಲ ಮುದ್ರಣ ಹಾಗೂ 2017ರಲ್ಲಿ ಎರಡನೇ ಮುದ್ರಣ ಕಂಡ 'ರಾಜರ್ಷಿ ಕೆಂಗಲ್ಲರ ಭಾಷಣಗಳು' ಕೃತಿಯಲ್ಲಿ ಇದನ್ನು ದಾಖಲಿಸಿದ್ದೇನೆ ಎಂದಿರುವ ಭಗವಾನರು, ಈ ದಿಸೆಯಲ್ಲಿ ಮೈಸೂರು ವಿವಿ ಆವರಣದಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿಯ ಹಳೇ ಕಟ್ಟಡವನ್ನು ಮೈಸೂರು ವಿವಿಗೆ ಸರ್ಕಾರ ಕೊಡುವುದರಿಂದ ಅದರ ಶ್ರೇಯೋಭಿವೃದ್ಧಿಗೆ ಅನುಕೂಲವಾಗುತ್ತದೆ ಈ ನಿಟ್ಟಿನಲ್ಲಿ ಸರ್ಕಾರ ಉದಾರವಾಗಿ ನಡೆದುಕೊಳ್ಳಬೇಕು ಎಂದು ಅವರು ಮನವಿ ಮಾಡಿದ್ದಾರೆ.



ಹೊಸ ಕಟ್ಟಡಕ್ಕೆ ಜಿಲ್ಲಾಧಿಕಾರಿಗಳ ಕಚೇರಿಯನ್ನು ಸ್ಥಳಾಂತರಿಸಿರುವುದರಿಂದ ಹಳೆ ಪಾರಂಪರಿಕ ಕಟ್ಟಡವನ್ನು ಕಂದಾಯ ಇಲಾಖೆಯ ದಾಖಲೆಗಳ ವಸ್ತು ಸಂಗ್ರಹಾಲಯವನ್ನಾಗಿ ಮಾಡುವ ಉದ್ದೇಶವಿದೆ. ಇದರ ಬಗ್ಗೆ ಸರ್ಕಾರಕ್ಕೆ ಬರೆದು, ಅನುಮತಿ ದೊರೆತರೆ ಅದಕ್ಕೆ ವ್ಯವಸ್ಥೆ ಮಾಡುವುದಾಗಿ ಜಿಲ್ಲಾಧಿಕಾರಿ ಡಾ. ರಾಜೇಂದ್ರ ಗುರುವಾರವಷ್ಟೇ ಅಭಿಪ್ರಾಯಪಟ್ಟಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.9– ಮೈಸೂರಿನ ಬೋಗಾದಿ ಬಸವ ಬಳಗ ಸೇವಾ ಟ್ರಸ್ಟ್ 2022–23ನೇ ಸಾಲಿನ ಶೈಕ್ಷಣಿಕ ವರ್ಷದ ರಾಜ್ಯ ಹಾಗೂ ಸೆಂಟ್ರಲ್ ಸಿಲಬಸ್ ಪಠ್ಯಕ್ರಮ ಆಧಾರಿತವಾಗಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಗಳಿಸಿ ತೇರ್ಗಡೆ ಹೊಂದಿದ ಲಿಂಗಾಯತ ಸಮುದಾಯದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ಜೂ.20ರೊಳಗೆ ಟ್ರಸ್ಟ್ ಕಚೇರಿಯಲ್ಲಿ ಸಲ್ಲಿಸಬಹುದು. ಮಾಹಿತಿಗೆ ದೂ. 9449007032 ಸಂಪರ್ಕಿಸಬಹುದು.

ಡಬ್ಲ್ಯೂಟಿಸಿ ಫೈನಲ್: ಆಸೀಸ್‌ಗೆ 296 ರನ್ ಮುನ್ನಡೆ

ಓವಲ್, ಜೂ.9– ಬೌಲರ್‌ಗಳ ಸಂಘಟಿತ ಪ್ರದರ್ಶನದ ನೆರವಿನಿಂದ ಆಸ್ಟ್ರೇಲಿಯಾ, ಭಾರತದ ವಿರುದ್ಧದ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯದಲ್ಲಿ 296 ರನ್‌ಗಳ ಮುನ್ನಡೆ ಸಾಧಿಸಿದೆ.

5 ವಿಕೆಟ್‌ಗೆ 151ರನ್‌ಗಳಿಂದ 3ನೇ ದಿನದಾಟ ಆರಂಭಿಸಿದ ಭಾರತ ನಿನ್ನೆಯ ಮೊತ್ತಕ್ಕೆ 1 ಸೇರಿಸುವಷ್ಟರಲ್ಲೇ 5 ರನ್ ಗಳಿಸಿದ್ದ ಶ್ರೀಕರ್ ಭರತ್ ವಿಕೆಟ್ ಕಳೆದುಕೊಂಡಿತು. ಈ ವೇಳೆ 7 ವಿಕೆಟ್‌ಗೆ ಜೊತೆಗೂಡಿದ ಅಜಿಂಕ್ಯಾ ರಹಾನೆ ಹಾಗೂ ಶಾರ್ದೂಲ್ ಠಾಕೂರ್ 109ರನ್‌ಗಳ ಅಮೋಘ ಜೊತೆಯಾಟವಾಡುವ ಮೂಲಕ ತಂಡವನ್ನು ಫಾಲೋಆನ್‌ನಿಂದ ಪಾರು ಮಾಡಿದರು. ಆಸೀಸ್ ಬೌಲರ್‌ಗಳನ್ನು ಸಮರ್ಥವಾಗಿ ಎದುರಿಸಿದ ತಂಡದ ಮೊತ್ತವನ್ನು 250ರ ಗಡಿ ದಾಟಿಸಿದರು. ಆದರೆ ಉತ್ತಮವಾಗಿ ಆಡುತ್ತಿದ್ದ ಅಜಿಂಕ್ಯಾ ರಹಾನೆ ಭೋಜನದ ವಿರಾಮದ ಬಳಿಕ ತಾಳ್ಮೆ ಕಳೆದುಕೊಂಡು 89 ರನ್‌ಗಳಿಗೆ ವಿಕೆಟ್ ಒಪ್ಪಿಸಿದರು. ನಂತರ ಬಂದ ಉಮೇಶ್ ಯಾದವ್ 5 ರನ್ ಗಳಿಸಿ




ನಿರ್ಗಮಿಸಿದರು. ಮತ್ತೊಂದೆಡೆ ಅರ್ಧಶತಕ ಸಿಡಿಸಿದ ಶಾರ್ದೂಲ್ ಠಾಕೂರ್ ಸಂಭ್ರಮಿಸಿದರು. ಆದರೆ 51ರನ್ ಗಳಿಸಿದ್ದ ವೇಳೆ ವಿಕೆಟ್ ಒಪ್ಪಿಸಿದರು. ಉಳಿದಂತೆ ಮೊಹಮ್ಮದ್ ಶಮಿ 13ರನ್ ಗಳಿಸಿದರು. ಆಸ್ಟ್ರೇಲಿಯಾ ಪರ ಬೌಲಿಂಗ್‌ನಲ್ಲಿ ನಾಯಕ ಪ್ಯಾಟ್ ಕಮ್ಮಿನ್ಸ್ 3, ಸ್ಟಾರ್ಕ್, ಬೋಲೆಂಡ್, ಕ್ಯಾಮರೂನ್ ಗ್ರೀನ್ ತಲಾ 2, ನಾಥನ್ ಲಿಯಾನ್ 1 ವಿಕೆಟ್ ಉರುಳಿಸಿದರು.

173 ರನ್ ಮುನ್ನಡೆಯೊಂದಿಗೆ ದ್ವಿತೀಯ ಇನ್ನಿಂಗ್ಸ್ ಆರಂಭಿಸಿರುವ ಆಸ್ಟ್ರೇಲಿಯಾ 3ನೇ ದಿನದಂತ್ಯಕ್ಕೆ 4 ವಿಕೆಟ್ ನಷ್ಟಕ್ಕೆ 123ರನ್ ಗಳಿಸಿದೆ. ಆ ಮೂಲಕ 296 ರನ್‌ಗಳ ಭರ್ಜರಿ ಮುನ್ನಡೆ ಗಳಿಸಿದೆ. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಡೇವಿಡ್ ವಾರ್ನರ್ 1, ಉಸ್ಮಾನ್ ಖವಾಜ 13ರನ್ ಗಳಿಸಿ ಬಹು ಬೇಗ ನಿರ್ಗಮಿಸಿದರು. ನಂತರ ಬಂದ ಸ್ಟೀವನ್ ಸ್ಮಿತ್ 34, ಟ್ರಾವಿಸ್ ಹೆಡ್ 18 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಭಾರತದ ಪರ ರವೀಂದ್ರ ಜಡೇಜಾ 2, ಉಮೇಶ್ ಯಾದವ್, ಮೊಹಮ್ಮದ್ ಸಿರಾಜ್ ತಲಾ ಒಂದೊಂದು ವಿಕೆಟ್ ಉರುಳಿಸಿದ್ದಾರೆ. ಉಳಿದಂತೆ ಮಾರ್ನಸ್ ಲ್ಯಾಬುಸ್ಚಾಗ್ನೆ 41, ಗ್ರೀನ್ 7ರನ್ ಗಳಿಸಿ ನಾಲ್ಕನೇ ಸಿಸಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾಗಿ ಬೋಸ್‌ರಾಜ್ ನೇಮಕ



ಮಡಿಕೇರಿ, ಜೂ.9– ಕೊಡಗು ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ರಾಜ್ಯ ಸರ್ಕಾರ ಎನ್.ಎಸ್. ಬೋಸರಾಜ್ ಅವರನ್ನು ನೇಮಕ ಮಾಡಿದೆ. ಎನ್.ಎಸ್. ಬೋಸರಾಜ್ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಪರಮಾಪ್ತ ವರ್ಗದಲ್ಲಿ ಗುರುತಿಸಿಕೊಂಡಿದ್ದಾರೆ. ಬೋಸರಾಜ್ ಅವರು ಪ್ರಸ್ತುತ ಕರ್ನಾಟಕ ಸರ್ಕಾರದಲ್ಲಿ ಸಣ್ಣ ನೀರಾವರಿ, ಗಣಿಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆಗಳ ಸಚಿವರಾಗಿದ್ದಾರೆ. ಇವರು ವಿಧಾನ ಸಭೆ ಮತ್ತು ವಿಧಾನಪರಿಷತ್ ಸದಸ್ಯರಲ್ಲದಿದ್ದರೂ ಸಚಿವ ಸ್ಥಾನ ಪಡೆದಿರುವುದು ವಿಶೇಷ.

ಈ ಹಿಂದಿನ ಬಿಜೆಪಿ ಸರಕಾರದ ಅವಧಿಯಲ್ಲೂ ಕೆಲವು ಮಂದಿ ಹೊರಗಿನ ಶಾಸಕರನ್ನು ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ನೇಮಿಸಲಾಗಿತ್ತು ಇದೀಗ ಮತ್ತೆ ಹೊರ ಜಿಲ್ಲೆಗಳ ಶಾಸಕರೇ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾಗುವ 'ಭಾಗ್ಯ' ಪಡೆದಿದ್ದಾರೆ ಎಂಬ ಮಾತುಗಳು ಸಾರ್ವಜನಿಕ ವಲಯದಿಂದ ಕೇಳಿ ಬರುತ್ತಿದೆ.

ಆಸ್ಪತ್ರೆಯಲ್ಲಿದ್ದ ತಾಯಿಯನ್ನು ನೋಡಲು ಹೋಗುತ್ತಿದ್ದ ಪುತ್ರ ರಸ್ತೆ ಅಪಘಾತದಲ್ಲಿ ಸಾವು

ಹಿಂಬದಿ ಸವಾರನಿಗೂ ಗಾಯ

ಮಡಿಕೇರಿ, ಜೂ.9– ಆಸ್ಪತ್ರೆಗೆ ದಾಖಲಾಗಿದ್ದ ತಾಯಿಯನ್ನು ನೋಡಲು ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದ ಯುವಕನೋರ್ವ ಅಪಘಾತದಲ್ಲಿ ಮೃತಪಟ್ಟ ದಾರುಣ ಘಟನೆ ನಾಪೋಕ್ಲು–ಮೂರ್ನಾಡು ರಸ್ತೆಯಲ್ಲಿ ಶುಕ್ರವಾರ ಬೆಳಗ್ಗೆ ಸಂಭವಿಸಿದೆ. ನಾಪೋಕ್ಲುವಿನ ಇಂದಿರಾನಗರ ನಿವಾಸಿ ದಿವಂಗತ ರಾಜು ಮತ್ತು ಕಮಲ ದಂಪತಿ ಪುತ್ರ ಅಪ್ಪಾಜಿ (19–ನವೀನ) ಎಂಬಾತನೇ ಮೃತಪಟ್ಟ ದುರ್ದೈವಿಯಾಗಿದ್ದಾನೆ.



ಅಪ್ಪಾಜಿ

ಘಟನೆ ವಿವರ: ನಾಪೋಕ್ಲುವಿನ ಪೆಟ್ರೋಲ್ ಬಂಕ್ ಒಂದರಲ್ಲಿ ಅಪ್ಪಾಜಿ ಕೆಲಸ ಮಾಡುತ್ತಿದ್ದು, ಯುವಕನ ತಾಯಿ ಕಮಲ ಎಂಬ ವರು ಕಳೆದ ಕೆಲವು ದಿನಗಳಿಂದ ಅನಾರೋಗ್ಯ ಪೀಡಿತರಾಗಿ ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದರು. ಶುಕ್ರವಾರ ಬೆಳಗ್ಗೆ ಅಪ್ಪಾಜಿ ತನ್ನ ತಾಯಿಯನ್ನು ನೋಡಲು ಸ್ನೇಹಿತ ಸುದೀಪ್ ಎಂಬಾತನೊಂದಿಗೆ ಬೈಕ್‌ನಲ್ಲಿ ಮಡಿಕೇರಿ ಕಡೆಗೆ ಬರುತ್ತಿದ್ದ ಸಂದರ್ಭ ಹೊದವಾಡ ಗ್ರಾಮದ ತಿರುವಿನಲ್ಲಿ ಮೂರ್ನಾಡಿನಿಂದ ನಾಪೋಕ್ಲುವಿಗೆ ಬರುತ್ತಿದ್ದ ಮಾರುತಿ ಆಲ್ಟೊ ಕಾರು ಮತ್ತು ಬೈಕ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ಅಪಘಾತದ ರಭಸಕ್ಕೆ ತಲೆಗೆ ಗಂಭೀರ ಪೆಟ್ಟಾದ ಪರಿಣಾಮ ಅಪ್ಪಾಜಿ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಹಿಂಬದಿ ಸವಾರ ಕೋಕೇರಿ ಗ್ರಾಮದ ಸತೀಶ್ ಅವರ ಪುತ್ರ ಸುದೀಪ್ (19) ಎಂಬಾತನ ತಲೆ ಮತ್ತು ಕಾಲಿಗೆ ಭಾಗಕ್ಕೆ ಗಂಭೀರ ಗಾಯಗಳಾಗಿದ್ದು, ನಾಪೋಕ್ಲು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ನೀಡಿ ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸ ಲಾಯಿತು. ಬಳಿಕ ವೈದ್ಯರ ಶಿಫಾರಸಿನ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಅಪಘಾತದ ಸ್ಥಳಕ್ಕೆ ನಾಪೋಕ್ಲು ಠಾಣಾಧಿಕಾರಿ ಮಂಜುನಾಥ್ ಹಾಗೂ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಕುರಿತು ನಾಪೋಕ್ಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಸಮರ್ಥವಾಗಿ ಮಳೆಗಾಲ ಎದುರಿಸಲು ಸಿದ್ಧತೆ ಕೈಗೊಳ್ಳಿ

ಜಿಲ್ಲಾಮಟ್ಟದ ಟಾಸ್ಕ್‌ಫೋರ್ಸ್ ಸಮಿತಿ ಸಭೆಯಲ್ಲಿ ಶಾಸಕ ಮಂಥರ್‌ಗೌಡ ಸೂಚನೆ

■ ಅಧಿಕಾರಿಗಳಿಗೆ ತರಾಟೆ ■ ಪೌರಾಯುಕ್ತರಿಗೆ ನೋಟಿಸ್ ನೀಡಲು ಸೂಚನೆ ■ ವರದಿ ನೀಡಿ



ಮಡಿಕೇರಿ, ಜೂ.9– ಮಳೆಗಾಲದ ಸಂದರ್ಭ ಆಯಾ ಗ್ರಾಪಂಗಳ ವ್ಯಾಪ್ತಿಯಲ್ಲಿ ಅಗತ್ಯ ಮುನ್ನೆಚ್ಚರಿಗೆ ವಹಿಸುವಂತೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಶಾಸಕ ಡಾ.ಮಂಥರ್ ಗೌಡ ಸ್ಪಷ್ಟ ಸೂಚನೆ ನೀಡಿದ್ದಾರೆ.

ಮುಂಗಾರು ಪೂರ್ವ ಸಿದ್ಧತೆ ಕುರಿತು ಮಡಿಕೇರಿಯ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶಾಸಕ ಡಾ.ಮಂಥರ್‌ಗೌಡ ಅಧ್ಯಕ್ಷತೆಯಲ್ಲಿ ನಡೆಸಲಾದ ಜಿಲ್ಲಾಮಟ್ಟದ ಟಾಸ್ಕ್ ಫೋರ್ಸ್ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಮಳೆಗಾಲವನ್ನು ಸಮರ್ಪಕವಾಗಿ ಎದುರಿಸಲು ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳುವಂತೆ ಚೆಸ್ಕಾಂ, ಲೋಕೋಪಯೋಗಿ ಇಲಾಖೆ ಸೇರಿದಂತೆ ವಿವಿಧ ಇಲಾಖಾಧಿಕಾರಿಗಳಿಗೆ ಶಾಸಕ ಡಾ.ಮಂಥರ್ ಗೌಡ ಅವರು ನಿರ್ದೇಶನ ನೀಡಿದರು.

ಮಳೆಗಾಲದ ಸಂದರ್ಭ ಸಂತ್ರಸ್ತರಿಗೆ ತೆರೆಯಲಾಗುವ ಕಾಳಜಿ ಕೇಂದ್ರಗಳಲ್ಲಿ ಸಮರ್ಪಕ ವಿದ್ಯುತ್ ಸೌಲಭ್ಯ ಹಾಗೂ ದಿನಸಿ ಸಾಮಗ್ರಿಗಳನ್ನು ದಾಸ್ತಾನು ಮಾಡಿಟ್ಟುಕೊಳ್ಳುವಂತೆ ಶಾಸಕರು ಸೂಚಿಸಿದರು. ಮಳೆ ತೀವ್ರತೆ ಆಧರಿಸಿ ಅಂಗನವಾಡಿ ಕಾರ್ಯಕರ್ತೆಯರು, ಶಾಲಾ ಮುಖ್ಯ ಶಿಕ್ಷಕರು ಅಂಗನವಾಡಿ ಮತ್ತು ಶಾಲೆಗಳಿಗೆ ರಜೆ ಘೋಷಿಸುವಂತೆ ಶಾಸಕರು ಸೂಚನೆ ನೀಡಿದರು. ಮಡಿಕೇರಿಗೆ ಸಂಪರ್ಕ ಕಲ್ಪಿಸುವ ಹೆದ್ದಾರಿಗಳಲ್ಲಿ ಮಳೆಗಾಲದಲ್ಲಿ ಯಾವುದೇ ಸಮಸ್ಯೆ ತಲೆದೋರದಂತೆ ಅಗತ್ಯ ಮುನ್ನೆಚ್ಚರಿಕೆ ವಹಿಸುವಂತೆ ಪಿಡಬ್ಲ್ಯುಡಿ ಅಧಿಕಾರಿಗಳಿಗೆ ಶಾಸಕರು ಸೂಚನೆ ನೀಡಿದರು.

ಅಧಿಕಾರಿಗಳಿಗೆ ತರಾಟೆ: ನಗರದ ಕನ್ನಿಕಾ ಬಡಾವಣೆಗೆ ತೆರಳುವ ರಸ್ತೆ ಕಳೆದ ಮಳೆಗಾಲದ ಸಂದರ್ಭ ಹಾಳಾಗಿದೆ. ಈ ರಸ್ತೆಯಲ್ಲಿ ತೆರಳುವ ಶಾಲಾ ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ತೊಂದರೆ ಅನುಭವಿಸುವಂತಾಗಿದೆ. ಆದರೆ ಇಲ್ಲಿಯವರೆಗೂ ರಸ್ತೆಬದಿ ತಡೆಗೋಡೆ ನಿರ್ಮಿಸದ ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡ ಶಾಸಕ ಡಾ.ಮಂಥರ್ ಗೌಡ, ತಡೆಗೋಡೆ ನಿರ್ಮಾಣಕ್ಕೆ ಕೂಡಲೇ ಕ್ರಿಯಾ ಯೋಜನೆ ತಯಾರಿಸುವಂತೆ ನಿರ್ದೇಶನ ನೀಡಿದರು. ನಗರದ ಎಫ್‌ಎಂಸಿ ಕಾಲೇಜು ರಸ್ತೆಯಲ್ಲಿ ನಿರ್ಮಾಣಗೊಂಡಿರುವ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಎದುರು ರಾಜ ಕಾಲುವೆಯ ಮಣ್ಣನ್ನು ತೆಗೆದು ರಸ್ತೆಬದಿ ಸುರಿಯಲಾಗಿದೆ. ಮಣ್ಣು ತೆರವುಗೊಳಿಸುವ ಸಂದರ್ಭ ಅದನ್ನು ಬೇರೆಡೆಗೆ ಸಾಗಿಸುವ ಬದಲು ರಸ್ತೆ ಬದಿಯಲ್ಲಿ ಮಣ್ಣು ಸುರಿದು ಮತ್ತೇ ಅದನ್ನು ಬೇರೆಡೆಗೆ ಸಾಗಿಸುವ ಪ್ರಮೇಯ ಏಕೆಂದು ತೀಕ್ಷ್ಣವಾಗಿ ಪ್ರಶ್ನಿಸಿದರು. ಸಾರ್ವಜನಿಕರ ತೆರಿಗೆ ಹಣವನ್ನು ಈ ರೀತಿ ಪೋಲು ಮಾಡುವುದು ಸರಿಯೇ? ಎಂದು ಸಂಬಂಧಿಸಿದ ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡರು.

ಕೂಡಲೇ ವರದಿ ನೀಡಿ: ಮಡಿಕೇರಿ ಬಳಿಯ ಕೊಯನಾಡು ಶಾಲೆಯ ಪಕ್ಕದಲ್ಲೇ ಭೂ ಕುಸಿತದಿಂದಾದ ಮಣ್ಣನ್ನು ತೆರವುಗೊಳಿಸಲಾಗಿದ್ದರೂ ಮತ್ತೇ ಭೂಕುಸಿತ ಸಂಭವಿಸಬಹುದೆನ್ನುವ ಆತಂಕದಲ್ಲಿ ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂದೇಟು ಹಾಕುತ್ತಿರುವ ಬಗ್ಗೆ ಕೂಡಲೇ ವರದಿ ನೀಡಬೇಕೆಂದು ಕ್ಷೇತ್ರ ಶಿಕ್ಷಣಾಧಿಕಾರಿಗೆ ಶಾಸಕ ಡಾ.ಮಂಥರ್ ಗೌಡ ಸೂಚನೆ ನೀಡಿದರು. ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ದುಸ್ಥಿತಿಯಲ್ಲಿರುವ ಶಾಲಾ ಕಟ್ಟಡಗಳ ಬಗ್ಗೆಯೂ ವಿಸ್ತೃತ ವರದಿ ನೀಡುವಂತೆ ಶಿಕ್ಷಣ ಇಲಾಖಾಧಿಕಾರಿಗೆ ಸೂಚನೆ ನೀಡಿದರು.

ಸಮನ್ವಯತೆ ಇರಬೇಕು: ಮೂರ್ನಾಡು ಗ್ರಾಮ ಪಂಚಾಯಿತಿ ಕಚೇರಿಗೆ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗಿದ್ದು, ಬಿಲ್ ಕಟ್ಟಿದ್ದರೂ ಕೂಡಾ ಚೆಸ್ಕಾಂ ಇಲಾಖೆ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿದೆ ಎಂದು ಪಂಚಾಯಿತಿ ಪಿಡಿಓ ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಚೆಸ್ಕಾಂ ಅಧಿಕಾರಿ ಗ್ರಾಮ ಪಂಚಾಯ್ತಿ ವಿದ್ಯುತ್ ಬಿಲ್ ಕಟ್ಟಿಲ್ಲವೆಂದು ಮಾಹಿತಿ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ಡಾ.ಮಂಥರ್‌ಗೌಡ ಅವರು, ಇಲಾಖೆಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸುವಂತೆ ಸೂಚನೆ ನೀಡಿದರು.

ಮುಂಗಾರು ಹಂಗಾಮಿಗೆ ರೈತರಿಗೆ ಬಿತ್ತನೆ ಬೀಜ ವಿತರಣೆ ಹಾಗೂ ಗೊಬ್ಬರ ವಿತರಣೆ ನಿಟ್ಟಿನಲ್ಲಿ ಅಗತ್ಯ ದಾಸ್ತಾನು ಮಾಡಿಟ್ಟುಕೊಳ್ಳುವಂತೆ ಸಂಬಂಧಿಸಿದ ಕೃಷಿ ಇಲಾಖೆ ಅಧಿಕಾರಿಗೆ ಶಾಸಕ ಡಾ.ಮಂತರ್‌ಗೌಡ ಸೂಚನೆ ನೀಡಿದರು.

ಸಭೆಯಲ್ಲಿ ಎನ್‌ಡಿಆರ್‌ಎಫ್ ತಂಡದ ಮುಖ್ಯಸ್ಥ ಶಾಂತಿಲಾಲ್ ಜಾಟಿಯಾ ಅವರನ್ನು ಶಾಸಕ ಡಾ. ಮಂಥರ್‌ಗೌಡ ಅವರು ಸ್ವಾಗತಿಸಿದರು. ಸಭೆಯಲ್ಲಿ ವಿವಿಧ ಇಲಾಖಾಧಿಕಾರಿಗಳು ಹಾಜರಿದ್ದರು.

ಪೌರಾಯುಕ್ತರಿಗೆ ನೋಟಿಸ್

ಮಡಿಕೇರಿ ನಗರಕ್ಕೆ ಸಮರ್ಪಕ ನೀರು ಸರಬರಾಜು ಮಾಡುವಲ್ಲಿ ವಿಫಲರಾಗಿರುವ ಮತ್ತು ತಮ್ಮ ಸೂಚನೆಗೂ ಸಕಾರಾತ್ಮಕವಾಗಿ ಸ್ಪಂದಿಸದ ನಗರಸಭಾ ಆಯುಕ್ತರಿಗೆ ನೋಟಿಸ್ ಜಾರಿ ಮಾಡುವಂತೆ ಮಡಿಕೇರಿ ತಾಲೂಕು ತಹಶೀಲ್ದಾರ್‌ರಿಗೆ ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂಥರ್ ಗೌಡ ಸೂಚಿಸಿದ್ದಾರೆ. ಮಡಿಕೇರಿ ನಗರಕ್ಕೆ ನೀರು ಪೂರೈಕೆಯಲ್ಲಿ ವ್ಯತ್ಯಯವಾದ ಹಿನ್ನೆಲೆಯಲ್ಲಿ ಗುರುವಾರ ಕೂಟುಹೊಳೆ ಕೇಂದ್ರಕ್ಕೆ ಭೇಟಿ ನೀಡಿದ್ದ ಶಾಸಕ ಡಾ.ಮಂಥರ್‌ಗೌಡ, ನಗರಕ್ಕೆ ಸಮರ್ಪಕ ನೀರು ಸರಬರಾಜು ಮಾಡುವ ನಿಟ್ಟಿನಲ್ಲಿ ಆರು ಗಂಟೆಯ ಗಡುವು ನೀಡಿದ್ದರು. ತಪ್ಪಿದ್ದಲ್ಲಿ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿದ್ದರು. ಆದರೆ ಶಾಸಕರ ಸೂಚನೆಗೆ ನಗರಸಭಾ ಪೌರಾಯುಕ್ತರು ಸ್ಪಂದಿಸದ ಹಿನ್ನೆಲೆಯಲ್ಲಿ ತೀವ್ರ ಅಸಮಾಧಾನಗೊಂಡ ಶಾಸಕರು, ನಗರಸಭಾ ಆಯುಕ್ತರಿಗೆ ನೋಟೀಸ್ ನೀಡುವಂತೆ ತಹಶೀಲ್ದಾರ್‌ಗೆ ಸೂಚನೆ ನೀಡಿದರು.

ರೈತರಿಗೆ ಬಿತ್ತನೆ ಬೀಜ ಕೊರತೆಯಾಗದಂತೆ ಕ್ರಮ ವಹಿಸಿ

ಅಧಿಕಾರಿಗಳಿಗೆ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಸೂಚನೆ



ಮದ್ದೂರು, ಜೂ.9– ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ರೈತರಿಗೆ ಬಿತ್ತನೆ ಬೀಜ ಒದಗಿಸುವ ಸಂಬಂಧ ಅಧಿಕಾರಿಗಳು ಕಾರ್ಯೋನ್ಮುಖರಾಗಬೇಕು ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ವಿವಿಧ ಇಲಾಖೆ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು, ರಾಜ್ಯದಲ್ಲಿ ಮುಂಗಾರು ಮಳೆ ಪ್ರಾರಂಭವಾಗುತ್ತಿದೆ. ಹೀಗಾಗಿ ಬಿತ್ತನೆ ಬೀಜ ಮತ್ತು ರಸಗೊಬ್ಬರ ವಿತರಣೆಗೆ ಆದ್ಯತೆ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ರೈತರಿಂದ ಬಿತ್ತನೆ ಬೀಜ ಮತ್ತು ರಸಗೊಬ್ಬರ ಸಂಬಂಧ ಯಾವುದೇ ದೂರುಗಳು ಬರಬಾರದು. ಅಂತಹ ಸಂದರ್ಭದಲ್ಲಿ ತ್ವರಿತ ಗತಿಯಲ್ಲಿ ಕ್ರಮ ಕೈಕೊಂಡು ಸಮಸ್ಯೆಗೆ ಸ್ಪಂದಿಸಬೇಕು ಎಂದು ಸಲಹೆ ನೀಡಿದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪ್ರಥಮವಾಗಿ ಜಿಲ್ಲೆಯ ಶಾಸಕರ ಒತ್ತಾಯದ ಮೇರೆಗೆ ಮೈಷುಗರ್ ಕಾರ್ಖಾನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ 50 ಕೋಟಿ ಅನುದಾನ ಬಿಡುಗಡೆ ಮಾಡಿದ್ದು, ಕಾರ್ಖಾನೆ ಪುನಶ್ಚೇತನಕ್ಕೆ ಅಗತ್ಯ ಕ್ರಮ ವಹಿಸಲಾಗುವುದು. ಕಾರ್ಖಾನೆ ಯಂತ್ರೋಪಕರಣ ಗಳನ್ನು ಬದಲಾವಣೆ ಮಾಡುವ ಬಗ್ಗೆಯೂ ಅಧಿಕಾರಿ ಮತ್ತು ತಾಂತ್ರಿಕ ತಜ್ಞರ ಜೊತೆ ಸಮಾಲೋಚನೆ ನಡೆಸಲಾಗುವುದು ಎಂದರು. ರೈತರ ಹಿತದೃಷ್ಟಿಯಿಂದ ಮೈಷುಗರ್ ಕಾರ್ಖಾನೆ ಗತವೈಭವ ಮರುಕಳಿಸಬೇಕೆಂಬುದು ನಮ್ಮ ಮಹದಾಸೆ. ಜೊತೆಗೆ ಎಥೆನಾಲ್ ಘಟಕ, ವಿದ್ಯುತ್ ಉತ್ಪಾದನೆ, ಉಪ ಉತ್ಪನ್ನಗಳನ್ನು ಉತ್ಪಾದಿಸಿ ತಯಾರಿಸುವ ಬಗ್ಗೆಯೂ ಚಿಂತನೆ ನಡೆಸಲಾಗುತ್ತಿದ್ದು, ಈ ಬಗ್ಗೆ ಮುಖ್ಯಮಂತ್ರಿಗಳು ಸಂಬಂಧಪಟ್ಟ ಸಚಿವರು ಹಾಗೂ ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳುವುದಾಗಿ ಸಚಿವ ಚಲುವ ರಾಯಸ್ವಾಮಿ ತಿಳಿಸಿದರು.

ಸಭೆಯಲ್ಲಿ ಶಾಸಕ ಕೆ.ಎಂ.ಉದಯ್, ತಹಸೀಲ್ದಾರ್ ನರಸಿಂಹಮೂರ್ತಿ, ಕಾರ್ಯಪಾಲಕ ಅಭಿಯಂತರ ಹರ್ಷ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಅಶೋಕ್ ಸೇರಿದಂತೆ ಇತರರಿದ್ದರು.

ಮಂಡ್ಯ ಅಭಿವೃದ್ಧಿಗೆ ಪಕ್ಷಾತೀತವಾಗಿ ಕೈಜೋಡಿಸುತ್ತೇವೆ

ಮದ್ದೂರು: ಮಂಡ್ಯ ಜಿಲ್ಲೆ ಸಮಗ್ರ ಅಭಿವೃದ್ಧಿಗೆ ಪಕ್ಷಾತೀತವಾಗಿ ಕೈಜೋಡಿಸಲು ನಾವು ಸಿದ್ಧವಿದ್ದು, ಮೈಷುಗರ್ ಸಕ್ಕರೆ ಕಾರ್ಖಾನೆ ಅಭಿವೃದ್ಧಿ, ರೈತರ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನಿಗದಿ, ನಾಲೆಗಳ ಆಧುನೀಕರಣ ಇನ್ನಿತರ 10 ಹಲವು ಸಮಸ್ಯೆಗಳನ್ನು ತ್ವರಿತಗತಿಯಲ್ಲಿ ಬಗೆಹರಿಸಿ ಜಿಲ್ಲೆಯ ರೈತರ ಹಿತ ಕಾಪಾಡುವಂತೆ ಜೆಡಿಎಸ್ ಮುಖಂಡ ಎಸ್.ಗುರುಚರಣ್ ಸಚಿವ ಚಲುವರಾಯಸ್ವಾಮಿಗೆ ಮನವಿ ಮಾಡಿದರು.

ಜಿಲ್ಲೆಯಲ್ಲಿ ಹಲವು ಜ್ವಲಂತ ಸಮಸ್ಯೆಗಳಿದ್ದು, ಅವುಗಳನ್ನು ಹಂತ ಹಂತವಾಗಿ ಬಗೆಹರಿಸುವ ಜೊತೆಗೆ ಮಾದರಿ ಜಿಲ್ಲೆಯನ್ನಾಗಿಸಲು ಪಣತೊಡುವಂತೆ ಮನವಿ ಮಾಡಿದರಲ್ಲದೆ ರೈತರಿಗೆ ಸಕಾಲದಲ್ಲಿ ಬಿತ್ತನೆ ಬೀಜ ರಸಗೊಬ್ಬರ ಇನ್ನಿತರ ಸೌಲಭ್ಯಗಳು ಸಕಾಲದಲ್ಲಿ ಸಿಗಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸುವಂತೆ ಕೋರಿದರು.

ರೈತರ ಕೊನೆ ಭಾಗದ ಜಮೀನುಗಳಿಗೆ ಸಮರ್ಪಕವಾಗಿ ನೀರು ಹರಿಯದ ಕಾರಣ ಸ್ಥಳೀಯ ರೈತರು ಸಂಕಷ್ಟದಲ್ಲಿದ್ದು, ಕೂಡಲೇ ಯೋಜನೆ ರೂಪಿಸಿ ತಾಲೂಕಿನ ಕೊನೆ ಭಾಗದ ರೈತರ ಜಮೀನುಗಳಿಗೆ ಸಮರ್ಪಕವಾಗಿ ನೀರು ಹರಿಯುವಂತೆ ಕ್ರಮವಹಿಸಬೇಕೆಂದರು. ಈ ವೇಳೆ ಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ಸಂದರ್ಶ, ಮುಖಂಡರಾದ ನಾಗೇಗೌಡ, ಪುರಸಭೆ ಮಾಜಿ ಸದಸ್ಯ ಡಾಬಾ ಮಹೇಶ್, ಸಿದ್ದು, ವಕೀಲ ನಾಗರಾಜು ಇತರರಿದ್ದರು.

3ನೇ ಬಾರಿ ಮಂಡ್ಯ ಉಸ್ತುವಾರಿ ಚಲುವರಾಯಸ್ವಾಮಿಗೆ

ಮಂಡ್ಯ, ಜೂ.9– ನಿರೀಕ್ಷೆಯಂತೆ ಕೃಷಿ ಸಚಿವ ಎನ್. ಚಲುವರಾಯಸ್ವಾಮಿಗೆ ಮಂಡ್ಯ ಜಿಲ್ಲಾ ಉಸ್ತುವಾರಿ ಹೊಣೆ ಸಿಕ್ಕಿದೆ. ಆ ಮೂಲಕ ಮೂರನೇ ಬಾರಿಗೆ ಚಲುವರಾಯಸ್ವಾಮಿ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾರೆ.



ನೀರಾವರಿಯನ್ನೇ ನಂಬಿರುವ ಮಂಡ್ಯ ಜಿಲ್ಲೆಯಲ್ಲಿ ರೈತರ ಅನೇಕ ಸಮಸ್ಯೆಗಳಿದ್ದು, ಅದಕ್ಕೆ ಪೂರಕ ಎಂಬಂತೆ ನಾಗಮಂಗಲ ಕ್ಷೇತ್ರದ ಶಾಸಕರಾದ ಎನ್.ಚಲುವರಾಯ ಸ್ವಾಮಿಗೆ ಕೃಷಿ ಖಾತೆ ಸಿಕ್ಕಿದ್ದು, ಇದೀಗ ಉಸ್ತುವಾರಿ ಹೊಣೆಯೂ ಅವರಿಗೆ ಸಿಕ್ಕಿರುವುದರಿಂದ ಮಂಡ್ಯ ಜನರು ಅವರ ಮೇಲೆ ಬೆಟ್ಟದಷ್ಟು ನಿರೀಕ್ಷೆ ಇಟ್ಟಿದ್ದಾರೆ.

ಮೈಷುಗರ್ ಪುನರಾರಂಭ, ಕಬ್ಬು, ಹಾಲು, ಭತ್ತಕ್ಕೆ ಬೆಂಬಲ ಬೆಲೆ ನಿಗದಿ ಸೇರಿದಂತೆ ಅನೇಕ ಸವಾಲುಗಳು ಮುಂದಿದ್ದು, ಮಂಡ್ಯ ನಗರಾಭಿವೃದ್ಧಿ, ಮೂಲ ಸೌಲಭ್ಯ ಒದಗಿಸುವುದು ಸಹ ಚಲುವರಾಯಸ್ವಾಮಿ ಹೊಣೆಯಾಗಿದೆ.

ಎನ್.ಚಲುವರಾಯಸ್ವಾಮಿ ಉಸ್ತುವಾರಿ ಸಚಿವರಾಗುತ್ತಿರುವುದು ಇದೇ ಮೊದಲೇನಲ್ಲ. ಈ ಹಿಂದೆ 2003ರಲ್ಲಿ ಧರಂಸಿಂಗ್ ನೇತೃತ್ವದ ಸರ್ಕಾರದಲ್ಲಿ ಆರೋಗ್ಯ ಸಚಿವರಾಗಿದ್ದ ಚಲುವರಾಯಸ್ವಾಮಿ ಮಂಡ್ಯ ಉಸ್ತುವಾರಿ ಸಚಿವರಾಗಿದ್ದರು. ಆ ಬಳಿಕ ಹೆಚ್.ಡಿ. ಕುಮಾರಸ್ವಾಮಿ ಮೊದಲ ಅವಧಿಯ ಸರ್ಕಾರದಲ್ಲಿ ಸಾರಿಗೆ ಸಚಿವರಾಗಿದ್ದ ಸಂದರ್ಭದಲ್ಲೂ ಮಂಡ್ಯ ಉಸ್ತುವಾರಿ ವಹಿಸಿಕೊಂಡಿದ್ದರು. ಇದೀಗ ಮೂರನೇ ಬಾರಿಗೆ ಮಂಡ್ಯ ಉಸ್ತುವಾರಿ ಸಚಿವರಾಗಿದ್ದಾರೆ.

ಕಳೆದ ಎರಡೂವರೆ ದಶಕಗಳಲ್ಲಿ ಜಿಲ್ಲೆಯವರಿಗಿಂತ ಹೊರಗಿನವರೇ ಮಂಡ್ಯ ಉಸ್ತುವಾರಿ ವಹಿಸಿಕೊಂಡ ಪರಿಣಾಮ ಜಿಲ್ಲೆಯ ಬಗ್ಗೆ ಸಮರ್ಪಕ ಮಾಹಿತಿ ಇಲ್ಲದೇ ಅಭಿವೃದ್ಧಿ ಕುಂಠಿತವಾಗಿತ್ತು. 1999ರಲ್ಲಿ ಮಂಡ್ಯದವರೇ ಆದ ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾದಾಗ ಮೈಸೂರಿನ ಕೋಟೆ ಶಿವಣ್ಣ ಉಸ್ತುವಾರಿ ಸಚಿವರಾಗಿದ್ದರು. ಬಳಿಕ ಧರಂಸಿಂಗ್, ಹೆಚ್‌ಡಿಕೆ ನೇತೃತ್ವದ ಅಲ್ಪ ಅವಧಿಯ ಸರ್ಕಾರದಲ್ಲಿ ಜಿಲ್ಲೆಯ ಚಲುವರಾಯಸ್ವಾಮಿಗೆ ಉಸ್ತುವಾರಿ ಮಂತ್ರಿಗಿರಿ ಒಲಿದು ಬಂದಿತ್ತು.

ಅದಾದ ಬಳಿಕ 2008ರ ಯಡಿಯೂರಪ್ಪ ಡಿ.ವಿ.ಸದಾನಂದ ಗೌಡ, ಜಗದೀಶ್ ಶೆಟ್ಟರ್ ಸರ್ಕಾರದಲ್ಲಿ ಜಿಲ್ಲೆಯವರಲ್ಲದ ರಾಮಚಂದ್ರೇಗೌಡ, ಆರ್.ಅಶೋಕ್, ಸಿ.ಪಿ.ಯೋಗೇಶ್ವರ್ ಉಸ್ತುವಾರಿ ಸಚಿವರಾಗಿದ್ದರೆ, ನಂತರದ ಸಿದ್ದರಾಮಯ್ಯ ಸರ್ಕಾರದಲ್ಲಿ ಮಂಡ್ಯದವರೇ ಆದ ಅಂಬರೀಷ್ ಉಸ್ತುವಾರಿ ಸಚಿವರಾದರೂ ಅನಾರೋಗ್ಯದ ಹಿನ್ನಲೆಯಲ್ಲಿ ಅಭಿವೃದ್ಧಿಗೆ ಅಷ್ಟು ಗಮನ ಹರಿಸಲು ಸಾಧ್ಯವಾಗಲಿಲ್ಲ. ಕಡೆಗೆ ಅವರು ಮಂತ್ರಿ ಸ್ಥಾನ ಕಳೆದುಕೊಂಡಾಗ ಮತ್ತೆ ಜಿಲ್ಲೆಯವರಲ್ಲದ ಡಿ.ಕೆ.ಶಿವಕುಮಾರ್ ಹಾಗೂ ಲೇಟಿಟ್ ಕೃಷ್ಣಪ್ಪಗೆ ಉಸ್ತುವಾರಿ ಹೊಣೆ ವಹಿಸಲಾಗಿತ್ತು.

2018ರ ಸಮ್ಮಿಶ್ರ ಸರ್ಕಾರದಲ್ಲಿ ಜಿಲ್ಲೆಯ ಸಿ.ಎಸ್.ಪುಟ್ಟರಾಜು ಉಸ್ತುವಾರಿ ಸಚಿವರಾಗಿ ಅನೇಕ ಅಭಿವೃದ್ಧಿ ಕಾರ್ಯಗಳಿಗೆ ಮುಂದಾದರೂ, ಸರ್ಕಾರ ಅಲ್ಪ ಅವಧಿಗೆ ಪತನವಾಯಿತು. ನಂತರ ಬಂದ ಬಿಜೆಪಿ ಸರ್ಕಾರದಲ್ಲಿ ಮತ್ತೆ ಹೊರಗಿನವರಾದ ಆರ್.ಅಶೋಕ್ ಉಸ್ತುವಾರಿ ವಹಿಸಿಕೊಂಡರು. ಬಳಿಕ ಕೆ.ಸಿ. ನಾರಾಯಣಗೌಡ ಜಿಲ್ಲಾ ಮಂತ್ರಿಯಾದರೂ ಕೆಲ ದಿನಗಳಲ್ಲೇ ಅವರನ್ನು ಬದಲಿಸಿ ಕೆ. ಗೋಪಾಲಯ್ಯಗೆ ಉಸ್ತುವಾರಿ ಹೊಣೆ ನೀಡಲಾಯಿತು. ಅದರಲ್ಲೂ ಬಿಜೆಪಿ ಸರ್ಕಾರದ ಕಡೆ ಕೆಲ ತಿಂಗಳಲ್ಲಿ ಗೋಪಾಲಯ್ಯ ಬದಲಿಸಿ ಆರ್. ಅಶೋಕ್‌ಗೆ ಹೊಣೆ ವಹಿಸಿದರೂ ಅಶೋಕ್ ಮಂಡ್ಯ ಉಸ್ತುವಾರಿ ಬೇಡ ಎಂದ ಪರಿಣಾಮ ಕನಿಷ್ಠ 3 ತಿಂಗಳು ಜಿಲ್ಲಾ ಉಸ್ತುವಾರಿ ಸಚಿವರಿಲ್ಲದೇ ಮಂಡ್ಯ ಜಿಲ್ಲೆ ಅನಾಥವಾಗಿದ್ದು ಶೋಚನೀಯ.

ಅಧಿಕಾರಿಗಳ ವರ್ಗಾವಣೆಗೆ ಒತ್ತಾಯ

ಮಂಡ್ಯ, ಜೂ.9– ಬಿಜೆಪಿ ಸರ್ಕಾರದಲ್ಲಿ ನೇಮಕವಾಗಿರುವ ಕೆಲ ಇಲಾಖೆ ಅಧಿಕಾರಿಗಳು ಜನರಿಗೆ ಸ್ಪಂದಿಸದೇ ನಿರ್ಲಕ್ಷ್ಯದಿಂದ ವರ್ತಿಸುತ್ತಿದ್ದು, ಅಂತಹ ಅಧಿಕಾರಿಗಳನ್ನು ವರ್ಗಾವಣೆ ಮಾಡುವಂತೆ ಕಾಂಗ್ರೆಸ್ ಮುಖಂಡ ಹಾಗೂ ಮುಡಾ ಮಾಜಿ ಅಧ್ಯಕ್ಷ ಅಸಾದುಲ್ಲಾ ಖಾನ್ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಕಳೆದ ಹಲವು ವರ್ಷಗಳಿಂದ ವಿವಿಧ ಇಲಾಖೆಯಲ್ಲಿರುವ ಕೆಲ ಅಧಿಕಾರಿಗಳು ಜನರಿಗೆ ಸಮರ್ಪಕವಾಗಿ ಸ್ಪಂದಿಸುತ್ತಿಲ್ಲ. ಈ ಬಗ್ಗೆ ಸಾರ್ವಜನಿಕ ವಲಯದಲ್ಲಿ ಬಹಳ ದೂರುಗಳು ಬರುತ್ತಿದ್ದು, ಜನರಿಗೆ ಸ್ಪಂದಿಸದ ಅಧಿಕಾರಿಗಳನ್ನು ಜಿಲ್ಲೆಯಿಂದ ವರ್ಗಾವಣೆಗೆ ಮಾಡಿ ಜನಪರ ಅಧಿಕಾರಿಗಳನ್ನು ನಿಯೋಜನೆಗೊಳಿಸಬೇಕೆಂದು ಮನವಿ ಮಾಡಿದ್ದಾರೆ.



ಈ ಬಾರಿ ಜನ ಬಿಜೆಪಿ ಸರ್ಕಾರದ ಆಡಳಿತದಿಂದ ಬೇಸತ್ತು ಕಾಂಗ್ರೆಸ್ ಅನ್ನು ಬೆಂಬಲಿಸಿದ್ದಾರೆ. ಎಲ್ಲಾ ವರ್ಗದ ಜನ ಕಾಂಗ್ರೆಸ್‌ಗೆ ಮತ ಹಾಕಿದ್ದು, ಜನರ ಆಶೋತ್ತರಗಳಿಗೆ ನಾವು ಸ್ಪಂದಿಸಬೇಕಿದೆ. ಮುಂದೆ ಜಿಪಂ, ತಾಪಂ ಹಾಗೂ ಸಂಸತ್ ಚುನಾವಣೆಯಿದ್ದು, ಜನರಿಗೆ ಬೇಕಾದ ಅನುಕೂಲ ಮಾಡಿಕೊಡಬೇಕಾದ ಕರ್ತವ್ಯ ನಮ್ಮದಾಗಿದ್ದು, ಜನರ ವಿಶ್ವಾಸಗಳಿಸಲು ನಾವು ಮುಂದಾಗಬೇಕಿರುವುದರಿಂದ ಜನರಿಗೆ ಸ್ಪಂದಿಸುವ ಅಧಿಕಾರಿಗಳ ಅವಶ್ಯಕತೆ ಇದೆ ಎಂದು ತಿಳಿಸಿದ್ದಾರೆ.

ನಾಗಮಂಗಲ: ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಟೋಲ್ ಸಿಬ್ಬಂದಿಗಳ ಪ್ರತಿಭಟನೆ



ನಾಗಮಂಗಲ, ಜೂ.9– ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ತಾಲೂಕಿನ ಬೆಳ್ಳೂರು ಕ್ರಾಸ್‌ನ ನೆಲ್ಲಿಗೆರೆ ಬಳಿಯ ಟೋಲ್ ಸಿಬ್ಬಂದಿ ಟೋಲ್ ಸಂಗ್ರಹ ಮಾಡದೇ ಪ್ರತಿಭಟನೆ ನಡೆಸಿದರು. ನಂತರ ಮಾತನಾಡಿದ ಪ್ರತಿಭಟನಾಕಾರರು, ಈ ಟೋಲ್ ಸಂಗ್ರಹದ ಗುತ್ತಿಗೆಯನ್ನು ಸರ್ಕಾರದಿಂದ ನವಯುಗ ಕಂಪನಿಯು ಗುತ್ತಿಗೆ ಪಡೆದಿದ್ದು, ಅವರಿಂದ ಎರವಲು ಗುತ್ತಿಗೆ ಪಡೆದಿರುವ ಕ್ಲಿಬ್ ಕಂಪನಿ ಟೋಲ್‌ನಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿಗೆ ನೀಡುವ ವೇತನದಲ್ಲಿ ತಾರತಮ್ಯ ಮಾಡುತ್ತಿದೆ. ಅಲ್ಲದೇ ಬೋನಸ್, ಇಎಸ್‌ಐ ಹಾಗೂ ಪಿಎಫ್ ಸೇರಿದಂತೆ ಹಲವು ಸೌಲಭ್ಯಗಳನ್ನು ನೀಡದೇ ವಂಚಿಸುತ್ತಿದೆ. ಈ ಸಂಬಂಧ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಕಂಪನಿಯ ಯೋಜನಾ ನಿರ್ದೇಶಕ ಕೆ.ಕೆ.ರಾವ್ ಯಾವುದೇ ಮಾಹಿತಿ ನೀಡು ತ್ತಿಲ್ಲ. ಹೀಗಾಗಿ ಇಎಸ್‌ಐ, ಪಿಎಫ್ ಸೇರಿದಂತೆ ಎಲ್ಲಾ ಬೇಡಿಕೆ ಈಡೇರಿಸ ಬೇಕೆಂದು ಪ್ರತಿಭಟನಾಕಾರರು ತಿಳಿಸಿದರು.

ಕೆ.ವೆಂಕಟೇಶ್‌ಗೆ ಚಾಮರಾಜನಗರ ಜಿಲ್ಲಾ ಉಸ್ತುವಾರಿ

ಚಾಮರಾಜನಗರ, ಜೂ.9– ಚಾಮರಾಜನಗರ ನೂತನ ಜಿಲ್ಲಾ ಉಸ್ತುವಾರಿ ಸಚಿವರಾಗಿ ಪಶುಸಂಗೋಪನೆ ಹಾಗೂ ರೇಷ್ಮೆ ಖಾತೆ ಸಚಿವ ಕೆ.ವೆಂಕಟೇಶ್ ಅವರನ್ನು ನೇಮಕ ಮಾಡಲಾಗಿದೆ.



ಪಿರಿಯಾಪಟ್ಟಣ ಕ್ಷೇತ್ರದಲ್ಲಿ 6ನೇ ಬಾರಿಗೆ ಗೆಲುವು ಸಾಧಿಸಿರುವ ಕಾಂಗ್ರೆಸ್ ಹಿರಿಯ ನಾಯಕ ಕೆ.ವೆಂಕಟೇಶ್ ಅವರಿಗೆ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಜಿಲ್ಲಾ ಉಸ್ತುವಾರಿ ಹೊಣೆ ನೀಡಿದೆ. ಈ ಹಿಂದಿನ ಕಾಂಗ್ರೆಸ್ ಸರ್ಕಾರದಲ್ಲಿ ಹೆಚ್.ಎಂ.ಮಹದೇವಪ್ರಸಾದ್ ಜಿಲ್ಲಾ ಉಸ್ತುವಾರಿ ಹೊಣೆ ಹೊತ್ತಿದ್ದರು. ಆದರೆ, ಅವರ ಅಕಾಲಿಕ ನಿಧನದಿಂದ ತೆರವಾದ ಸ್ಥಾನಕ್ಕೆ ಯು.ಟಿ.ಖಾದರ್ ನೇಮಕವಾದರು. ಬಳಿಕ, ಮಹದೇವಪ್ರಸಾದ್ ಪತ್ನಿ ಗೀತಾ ಮಹದೇವಪ್ರಸಾದ್ ನೇಮಕವಾಗಿದ್ದರು. ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಉಸ್ತುವಾರಿ ಹೊಣೆ ನೀಡಲಾಗಿತ್ತು. ನಂತರ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರದಲ್ಲಿ ಎಸ್.ಸುರೇಶ್‌ಕುಮಾರ್ ಹಾಗೂ ವಿ.ಸೋಮಣ್ಣ ಜಿಲ್ಲಾ ಉಸ್ತುವಾರಿ ನಿಭಾಹಿಸಿದರು. ಪ್ರಸ್ತುತ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರ ವೆಂಕಟೇಶ್ ಅವರಿಗೆ ಜಿಲ್ಲಾ ಉಸ್ತುವಾರಿ ನೀಡಿದೆ. ಸೌಮ್ಯ ಸ್ವಭಾವದ ಹಿರಿಯ ಮುತ್ಸದ್ದಿ ರಾಜಕಾರಣಿ ಆಗಿರುವ ವೆಂಕಟೇಶ್ ಅವರು ಸ್ವಕ್ಷೇತ್ರದಲ್ಲಿ ಸಾಕಷ್ಟು ಜನ ಮನ್ನಣೆ ಗಳಿಸಿದ್ದಾರೆ. ರಾಜಕೀಯವಾಗಿ ಸಾಕಷ್ಟು ಏಳುಬೀಳು ಕಂಡಿರುವ ಇವರು ತಾಲೂಕು ಬೋರ್ಡ್ ಅಧ್ಯಕ್ಷರಾಗುವ ಮೂಲಕ ರಾಜಕೀಯಕ್ಕೆ ಕಾಲಿರಿಸಿದರು. ತಮ್ಮ 42 ವರ್ಷಗಳ ಸುದೀರ್ಘ ರಾಜಕಾರಣದಲ್ಲಿ 9 ಚುನಾವಣೆಗಳನ್ನು ಎದುರಿಸಿ 6 ಬಾರಿ ಶಾಸಕರಾಗಿ, ಒಮ್ಮೆ ಸಚಿವರಾಗಿ, ಒಮ್ಮೆ ಬಿಡಿಎ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಇವರು ಪ್ರಥಮ ಬಾರಿಗೆ ಶಾಸಕರಾದ ಸಂದರ್ಭ ಪಿರಿಯಾಪಟ್ಟಣದಲ್ಲಿ ಅನೇಕ ಸಮಸ್ಯೆಗಳಿದ್ದು, ರಾಮಕೃಷ್ಣ ಹೆಗಡೆ ಸರ್ಕಾರದಲ್ಲಿ ರಾಜ್ಯದಲ್ಲಿಯೇ ಹೆಚ್ಚು ಜನತಾ ಮನೆಗಳನ್ನು ತಂದಿದ್ದರು ಎಂಬ ಕೀರ್ತಿಗೂ ಭಾಜನರಾಗಿದ್ದಾರೆ.

ಎಸ್.ಸಿ.ಬಸವರಾಜುರನ್ನು ಎಂಎಲ್‌ಸಿ ಮಾಡಲು ಒತ್ತಾಯ



ಚಾಮರಾಜನಗರ, ಜೂ.9– ಮೈಸೂರು ಮತ್ತು ಚಾಮರಾಜನಗರ ನಾಯಕ ಸಮಾಜದ ಮುಖಂಡರು ಹಾಗೂ ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡುವಂತೆ ಕೊಳ್ಳೇಗಾಲ ಕ್ಷೇತ್ರದ ನಾಯಕ ಸಮಾಜದ ಮುಖಂಡರು ಕಾಂಗ್ರೆಸ್ ವರಿಷ್ಠರನ್ನು ಒತ್ತಾಯಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಾಯಕ ಸಮುದಾಯದ ಮುಖಂಡ, ತಾಪಂ ಮಾಜಿ ಅಧ್ಯಕ್ಷ ಎಚ್.ವಿ.ಚಂದ್ರು, ಜೂ.30ರಂದು ನಡೆಯುವ ವಿಧಾನ ಪರಿಷತ್ ಉಪ ಚುನಾವಣೆಯಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ನಾಯಕ ಸಮುದಾಯದ ಪ್ರಭಾವಿ ಮುಖಂಡ ಎಸ್.ಸಿ. ಬಸವರಾಜು ಅವರನ್ನು ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆ ಮಾಡಬೇಕು ಎಂದು ಕಾಂಗ್ರೆಸ್ ವರಿಷ್ಠರನ್ನು ಒತ್ತಾಯಿಸಿದರು.

ಈ ಹಿಂದೆ ನಂಜನಗೂಡಿನಿಂದ ಡಿ.ಟಿ. ಜಯಕುಮಾರ್, ಹುಣಸೂರಿನಿಂದ ಚಿಕ್ಕಮಾದು, ಬನ್ನೂರಿನಿಂದ ಚಿಕ್ಕಮಾದ ನಾಯಕ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿದ್ದರು. ಬಿಜೆಪಿಯಿಂದ ಒಂದು ಬಾರಿ ಸಿದ್ದರಾಜು ಹಾಗೂ ಜೆಡಿಎಸ್‌ನಿಂದ ಒಂದು ಬಾರಿ ಚಿಕ್ಕಮಾದು ಅವರು ವಿಧಾನ ಪರಿಷತ್‌ಗೆ ಆಯ್ಕೆಯಾಗಿದ್ದರು ಎಂದರು.

38 ವರ್ಷಗಳ ರಾಜಕೀಯ ಅನುಭವ ಹೊಂದಿರುವ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಒಡನಾಟ ಹೊಂದಿರುವ ಎಸ್.ಸಿ.ಬಸವರಾಜು ಅವರು 3 ಬಾರಿ ಜಿಪಂ ಸದಸ್ಯರಾಗಿದ್ದು, ಒಂದು ಬಾರಿ, ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ ಎಂದರು.

ಬಸವರಾಜು ಅವರು 2009ರಲ್ಲಿ ಕರ್ನಾಟಕ ರಾಜ್ಯ ಜಿಪಂ ಕೇಂದ್ರ ಪುರಸ್ಕೃತ ಯೋಜನೆಗಳ ಜಾಗೃತಿ ಹಾಗೂ ಉಸ್ತುವಾರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. 2010ರಲ್ಲಿ ಕರ್ನಾಟಕ ಕಾಂಗ್ರೆಸ್ ಪ್ರದೇಶ ಸಮಿತಿ ಕಾರ್ಯದರ್ಶಿಯಾಗಿ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. 2014–16ರಲ್ಲಿ ಕರ್ನಾಟಕ ಮಹರ್ಷಿ ವಾಲ್ಮೀಕಿ ನಿಗಮದ ಅಧ್ಯಕ್ಷರಾಗಿ 2 ವರ್ಷ ಕಾರ್ಯ ನಿರ್ವಹಿಸಿದ್ದಾರೆ. 2014ರಿಂದ ಕೊಳ್ಳೇಗಾಲ ಕ್ಷೇತ್ರದ ಉಸ್ತುವಾರಿಯಾಗಿದ್ದು, 2022ರಲ್ಲಿ ಕೊಳ್ಳೇಗಾಲ ಜೊತೆಗೆ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ಉಸ್ತುವಾರಿಯಾಗಿ ಕೆಲಸ ಮಾಡಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಯಳಂದೂರು ಟೌನ್ ಪಂಚಾಯಿತಿ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ರವಿ, ಸದಸ್ಯರಾದ ಮಹೇಶ್, ರಂಗನಾಥ್, ಗ್ರಾಪಂ ಮಾಜಿ ಅಧ್ಯಕ್ಷ ಸಿದ್ದನಾಯಕ, ಮುಖಂಡ ರಾಜು, ಎಸ್.ಮಹದೇವಸ್ವಾಮಿ ಹಾಜರಿದ್ದರು.

ಲೋಕಾಯುಕ್ತ ಬಲೆಗೆ ಇಬ್ಬರು ಲೋಕೋಪಯೋಗಿ ಇಲಾಖೆ ಇಂಜಿನಿಯರ್‌ಗಳು

ಚಾಮರಾಜನಗರ, ಜೂ.9– ಲಂಚ ಪಡೆಯುತ್ತಿದ್ದ ವೇಳೆ ಇಬ್ಬರು ಲೋಕೋಪಯೋಗಿ ಇಲಾಖೆ ಇಂಜಿನಿಯರ್‌ಗಳು ಶುಕ್ರವಾರ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.



ಕೆಂಪರಾಜು




ಮಧುಸೂದನ್

ಚಾಮರಾಜನಗರ ತಾಲೂಕಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕೆಂಪರಾಜು ಮತ್ತು ಕಿರಿಯ ಇಂಜಿನಿಯರ್ ಮಧುಸೂದನ್ ಲೋಕಾಯುಕ್ತ ಬಲೆಗೆ ಬಿದ್ದವರು.

ತಾಲೂಕಿನ ಬಾಗಳಿ ಗ್ರಾಮದ ಸರ್ಕಾರಿ ಶಾಲೆ ಕಟ್ಟಡ ನಿರ್ಮಾಣದ ಗುತ್ತಿಗೆಯನ್ನು ನಗರದ ಸೂರ್ಯ ಬಿಲ್ಡರ್ ಅಂಡ್ ಡೆವೆಲಪರ್ ಸಂಸ್ಥೆ ಪಡೆದಿತ್ತು. ಕಾಮಗಾರಿ ಪೂರ್ಣಗೊಂಡ ಬಳಿಕ ಲೋಕೋಪಯೋಗಿ ಇಲಾಖೆ ಬಿಲ್ ಹಣ ಮಂಜೂರು ಮಾಡಬೇಕಿತ್ತು. ಅದರಂತೆ ಬಿಲ್ ಪಾವತಿ ಮಾಡಲು ಇಂಜಿನಿಯರ್‌ಗಳಾದ ಕೆಂಪರಾಜು ಹಾಗೂ ಮಧುಸೂದನ್ 30 ಸಾವಿರ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಸಂಬಂಧ ಸಂಸ್ಥೆಯ ಗುತ್ತಿಗೆದಾರ ನಗರದ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ಶುಕ್ರವಾರ ಸಂಜೆ ಬಾಗಳಿ ಗ್ರಾಮದ ಸರ್ಕಾರಿ ಶಾಲೆ ಕಾಮಗಾರಿ ವೀಕ್ಷಣೆಗೆ ತೆರಳಿದ್ದ ಕೆಂಪರಾಜು ಹಾಗೂ ಮಧುಸೂದನ್ ಅವರು ಗುತ್ತಿಗೆದಾರನಿಂದ 30 ಸಾವಿರ ರೂ. ಲಂಚ ಪಡೆದಿದ್ದರು ಎನ್ನಲಾಗಿದೆ. ಈ ವೇಳೆ ಪ್ರಕರಣ ದಾಖಲಿಸಿಕೊಂಡಿದ್ದ ಲೋಕಾಯುಕ್ತ ಪೊಲೀಸರು ದಾಳಿ ಮುಂದಾಗಿದ್ದಾರೆ. ವಿಷಯ ತಿಳಿದ ಅಧಿಕಾರಿಗಳು ಕಾರಿನಲ್ಲಿ ಪರಾರಿಯಾಗಲು ಯತ್ನಿಸಿದ್ದು, ಅವರನ್ನು ಬೆನ್ನತ್ತಿದ ಪೊಲೀಸರು ಕುದೇರು ಬಳಿಯ ಚಾಮುಲ್ ಘಟಕದ ಬಳಿ ಕಾರನ್ನು ಅಡ್ಡಗಟ್ಟಿ ಅಧಿಕಾರಿಗಳನ್ನು ಬಂಧಿಸಿ, 30 ಸಾವಿರ ರೂ. ವಶಪಡಿಸಿಕೊಂಡಿದ್ದಾರೆ. ಚಾಮರಾಜನಗರ ಲೋಕಾಯುಕ್ತ ಡಿವೈಎಸ್‌ಪಿ ಕೆ.ಟಿ.ಮ್ಯಾಥ್ಯೂ ಥಾಮಸ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಹಲವು ಅಧಿಕಾರಿಗಳು ಭಾಗವಹಿಸಿದ್ದರು.

ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ



ಚಾಮರಾಜನಗರ, ಜೂ.9– ಜಿಲ್ಲಾಡಳಿತ, ಕಾರ್ಮಿಕ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಸಂಯುಕ್ತಾಶ್ರಯದಲ್ಲಿ ಜೂ.12ರಂದು ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ನಗರದಲ್ಲಿ ನಡೆಯಲಿದೆ.

ಬೆಳಗ್ಗೆ 9.30ಕ್ಕೆ ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್.ಭಾರತಿ ಅವರು ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ಜಾಥಾಗೆ ಚಾಲನೆ ನೀಡುವರು. ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಅಧ್ಯಕ್ಷ ಡಿ.ಎಸ್. ರಮೇಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಬೆಳಗ್ಗೆ 10.30ಕ್ಕೆ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್. ಭಾರತಿ ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಅಧ್ಯಕ ಡಿ.ಎಸ್.ರಮೇಶ್ ಅಧ್ಯಕ್ಷತೆ ವಹಿಸುವರು.

ಜಿಪಂ ಸಿಇಓ ಎಸ್.ಪೂವಿತಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ವಿಶೇಷ ಆಹ್ವಾನಿತರಾಗಿ ಭಾಗವಹಿಸುವರು. ನಗರಸಭೆ ಪೌರಾಯುಕ್ತ ಎಸ್.ವಿ. ರಾಮದಾಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕಿ ಗೀತಾಲಕ್ಷ್ಮಿ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಹೆಚ್.ಕೆ.ಪಾಂಡು, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಮಂಜುನಾಥ್ ಪ್ರಸನ್ನ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಬಿ.ಮಲ್ಲಿಕಾರ್ಜುನ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಎಂ.ವಿಶ್ವೇಶ್ವರಯ್ಯ, ಜಿಲ್ಲಾ ಪ.ವರ್ಗಗಳ ಕಲ್ಯಾಣಾಧಿಕಾರಿ ಮಂಜುಳ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾಧಿಕಾರಿ ಹೆಚ್.ಎಸ್. ಬಿಂದ್ಯಾ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎನ್. ಚಲುವರಾಜ್, ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಎನ್.ಎಂ.ಸರಸ್ವತಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಮೈಸೂರಿನ ಪೀಪಲ್ಸ್ ಲೀಗಲ್ ಫೋರಂ ನಿರ್ದೇಶಕರು ಹಾಗೂ ಹಿರಿಯ ವಕೀಲ ಪಿ.ಪಿ.ಬಾಬುರಾಜ್ ಉಪನ್ಯಾಸ ನೀಡುವರು ಎಂದು ಪ್ರಕಟಣೆ ತಿಳಿಸಿದೆ.

ವಿವಿಧ ಸಾಮಾಜಿಕ ಭದ್ರತಾ ಪಿಂಚಣಿಗಳ ನವೀಕರಣ

ಚಾಮರಾಜನಗರ, ಜೂ.9– ವಿವಿಧ ಸಾಮಾಜಿಕ ಭದ್ರತಾ ಯೋಜನೆಯಡಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ವಾರ್ಷಿಕ ಪರಿಶೀಲನೆ ಸಂಬಂಧ ನಗರ, ವಾರ್ಡ್‌ನ, ಗ್ರಾಮಾಂತರ ಫಲಾನುಭವಿಗಳ ವಾರ್ಷಿಕ ಪರಿಶೀಲನೆಯನ್ನು ನವೋದಯ ತಂತ್ರಾಂಶದ ಮೂಲಕ ಕೈಗೊಳ್ಳಲಾಗಿದೆ. ಫಲಾನುಭವಿಗಳು ಸಂಬಂಧಪಟ್ಟ ಗ್ರಾಮ ಆಡಳಿತ ಅಧಿಕಾರಿಗಳನ್ನು ಸಂಪರ್ಕಿಸಿ ಆಧಾರ್ ಕಾರ್ಡ್, ಬ್ಯಾಂಕ್, ಅಂಚೆ ಖಾತೆ ಸಂಖ್ಯೆ ಜೆರಾಕ್ಸ್ ಪ್ರತಿಗಳನ್ನು ಜೂ.20ರೊಳಗೆ ನೀಡಿ ನವೀಕರಿಸಿಕೊಳ್ಳಬೇಕು. ತಪ್ಪಿದ್ದಲ್ಲಿ ಪಿಂಚಣಿ ರದ್ದಾಗುವುದು ಎಂದು ಕೊಳ್ಳೇಗಾಲ ತಹಸೀಲ್ದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣ

ಮಹಿಳೆಯರ 'ಶಕ್ತಿ' ಯೋಜನೆಗೆ ನಾಳೆ ರಾಜ್ಯಾದ್ಯಂತ ಏಕ ಕಾಲಕ್ಕೆ ಚಾಲನೆ

● ಬೆಂಗಳೂರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರೆ, ಜಿಲ್ಲೆಗಳಲ್ಲಿ ಸಚಿವರು, ಶಾಸಕರಿಂದ ಚಾಲನೆ
● ಇದರೊಂದಿಗೆ ಕಾಂಗ್ರೆಸ್‌ನ ಮೊದಲ ಗ್ಯಾರಂಟಿ ಜಾರಿಗೆ ಕ್ಷಣಗಣನೆ





ಬೆಂಗಳೂರು, ಜೂ.9(ಕೆಎಂಶಿ)–ಕನ್ನಡ ನಾಡಿನ ಅರ್ಧದಷ್ಟಿರುವ ಮಹಿಳಾ ಸಮೂಹದ ಪಾಲಿನ 'ಶಕ್ತಿ' ಯೋಜನೆಗೆ ರಾಜ್ಯಾದ್ಯಂತ ಏಕಕಾಲಕ್ಕೆ ಚಾಲನೆ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿರ್ಧರಿಸಿದ್ದು ಈ ಕುರಿತು ಸಚಿವರು ಮತ್ತು ಶಾಸಕರಿಗೆ ಸೂಚನೆ ನೀಡಿದ್ದಾರೆ.

ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಘೋಷಿಸಿದ್ದ ಐದು ಪ್ರಮುಖ ಗ್ಯಾರಂಟಿಗಳಲ್ಲಿ ಮೊದಲ ಗ್ಯಾರಂಟಿ ಜೂನ್ 11 ರಂದು ಸಮಸ್ತ ಕನ್ನಡಿಗರಿಗೆ ಸಮರ್ಪಣೆ ಆಗಲಿದೆ. ಕೇಂದ್ರ ಸರ್ಕಾರದ ಬೆಲೆ ಏರಿಕೆ, ಹಣದುಬ್ಬರದ ಕಾರಣಕ್ಕೆ ಸಂಕಷ್ಟಕ್ಕೆ ತುತ್ತಾಗಿರುವ ಕನ್ನಡ ನಾಡಿನ ಮಹಿಳಾ ಸಮೂಹಕ್ಕೆ ಕೊಂಚ ನಿರಾಳ ನೀಡುವ ಶಕ್ತಿ ಯೋಜನೆಗೆ ಅತ್ಯಂತ ಅರ್ಥಪೂರ್ಣವಾಗಿ ಚಾಲನೆ ನೀಡಬೇಕು. ಸರ್ಕಾರ ತನ್ನ ಮೇಲೆ ಬೀಳುವ ಆರ್ಥಿಕ ಹೊರೆಯ ಹೊರತಾಗಿಯೂ ಜನ ಕಲ್ಯಾಣಕ್ಕಾಗಿ ವಿವಿಧ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರುತ್ತಿದೆ. ಅದೂ ಘೋಷಣೆಯಾದ ತಿಂಗಳೊಳಗೆ ಇವುಗಳ ಜಾರಿಗೊಳಿಸುತ್ತಿರುವುದು ದಾಖಲೆಯಾಗಿದೆ.

ಯಾವುದೇ ಜಾತಿ, ಧರ್ಮದ ಮಿತಿಗೆ ಒಳಪಡದ ಶಕ್ತಿ ಯೋಜನೆಯ ಅನುಕೂಲ ಅರ್ಹರಿಗೆಲ್ಲಾ ತಲುಪುವಂತೆ ನೋಡಿಕೊಳ್ಳಬೇಕು ಎಂದು ಸಚಿವರು ಮತ್ತು ಶಾಸಕರುಗಳಿಗೆ ಸೂಚನೆ ನೀಡಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರೂ ಕಾರ್ಯೋನ್ಮುಖರಾಗಿ ಯೋಜನೆಗೆ ಅರ್ಥಪೂರ್ಣ ಚಾಲನೆ ನೀಡಬೇಕು ಎಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ನಾನು (ಮುಖ್ಯಮಂತ್ರಿಗಳು) ಯೋಜನೆಗೆ ಚಾಲನೆ ನೀಡುತ್ತೇನೆ. ಅದೇ ಹೊತ್ತಲ್ಲಿ ಶಾಸಕರು ಮತ್ತು ಜಿಲ್ಲಾ ಸಚಿವರುಗಳು ತಮ್ಮ ತಮ್ಮ ಜಿಲ್ಲೆ ಮತ್ತು ಕ್ಷೇತ್ರಗಳಲ್ಲಿ ಯೋಜನೆಗೆ ಚಾಲನೆ ನೀಡಬೇಕು ಎಂದು ಹೇಳಿದ್ದಾರೆ.

ಬಿಜೆಪಿ ಸರ್ಕಾರದ ಅವಧಿಯ ಆಂಬುಲೆನ್ಸ್ ಸೇವೆ, ಡಯಾಲಿಸಿಸ್ ಕೇಂದ್ರಗಳ ಟೆಂಡರ್ ರದ್ದು

ಬೆಂಗಳೂರು, ಜೂ.9(ಕೆಎಂಶಿ)–ಬಿಜೆಪಿ ಸರ್ಕಾರದ ಅವಧಿಯಲ್ಲಿ ನೀಡಲಾಗಿದ್ದ ಗುತ್ತಿಗೆಗಳ ಮೇಲೆ ಈಗಿನ ಕಾಂಗ್ರೆಸ್ ಸರ್ಕಾರ ಕಣ್ಣಿಟ್ಟಿದ್ದು, ಒಂದೊಂದೇ ಟೆಂಡರ್‌ಗಳನ್ನು ರದ್ದುಗೊಳಿಸುವತ್ತ ಹೆಜ್ಜೆಯನ್ನಿಡುತ್ತಿದೆ. ಆಗಿನ ಸಚಿವ ಡಾ.ಕೆ.ಸುಧಾಕರ್ ತೆಗೆದುಕೊಂಡಿರುವ ಹಲವು ನಿರ್ಧಾರಗಳ ಬಗ್ಗೆಯೂ ತನಿಖೆ ನಡೆಸುವುದಾಗಿ ಈಗಾಗಲೇ ಹೇಳಿಕೊಂಡಿದೆ. ಈಗ ಇದರ ಭಾಗವಾಗಿ 108 ಆಂಬುಲೆನ್ಸ್ ಹಾಗೂ ಡಯಾಲಿಸಿಸ್ ಕೇಂದ್ರಗಳ ಟೆಂಡರ್‌ಗಳನ್ನು ರದ್ದುಗೊಳಿಸಿ ಆದೇಶಿಸಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಕೆಲವು ಟೆಂಡರ್‌ಗಳನ್ನು ರದ್ದುಪಡಿಸಿದ್ದೇವೆ. 108 ಆಂಬುಲೆನ್ಸ್ ಸೇವೆ ನೀಡಲು ಜಿವಿಕೆಗೆ ನೀಡಿದ್ದ ಗುತ್ತಿಗೆಯನ್ನು ರದ್ದುಪಡಿಸಲಾಗಿದೆ. ರಾಜ್ಯದ ಡಯಾಲಿಸಿಸ್ ಕೇಂದ್ರಗಳಲ್ಲಿ ಅವ್ಯವಸ್ಥೆ ಇದೆ. ಹಾಗಾಗಿ ಡಯಾಲಿಸಿಸ್ ಟೆಂಡರ್ ಅನ್ನು ಸಹ ರದ್ದುಪಡಿಸಲಾಗಿದೆ. ಈಗ ಜರೂರಾಗಿರುವ ಕೆಲಸಗಳನ್ನು ಮಾಡುತ್ತಿದ್ದೇವೆ. ಇಲಾಖೆಯ ಕಾರ್ಯನಿರ್ವಹಣೆ ಬದಲಾವಣೆ ಕೆಲಸ ನಡೆಯುತ್ತಿದೆ. ಅಧಿಕಾರಿಗಳು, ವೈದ್ಯರ ಕಾರ್ಯ ನಿರ್ವಹಣೆಯನ್ನು ಸರಿಪಡಿಸಬೇಕಿದೆ. ಪಾಲಿಸಿ ವಿಚಾರಗಳನ್ನು ಬದಲಾಯಿಸಬೇಕಿದೆ. ಸಾಮಾನ್ಯ ಜನರಿಗೆ ಗುಣಮಟ್ಟದ ಚಿಕಿತ್ಸೆ ಕೊಡಿಸುತ್ತೇವೆ ಎಂದು ಹೇಳಿದರು.

ನಮ್ಮ ಇಲಾಖೆಯಲ್ಲಿ ಸಾಕಷ್ಟು ಸುಧಾರಣೆ ತರಲು ಪ್ರಯತ್ನ ಮಾಡುತ್ತಿದ್ದೇವೆ. ಅದರ ಭಾಗವಾಗಿ ಈಗಾಗಲೇ ಕೆಲವು ಟೆಂಡರ್‌ಗಳನ್ನು ಕ್ಯಾನ್ಸಲ್ ಮಾಡಿದ್ದೇವೆ. ಬಾಕಿ ಕೆಲಸಗಳನ್ನು ಆದ್ಯತೆ ಮೇರೆಗೆ ಮಾಡುತ್ತಿದ್ದೇವೆ. ತಜ್ಞರ ಜತೆ ಚರ್ಚೆ ಮಾಡಿ ಸುಧಾರಣೆ ತರುತ್ತೇವೆ ಎಂದು ಹೇಳಿದರು.

ಚಾ.ನಗರ ಆಕ್ಸಿಜನ್ ಪ್ರಕರಣದ ತನಿಖೆ: ಚಾಮರಾಜನಗರದಲ್ಲಿ ಆಕ್ಸಿಜನ್ ಸೂಕ್ತ ಕಾಲಕ್ಕೆ ದೊರಕದೇ ಮೂವತ್ತಕ್ಕೂ ಅಧಿಕ ಮಂದಿ ಸಾವಿಗೀಡಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೆ ತನಿಖೆ ನಡೆಸಲಾಗುವುದು ಎಂದು ಸಚಿವ ದಿನೇಶ್ ಗುಂಡೂರಾವ್ ಇದೇ ವೇಳೆ ತಿಳಿಸಿದರು. ಈ ಪ್ರಕರಣ ಸಂಬಂಧ ಆಗ ಸರಿಯಾಗಿ ತನಿಖೆ ಆಗಿಲ್ಲ. ಅದನ್ನು ದೃಷ್ಟಿಯಲ್ಲಿಟ್ಟು ಕೊಂಡು ಈಗ ಮತ್ತೆ ತನಿಖೆ ನಡೆಸಲಾಗುತ್ತಿದೆ ಎಂದರು.

ಮೈಸೂರು ರಸ್ತೆಗಳೇ ಮಾರುಕಟ್ಟೆಗಳಾಗಿವೆ; ಅಧಿಕಾರಿಗಳಿಗೆ ದೂರಿತ್ತರೆ ಕೇರ್ ಮಾಡುತ್ತಿಲ್ಲ

ಕೌನ್ಸಿಲ್ ಸಭೆಯಲ್ಲಿ ಕಾರ್ಪೊರೇಟರ್‌ಗಳ ಅಳಲು



ಪ್ರೇಮಾ ಶಂಕರೇಗೌಡ



ಕೆ.ವಿ.ಶ್ರೀಧರ್

ಮೈಸೂರು, ಜೂ.9(ಎಸ್‌ಬಿಡಿ)– ಫುಟ್‌ಪಾತ್ ಅತಿಕ್ರಮಣದ ಜೊತೆಗೆ ರಸ್ತೆಗಳೂ ಮಾರ್ಕೆಟ್ ಆಗುತ್ತಿವೆ. ಅಧಿಕಾರಿಗಳು ಮಾತ್ರ ಕಣ್ಮುಚ್ಚಿ ಕುಳಿತಿದ್ದಾರೆ ಎಂದು ಸದಸ್ಯರಾದ ಕೆ.ವಿ.ಶ್ರೀಧರ್ ಹಾಗೂ ಪ್ರೇಮಾ ಶಂಕರೇಗೌಡ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಪ್ರಮುಖ ರಸ್ತೆಗಳ ಪಾದಚಾರಿ ಮಾರ್ಗವನ್ನು ಅತಿಕ್ರಮಿಸಿಕೊಂಡಿರುವುದರಿಂದ ಜನ ರಸ್ತೆಯಲ್ಲಿ ಓಡಾಡುವಂತಾಗಿದೆ. ಇದೀಗ ಕೋಟ್ಯಂತರ ಹಣ ವೆಚ್ಚ ಮಾಡಿ ಅಚ್ಚುಕಟ್ಟಾಗಿ ನಿರ್ಮಿಸಿರುವ ರಸ್ತೆಗಳೂ ಮಾರ್ಕೆಟ್ ಆಗಿವೆ. ತ್ರಿನೇತ್ರ ಸರ್ಕಲ್‌ನಿಂದ ವಿಜಯನಗರ ವಾಟರ್ ಟ್ಯಾಂಕ್‌ವರೆಗೆ, ಅಲ್ಲಿಂದ ಅಭಿಷೇಕ್ ಸರ್ಕಲ್ ಮಾರ್ಗವಾಗಿ ರಿಂಗ್ ರಸ್ತೆವರೆಗೂ ರಸ್ತೆಗಳೇ ವ್ಯಾಪಾರಿ ಸ್ಥಳಗಳಾಗಿವೆ. ಈ ಬಗ್ಗೆ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಸದಸ್ಯ ಕೆ.ವಿ.ಶ್ರೀಧರ್ ಹರಿಹಾಯ್ದರು.

ನಾನೂ ಕೂಡ ಫುಟ್‌ಪಾತ್ ಹಾಗೂ ರಸ್ತೆಯಲ್ಲೇ ವ್ಯಾಪಾರ ಮಾಡುತ್ತಿರುವ ಬಗ್ಗೆ ವಿಡಿಯೋ ಮಾಡಿ ಅಧಿಕಾರಿಗಳಿಗೆ ಕಳುಹಿಸಿದ್ದೇನೆ. ಆದರೂ ಅಧಿಕಾರಿಗಳು ಏಕೆ ಕ್ರಮ ಕೈಗೊಂಡಿಲ್ಲ ಎಂದು ಪ್ರೇಮಾ ಶಂಕರೇಗೌಡ ಪ್ರಶ್ನಿಸಿದರು. ಈ ಬಗ್ಗೆ ಮೇಯರ್ ಶಿವಕುಮಾರ್ ಪ್ರತಿಕ್ರಿಯಿಸಿ, ಆರೋಗ್ಯಾಧಿಕಾರಿ, ಅಭಿವೃದ್ಧಿ ಅಧಿಕಾರಿ ಹಾಗೂ ಎಕ್ಸಿಕ್ಯೂಟಿವ್ ಇಂಜಿನಿಯರ್ ಸ್ಥಳಪರಿಶೀಲನೆ ನಡೆಸಿ, ಸೂಕ್ತ ಕ್ರಮ ವಹಿಸಿದ್ದರ ಬಗ್ಗೆ ಸೋಮವಾರದೊಳಗೆ ವರದಿ ನೀಡುವಂತೆ ಸೂಚಿಸಿದರು. ಮೇಯರ್ ಹಾಗೂ ಆಯುಕ್ತರು ಒಂದು ದಿನ ಸಂಜೆ 7 ಗಂಟೆಗೆ ನಮ್ಮ ವಾರ್ಡ್‌ಗೆ ಭೇಟಿ ನೀಡಬೇಕೆಂದು ಮನವಿ ಮಾಡಿದ ಕೆ.ವಿ.ಶ್ರೀಧರ್, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಹಿಂದೆ ಪಾಲಿಕೆ ಮುಂಭಾಗ ತಳ್ಳುಗಾಡಿಯಲ್ಲಿ ತರಕಾರಿ ಮಾರಾಟ ಮಾಡಿ ಪ್ರತಿಭಟಿಸಿದ ಮಾದರಿಯಲ್ಲೇ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಮೈಸೂರು ನಗರವನ್ನು ಒಂದು ಸುತ್ತು ಹಾಕಿದರೆ ಗಾಬರಿಯಾಗುತ್ತೀರಿ. ಫುಟ್‌ಪಾತ್‌ನಲ್ಲಿ ನಡೆಯುತ್ತಿದ್ದ ವ್ಯಾಪಾರ ಈಗ ರಸ್ತೆಗೆ ಬಂದಿದೆ. ಪಾಪ, ಪಾದಚಾರಿಗಳ ಸ್ಥಿತಿ ಅಪಾಯಕ್ಕೆ ತಲುಪಿದೆ. ಅವರಿಗೆ ಅನಾಹುತವಾದರೆ ಹೊಣೆಯಾರು ಎಂದು ಪ್ರಶ್ನಿಸಿದರು.

ನೀರಿನ ಶುಲ್ಕ ಪರಿಷ್ಕರಣೆ ಮುಂದಕ್ಕೆ

ಕುಡಿಯುವ ನೀರು ಶುಲ್ಕ ಪರಿಷ್ಕರಣೆ ಸಂಬಂಧಿತ ಕಾರ್ಯಸೂಚಿಯನ್ನು ಮೇಯರ್ ಶಿವಕುಮಾರ್ ಮುಂದೂಡಿದರು. ಆದರೆ ಅನಧಿಕೃತ ನೀರಿನ ಸಂಪರ್ಕಗಳನ್ನು ಸಕ್ರಿಯಗೊಳಿಸಲು ಒಪ್ಪಲಾಯಿತು. ನಗರ ಪಾಲಿಕೆ ವ್ಯಾಪ್ತಿ ಹಾಗೂ ಕೆಲವು ಹೊರವಲಯ ಸೇರಿ ಸುಮಾರು 1.67 ಲಕ್ಷ ಸಕ್ರಿಯ ನೀರಿನ ಸಂಪರ್ಕಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದ್ದು, 18 ಸಾವಿರ ಅನಧಿಕೃತ ನೀರಿನ ಸಂಪರ್ಕವಿರಬಹುದೆಂದು ಅಂದಾಜಿಸಲಾಗಿದೆ.ಇವುಗಳಲ್ಲಿ ಗೃಹಬಳಕೆ ನೀರಿನ ಸಂಪರ್ಕಕ್ಕೆ ಒಟ್ಟು 3115 ರೂ. ನಿಗದಿಪಡಿಸಿ, ಹೊಸ ಸಂಪರ್ಕ ಮಂಜೂರಾತಿ ವೇಳೆ 1115 ರೂ. ಪಾವತಿಸಿಕೊಂಡು ಉಳಿಕೆ ಹಣವನ್ನು ನೀರಿನ ಬಿಲ್ ಜೊತೆ ಪ್ರತಿ ತಿಂಗಳು 100 ರೂ. ಸಂಗ್ರಹಿಸಲು ಕೌನ್ಸಿಲ್ ನಿರ್ಣಯಿಸಿತು.

ಇಂದಿನಿಂದ ವಿದ್ಯುತ್ ಕಂಬಗಳಲ್ಲಿನ ವಿವಿಧ ಕೇಬಲ್ ತೆರವು ಕಾರ್ಯಾಚರಣೆ

ಪಾಲಿಕೆ ಕೌನ್ಸಿಲ್ ಸಭೆಯಲ್ಲಿ ಮೇಯರ್ ಶಿವಕುಮಾರ್ ಸೂಚನೆ



ಮೈಸೂರು,ಜೂ.9(ಎಂಟಿವೈ)–ಮೈಸೂರಲ್ಲಿ ವಿದ್ಯುತ್ ಕಂಬಗಳ ಮೇಲೆ ಅವೈಜ್ಞಾನಿಕ ರೀತಿ ಜೋತು ಬಿದ್ದಿರುವ ವಿವಿಧ ಕೇಬಲ್ ವೈರ್‌ಗಳನ್ನು ಶನಿವಾರದಿಂದ (ಜೂ10) ತೆರವುಗೊಳಿಸಲಾಗುವುದು ಎಂದು ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.

ಮೈಸೂರು ಮಹಾನಗರ ಪಾಲಿಕೆಯಲ್ಲಿ ಶುಕ್ರವಾರ ನಡೆದ ವಿಶೇಷ ಸಭೆಯಲ್ಲಿ ಪಾಲಿಕೆಯ ಕೆಲವು ಸದಸ್ಯರು ವಿದ್ಯುತ್ ಕಂಬಗಳ ಮೇಲೆ ಜೋತು ಬಿದ್ದಿರುವ ಕೇಬಲ್ ವೈರ್‌ಗಳನ್ನು ತೆರವುಗೊಳಿಸಬೇಕೆಂದು ಆಗ್ರಹಿಸಿದರು.

ಈ ಹಿಂದೆಯೇ ಗಡುವು ನೀಡಲಾಗಿತ್ತು. ಆದರೆ, ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಹೊಸದಾಗಿ ಕೇಬಲ್ ಅಳವಡಿಕೆ ಎಗ್ಗಿಲ್ಲದೇ ನಡೆಯುತ್ತಿದೆ. ತಡೆಯಲು ಮುಂದಾದರೆ ಕೇಬಲ್ ಏಜೆಂಟರು ಜಗಳಕ್ಕಿಳಿಯುತ್ತಾರೆ. ಪಾಲಿಕೆಯಿಂದ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಹಿರಿಯ ಅಧಿಕಾರಿಗಳ ಕುಮ್ಮಕ್ಕಿನಿಂದ ನಿಯಮ ಉಲ್ಲಂಘಿಸಿ, ಕೇಬಲ್ ಅಳವಡಿಸಲಾಗುತ್ತಿದೆ ಎಂದು ಪಾಲಿಕೆ ಸದಸ್ಯರು ದೂರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪಾಲಿಕೆ ಆಯುಕ್ತ ಜಿ.ಲಕ್ಷ್ಮಿಕಾಂತರೆಡ್ಡಿ, ಕೇಬಲ್ ಅಳವಡಿಕೆ ವಿಚಾರದಲ್ಲಿ ಪಾಲಿಕೆಯ ಯಾವುದೇ ಹಿರಿಯ ಅಧಿಕಾರಿಗಳೂ ಏಜೆಂಟರಿಗೆ ನೆರವು ನೀಡುತ್ತಿಲ್ಲ. ವಿದ್ಯುತ್ ಕಂಬದಲ್ಲಿ ಅಳವಡಿಸಿರುವ ಕೇಬಲ್ ತೆರವುಗೊಳಿಸಲು ಜೂ.5ರಂದು ಗಡುವು ನೀಡಲಾಗಿತ್ತು. ಆದರೆ, ಕೆಲವೆಡೆ ಕೇಬಲ್ ತೆರವಿಗೆ ಸಾರ್ವಜನಿಕರು ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ. ಪರೀಕ್ಷೆ ಇರುವುದರಿಂದ ಇಂಟರ್‌ನೆಟ್ ಸೌಲಭ್ಯ ಸ್ಥಗಿತಗೊಳಿಸದಂತೆ ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಜೂ.15ರವರೆಗೆ ಗಡುವು ನೀಡಲಾಗಿತ್ತು ಎಂದು ಸ್ಪಷ್ಟಪಡಿಸಿದರು.

ಈ ವೇಳೆ ಕೆಲವು ಪಾಲಿಕೆ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿ, ಪಾಲಿಕೆ ಸದಸ್ಯರನ್ನೇ ಕೇಬಲ್ ಏಜೆಂಟರು ಹೆದರಿಸುತ್ತಾರೆ ಎಂದರೆ ಏನರ್ಥ. ಪಾಲಿಕೆಯ ಹಿರಿಯ ಅಧಿಕಾರಿಗಳ ಏಜೆಂಟರಿಗೆ ಸಹಕರಿಸುತ್ತಿದ್ದಾರೆ ಎಂದು ಡಿಒ ಹೇಳಿದ್ದಾರೆ. ಅವರನ್ನು ಕೌನ್ಸಿಲ್ ಸಭೆಗೆ ಕರೆಸಿ ಸ್ಪಷ್ಟನೆ ಕೇಳಬೇಕು ಎಂದು ಪಟ್ಟು ಹಿಡಿದರು. ಮಾಜಿ ಮೇಯರ್ ಅಯೂಬ್‌ಖಾನ್ ಮಾತನಾಡಿ, ಕಳೆದ ಸಭೆಯಲ್ಲಿ ವಿದ್ಯುತ್ ಕಂಬಗಳ ಮೇಲೆ ಅಕ್ರಮವಾಗಿ ಅಳವಡಿಸಿರುವ ಕೇಬಲ್‌ಗಳನ್ನು ತೆರವುಗೊಳಿಸಲು ಸೂಚನೆ ನೀಡಲಾಗಿತ್ತು. ಆದರೆ, ರಾಜಾರೋಷವಾಗಿ ಹೊಸದಾಗಿ ಕೇಬಲ್ ಅಳವಡಿಸುತ್ತಿದ್ದಾರೆ ಎಂದು ದೂರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮೇಯರ್ ಶಿವಕುಮಾರ್, ಶನಿವಾರದಿಂದಲೇ ಮೈಸೂರಿನ ವಿವಿಧೆಡೆ ವಿದ್ಯುತ್ ಕಂಬಗಳಲ್ಲಿ ಅಳವಡಿಸಿರುವ ಕೇಬಲ್ ವೈರ್‌ಗಳ ತೆರವು ಕಾರ್ಯಾಚರಣೆ ಆರಂಭಿಸಬೇಕು. ನಿಯಮಾನುಸಾರ ಭೂಮಿ ಒಳಗೆ ಕೇಬಲ್ ವೈರ್‌ಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಬೇಕು. ನಿಯಮ ಉಲ್ಲಂಘಿಸಿ ಹೊಸದಾಗಿ ಕೇಬಲ್ ಅಳವಡಿಸುವುದು ಕಂಡುಬಂದರೆ, ಪ್ರಕರಣ ದಾಖಲಿಸಬೇಕು. ಪಾಲಿಕೆಯ ಎಲ್ಲಾ ವಲಯ ಕಚೇರಿ ವ್ಯಾಪ್ತಿಯಲ್ಲಿ ಕೇಬಲ್ ವೈರ್‌ಗಳ ತೆರವು ಕಾರ್ಯಾಚರಣೆ ನಡೆಸಬೇಕು ಎಂದು ಸಲಹೆ ನೀಡಿದರು.

ಚೆಸ್ಕಾಂನಿಂದ ಅವೈಜ್ಞಾನಿಕ ಕಾಮಗಾರಿ: ಮೈಸೂರಿನ ಹಲವು ವಾರ್ಡ್‌ಗಳಲ್ಲಿ ಚೆಸ್ಕಾಂ ವತಿಯಿಂದ ಅಳವಡಿಸಿರುವ ಭೂಗತ ಕೇಬಲ್ ಕಾಮಗಾರಿ ಅವೈಜ್ಞಾನಿಕವಾಗಿ ನಡೆಸಲಾಗಿದೆ. ಭೂಮಿಯ ಮೇಲ್ಮಟ್ಟದಿಂದ ಕೇವಲ 1, ಒಂದೂವರೆ ಅಡಿ ಆಳದಲ್ಲಿ 40 ಕೆವಿ ಸಾಮರ್ಥ್ಯದ ವಿದ್ಯುತ್ ಕೇಬಲ್ ಅಳವಡಿಸಲಾಗಿದೆ. ಇದರಿಂದ ಅಪಾಯ ಕಟ್ಟಿಟ್ಟ ಬುತ್ತಿ. ಈ ಕೇಬಲ್‌ನಿಂದ ಏನಾದರೂ ಅನಾಹುತವಾದರೆ ಅದಕ್ಕೆ ಚೆಸ್ಕಾಂ ಸಿಬ್ಬಂದಿಗಳನ್ನೇ ನೇರ ಹೊಣೆಯಾಗಿಸಬೇಕು. ಪ್ರಾಣ ಹಾನಿ, ಗಾಯಗೊಂಡವರಿಗೂ ಚೆಸ್ಕಾಂನಿಂದಲೇ ಪರಿಹಾರ ನೀಡುವಂತಾಗಬೇಕು ಎಂದು ಪಾಲಿಕೆ ಸದಸ್ಯರು ಆಗ್ರಹಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮೇಯರ್ ಶಿವಕುಮಾರ್, ಚೆಸ್ಕಾಂ ವಿದ್ಯುತ್ ಕೇಬಲ್‌ನಿಂದಾಗಿ ಮೈಸೂರು ನಗರದಲ್ಲಿ ಪಾಲಿಕೆ ವತಿಯಿಂದ ನಡೆಸುವ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೂ ತೊಂದರೆಯಾಗುತ್ತಿದೆ. ವಿದ್ಯುತ್ ಕೇಬಲ್ ಎಲ್ಲೆಲ್ಲಿ ಹಾದು ಹೋಗಿದೆ ಎಂದು ಮಾಹಿತಿ ಕೇಳಿದರೆ ಎರಡು ದಿನದ ನಂತರ ಬರುತ್ತಾರೆ. ಈ ಹಿನ್ನೆಲೆಯಲ್ಲಿ ಪಾಲಿಕೆ ಆಯುಕ್ತರು, ಚೆಸ್ಕಾಂ ಎಂಡಿ ಹಾಗೂ ಹಿರಿಯ ಅಧಿಕಾರಿಗಳು, ಪಾಲಿಕೆಯ ಹಿರಿಯ ಸದಸ್ಯರು ಹಾಗೂ ಅಧಿಕಾರಿಗಳ ಸಭೆ ನಡೆಸಿ, ಸಮನ್ವಯತೆ ಸಾಧಿಸಲು ಕ್ರಮ ಕೈಗೊಳ್ಳಬೇಕು ಎಂದರು.

62 ಶೌಚಾಲಯಗಳು: ಮೈಸೂರು ನಗರ ವ್ಯಾಪ್ತಿಯಲ್ಲಿ 62 ಸಾರ್ವಜನಿಕ ಶೌಚಾಲಯಗಳಿವೆ. ಇವುಗಳ ನಿರ್ವಹಣೆ ಟೆಂಡರ್ ಅವಧಿ ಮುಗಿದಿದ್ದು, ಮತ್ತೆ ಟೆಂಡರ್ ಕರೆಯಬೇಕು. 15 ಶೌಚಾಲಯಗಳಿಗೆ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. 6ರ ಅವಧಿ ಮುಗಿದಿಲ್ಲ. 19 ಶೌಚಾಲಯಗಳು ಕಾರ್ಯನಿರ್ವಹಿಸುತ್ತಿವೆ. 22 ಶೌಚಾಲಯಗಳ ರಿಪೇರಿ ಕಾರ್ಯವಿದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಉಚಿತ ಬಳಕೆಯ ಶೌಚಾಲಯಗಳು ಎಷ್ಟಿವೆ ಎಂಬ ಪ್ರಶ್ನೆಗೆ ಸಮರ್ಪಕ ಉತ್ತರ ನೀಡದ ಅಧಿಕಾರಿಯನ್ನು ಬಿಜೆಪಿ ಸದಸ್ಯ ಮಾ.ವಿ. ರಾಮಪ್ರಸಾದ್ ತರಾಟೆಗೆ ತೆಗೆದುಕೊಂಡರು. ಅವಧಿ ಮುಗಿದರೂ ಟೆಂಡರ್ ಕರೆಯದಿರುವುದಕ್ಕೆ ಹಣಕಾಸು ಸ್ಥಾಯಿ ಸಮಿತಿ ಸದಸ್ಯ ನಾಗರಾಜು ಪ್ರಶ್ನಿಸಿದರು. ಚರ್ಚೆ ತಾರಕಕ್ಕೇರುತ್ತಿದ್ದಂತೆ ಮಧ್ಯಪ್ರವೇಶಿಸಿದ ಮೇಯರ್ ಶಿವಕುಮಾರ್, ಮತ್ತೊಂದು ಕೌನ್ಸಿಲ್ ಸಭೆ ಕರೆಯಬೇಕೆಂದು ತೀರ್ಮಾನಿಸಿದ್ದೇನೆ. ಆ ಸಭೆಗೆ ಅಧಿಕಾರಿಗಳು ಶೌಚಾಲಯಗಳ ಫೋಟೋ ಸಹಿತ ಮಾಹಿತಿಯೊಂದಿಗೆ ಬರಬೇಕು ಎಂದು ಹೇಳಿದರು. ಸಭೆಯಲ್ಲಿ ಉಪ ಮೇಯರ್ ಡಾ.ಜಿ.ರೂಪಾ ಇದ್ದರು.

ಮೂರನೇ ಪುಟದಿಂದ

'ಪೇ ಅಂಡ್ ಪಾರ್ಕ್' ಜಾರಿ

ವಿಚಾರಗಳ ಸಂಬಂಧ ಸರ್ವಾನುಮತದ ನಿರ್ಣಯ ಕೈಗೊಳ್ಳಲಾಯಿತು.

ಪೇ ಅಂಡ್ ಪಾರ್ಕ್: ನಗರದ ಹೃದಯ ಭಾಗದಲ್ಲಿ ಅಡ್ಡಾದಿಡ್ಡಿ ವಾಹನ ನಿಲುಗಡೆಗೆ ಬ್ರೇಕ್ ಹಾಕುವ ಮೂಲಕ ಸುಗಮ ರಸ್ತೆ ಸಂಚಾರಕ್ಕೆ ಅನುವು ಮಾಡಿಕೊಡುವ ನಿಟ್ಟಿನಲ್ಲಿ ಹಲವು ವರ್ಷಗಳಿಂದ ಬೇಡಿಕೆಯಲ್ಲಿದ್ದ ಪೇ ಅಂಡ್ ಪಾರ್ಕ್ ವ್ಯವಸ್ಥೆಯನ್ನು ಡಿ.ದೇವರಾಜ ಅರಸು ರಸ್ತೆ, ಅಶೋಕ ರಸ್ತೆ, ಸಯ್ಯಾಜಿರಾವ್ ರಸ್ತೆ ಹಾಗೂ ಟೌನ್‌ಹಾಲ್ ಆವರಣದಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತರಲು ಕೌನ್ಸಿಲ್‌ನಲ್ಲಿ ಸರ್ವಾನುಮತದಿಂದ ನಿರ್ಧರಿಸಲಾಯಿತು. ನಂತರದಲ್ಲಿ ಪ್ರಸ್ತಾವನೆಯಲ್ಲಿರುವ ವಿನೋಬಾ ರಸ್ತೆ, ಹರ್ಷ ರಸ್ತೆ ಹಾಗೂ ಧನ್ವಂತ್ರಿ ರಸ್ತೆಗೂ ಈ ವ್ಯವಸ್ಥೆಯನ್ನು ವಿಸ್ತರಿಸಲು ತೀರ್ಮಾನಿಸಲಾಯಿತು.

ವಾಣಿಜ್ಯ ವಹಿವಾಟು ಹೆಚ್ಚಾಗಿರುವ, ಸದಾ ಜನದಟ್ಟಣೆ ಹಾಗೂ ವಾಹನ ದಟ್ಟಣೆಯಿಂದ ಕೂಡಿರುವ ಈ ಆರು ಪ್ರಮುಖ ರಸ್ತೆಗಳು ಹಾಗೂ ಟೌನ್‌ಹಾಲ್ ಆವರಣದಲ್ಲಿ ಉಚಿತವಾಗಿ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ. ಇಲ್ಲಿ ವ್ಯವಸ್ಥಿತ ವಾಹನ ನಿಲುಗಡೆ ಮೂಲಕ ರಸ್ತೆ ಸಂಚಾರವನ್ನು ಸುಗಮಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ವಾಹನ ನಿಲುಗಡೆಗೆ ಶುಲ್ಕ ವಸೂಲಿ ಮಾಡಲು ಟೆಂಡರ್ ಕರೆದು, ಏಜೆನ್ಸಿ ನೇಮಿಸಿ, ಶುಲ್ಕ ವಸೂಲಿ ಮಾಡುವ ಸಂಬಂಧ ಕೌನ್ಸಿಲ್‌ನಲ್ಲಿ ಕಾರ್ಯಸೂಚಿ ಚರ್ಚೆಗೆ ತರಲಾಯಿತು.

ಈ ವಿಚಾರವಾಗಿ ಹಲವು ಸದಸ್ಯರು ಅಭಿಪ್ರಾಯ ಮಂಡಿಸಿದರು. ಮೇಯರ್ ಶಿವಕುಮಾರ್ ಮಾತನಾಡಿ, ಮಳಿಗೆದಾರರ ಮಾಲೀಕರ ಸಂಘ ಸೇರಿದಂತೆ ವರ್ತಕರ ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಪೇ ಅಂಡ್ ಪಾರ್ಕ್ ಜಾರಿಗೊಳಿಸುವಂತೆ ಮನವಿ ಮಾಡಿವೆ. ಹಾಗಾಗಿ ಶುಲ್ಕ ಪಡೆದು ವಾಹನ ನಿಲುಗಡೆಗೆ ಅವಕಾಶ ನೀಡುವ ಬಗ್ಗೆ ಯಾರದೂ ತಕರಾರಿಲ್ಲ. ಇದಕ್ಕೆ ಸದಸ್ಯರೂ ಒಪ್ಪಿರುವುದರಿಂದ ಪ್ರಾಯೋಗಿಕವಾಗಿ ಡಿ.ದೇವರಾಜ ಅರಸು ರಸ್ತೆ, ಸಯ್ಯಾಜಿರಾವ್ ರಸ್ತೆ, ಅಶೋಕ ರಸ್ತೆ ಹಾಗೂ ಟೌನ್‌ಹಾಲ್ ಆವರಣದಲ್ಲಿ ಈ ವ್ಯವಸ್ಥೆಯನ್ನು ಜಾರಿಗೆ ತರಲು ಕೌನ್ಸಿಲ್ ಒಪ್ಪಿರುವುದಾಗಿ ಪ್ರಕಟಿಸಿದರು.

ಪೂರ್ವಾನ್ವಯ ಬಾಡಿಗೆ ಪರಿಷ್ಕರಣೆ: ಪಾಲಿಕೆಗೆ ಸೇರಿದ ಹಲವು ಮಳಿಗೆಗಳಿಗೆ ಇಂದಿಗೂ 30–40 ರೂ. ಮಾಸಿಕ ಬಾಡಿಗೆ ಪಾವತಿಸಲಾಗುತ್ತಿದೆ. ಹಾಗಾಗಿ ಆದಾಯ ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ನಗರದ 15 ಕಡೆಗಳಲ್ಲಿರುವ ಒಟ್ಟು 1941 ಮಳಿಗೆಗಳಿಗೆ ಆಯಾಯ ಪ್ರದೇಶದ ಉಪ ನೋಂದಣಿ ಮೌಲ್ಯದ ಆಧಾರದಲ್ಲಿ ಚದರಡಿಗೆ ಇಂತಿಷ್ಟು ಎಂದು ಬಾಡಿಗೆ ಪರಿಷ್ಕರಣೆ ಮಾಡಲು ಪಾಲಿಕೆ ಕೌನ್ಸಿಲ್‌ನಲ್ಲಿ ನಿರ್ಣಯಿಸಲಾಯಿತು.

ದೇವರಾಜ ಮಾರುಕಟ್ಟೆ, ವಿಶ್ವೇಶ್ವರಯ್ಯ ಭವನ, ಧನ್ವಂತ್ರಿ ರಸ್ತೆ, ಲ್ಯಾನ್ಸ್‌ಡೌನ್ ಕಟ್ಟಡ, ಕಾಳಿದಾಸ ರಸ್ತೆ, ಹಳೇ ಬಸ್ ನಿಲ್ದಾಣ, ಜಯಲಕ್ಷ್ಮಿಪುರಂ, ಮೇಟಗಳ್ಳಿ, ಬಿಡಾರ ಕೃಷ್ಣಪ್ಪ ರಸ್ತೆ, ಕುಂಬಾರ ಕೊಪ್ಪಲು, ಮಂಡಿ ಮಾರುಕಟ್ಟೆ, ವಾಣಿವಿಲಾಸ ಮಾರುಕಟ್ಟೆ ಗುಜರಿ ಮಳಿಗೆಗಳು ಸೇರಿದಂತೆ ಪೆಟ್ರೋಲ್ ಬಂಕ್, ಟೆನ್ನಿಸ್ ಕೋರ್ಟ್, ಕ್ಷೀರಕೇಂದ್ರ, ಮೀನು ಮಳಿಗೆಗಳ ನೆಲಬಾಡಿಗೆ ಪರಿಷ್ಕರಣೆಯಾಗಿ 18 ವರ್ಷವಾಗಿದೆ. ಪರಿಣಾಮ 1.60 ಕೋಟಿ ರೂ. ಬಾಡಿಗೆ ಸಂಗ್ರಹವಾಗುತ್ತಿದೆ. ಬಾಡಿಗೆ ಪರಿಷ್ಕರಣೆ ಮಾಡಿದರೆ ಸುಮಾರು 5 ಕೋಟಿ ಆದಾಯ ಬರಲಿದೆ. 1941ರಲ್ಲಿ ಬಹುತೇಕ ಮಳಿಗೆಗಳಿಗೆ ಕಡಿಮೆ ಬಾಡಿಗೆ ಇದೆ. ಖಾಲಿ ಮಾಡಲು ನೋಟಿಸ್ ನೀಡಿದ್ದರ ಹಿನ್ನೆಲೆಯಲ್ಲಿ ಹೈಕೋರ್ಟ್, ಮೈಸೂರು ಸಿವಿಲ್ ಕೋರ್ಟ್ ಹಾಗೂ ಆಯುಕ್ತರ ನ್ಯಾಯಾಲಯದಲ್ಲಿ ಪ್ರಕರಣಗಳಿವೆ ಎಂದು ಅಧಿಕಾರಿಯೊಬ್ಬರು ಸಭೆಗೆ ಮಾಹಿತಿ ನೀಡಿದರು. ದೇವರಾಜ ಮಾರುಕಟ್ಟೆ ಸೇರಿದಂತೆ ವಿವಿಧೆಡೆ ಮೂಲ ಮಳಿಗೆದಾರರಿಲ್ಲ. ಲೀಸ್, ಸಬ್‌ಲೀಸ್ ನೀಡಿದ್ದಾರೆ. ಅನಧಿಕೃತವಾಗಿರುವ ವ್ಯಾಪಾರಿಗಳನ್ನು ಖಾಲಿ ಮಾಡಿಸಬೇಕು ಎಂದು ಹಲವು ಸದಸ್ಯರು ಒತ್ತಾಯಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಪಾಲಿಕೆ ಆಯುಕ್ತರು, ಖಾಲಿ ಮಾಡಿಸಲು ನೋಟೀಸ್ ನೀಡಿದ್ದರಿಂದ ಹಲವರು ಕೋರ್ಟ್‌ಗೆ ಹೋಗಿದ್ದಾರೆ. ಆದರೆ ಬಾಡಿಗೆ ಪರಿಷ್ಕರಣೆಗೆ ವಿರೋಧವಿಲ್ಲ. ಈಗಲೂ ಮೂಲ ಬಾಡಿಗೆದಾರರ ಹೆಸರಲ್ಲೇ ವ್ಯವಹರಿಸಲಾಗುತ್ತಿದೆ. ಸದ್ಯ ಸರ್ಕಾರದ ಸೂಚನೆಯಂತೆ ಬಾಡಿಗೆ ಪರಿಷ್ಕರಣೆ ಮಾಡಿದರೆ ಪಾಲಿಕೆ ಆದಾಯ ಬರುತ್ತದೆ. ಮತ್ತೊಂದೆಡೆ ಅನಧಿಕೃತ ಮಳಿಗೆದಾರರನ್ನು ಖಾಲಿ ಮಾಡಿಸುವ ನಿಟ್ಟಿನಲ್ಲಿ ಪ್ರಯತ್ನ ಮುಂದುವರೆಸಬಹುದು ಎಂದರು. ಅಂತಿಮವಾಗಿ ಮೇಯರ್ ಶಿವಕುಮಾರ್, ಸರ್ಕಾರದ ಸುತ್ತೋಲೆಯಂತೆ ಪಾಲಿಕೆ ಮಳಿಗೆಗಳ ಬಾಡಿಗೆ ದರವನ್ನು ಆಯಾಯ ಪ್ರದೇಶದ ಉಪ ನೋಂದಣಿ ಮೌಲ್ಯಾನುಸಾರ(ಚದರಡಿಗೆ) ಪರಿಷ್ಕರಣೆ ಮಾಡಿ, ಜನವರಿ 1ರಿಂದ ಪೂರ್ವಾನ್ವಯವಾಗುವಂತೆ ಜಾರಿಗೊಳಿಸಲು ಕೌನ್ಸಿಲ್ ನಿರ್ಣಯಿಸಿದೆ ಎಂದರು.

ಸ್ಮಶಾನಕ್ಕೆ ಜಾಗ; ವಾಗ್ವಾದ: ವಿದ್ಯಾರಣ್ಯಪುರಂ ಲಿಂಗಾಯತರ ಸ್ಮಶಾನಕ್ಕೆ ಹೊಂದಿಕೊಂಡಂತಿರುವ ಸಿವೇಜ್ ಫಾರಂಗೆ ಸೇರಿದ 2 ಎಕರೆ ಭೂಮಿಯನ್ನು ಸ್ಮಶಾನಕ್ಕೆ ಬಿಟ್ಟುಕೊಡಲು ಕೌನ್ಸಿಲ್ ಒಪ್ಪಿಗೆ ಸೂಚಿಸಿತು. ಆದರೆ ಈ ಸಂಬಂಧ ಪರ–ವಿರೋಧ ಅಭಿಪ್ರಾಯ ವ್ಯಕ್ತವಾಗಿದ್ದಲ್ಲದೆ ಕೆಲ ಕಾಲ ಗದ್ದಲ ಉಂಟಾಯಿತು. ಹಸುಗಳಿಗೆ ಮೇವು ಬೆಳೆಯಲೆಂದು ಮಹಾರಾಜರು, ಗೋಪಾಲಕರಿಗೆ ನೀಡಿರುವ ಭೂಮಿಯನ್ನು ಸ್ಮಶಾನಕ್ಕೆ ನೀಡುವುದು ಸರಿಯಲ್ಲ. ಬೇರೆ ಜಾಗದಲ್ಲಿ ಬೇಕಿದ್ದರೆ ಜಾಗ ಕಲ್ಪಿಸಿ ಎಂದು ಪ್ರೇಮಾ ಶಂಕರೇಗೌಡ, ಪುಷ್ಪಲತಾ ಜಗನ್ನಾಥ್, ರಜನಿ ಅಣ್ಣಯ್ಯ, ಆರ್.ನಾಗರಾಜು, ಸತ್ಯರಾಜ್ ಮತ್ತಿತರರು ಹೇಳಿದರು. ಬಿ.ವಿ.ಮಂಜುನಾಥ್, ಶೋಭಾ ಸುನಿಲ್ ಮತ್ತಿತರರು, ಸ್ಮಶಾನಕ್ಕೆ ಹೊಂದಿಕೊಂಡಿರುವ ಕಾರಣಕ್ಕೆ ಆ ಜಾಗವನ್ನು ನೀಡುವಂತೆ ಮನವಿ ಮಾಡಲಾಗಿದೆ. ಈ ವಿಚಾರದಲ್ಲಿ ಗದ್ದಲ ಮಾಡುವುದು ಸರಿಯಲ್ಲ ಎಂದರು. ಶಾಸಕ ಶ್ರೀವತ್ಸ, ಈಗಿರುವ ಸ್ಮಶಾನದಲ್ಲಿ ಸ್ಥಳಾವಕಾಶವಿಲ್ಲದ ಕಾರಣ ಪಕ್ಕದ 2 ಎಕರೆ ಜಮೀನು ನೀಡುವಂತೆ ಮನವಿ ಮಾಡಿದರು. ಕೆ.ವಿ.ಶ್ರೀಧರ್, ಗೋರಿ ನಿರ್ಮಿಸುವುದು ವೀರಶೈವ ಲಿಂಗಾಯತ ಸಮುದಾಯದ ಸಂಪ್ರದಾಯ, ಈ ಬಗ್ಗೆ ಲಘುವಾಗಿ ಮಾತನಾಡಬೇಡಿ ಎಂದರು. ಹೀಗೆ ಪರ–ವಿರೋಧ ಅಭಿಪ್ರಾಯಗಳ ನಡುವೆಯೇ ಮೇಯರ್ ಶಿವಕುಮಾರ್, ಕಾರ್ಯಸೂಚಿಗೆ ಒಪ್ಪಿಗೆ ಸೂಚಿಸಿದರು. ಇದರಿಂದ ಸಿಟ್ಟಾದ ಸತ್ಯರಾಜ್, ಸೈಯದ್ ಅಸ್ರತ್ ಉಲ್ಲಾ, ಸಿ.ಶ್ರೀಧರ್, ಅನ್ವರ್ ಬೇಗ್, ರಜನಿ, ಪುಷ್ಪಲತಾ, ಶಾಂತಕುಮಾರಿ ಮತ್ತಿತರರು ಮೇಯರ್ ಪೀಠದೆದುರು ಜಮಾಯಿಸಿ, ಆಕ್ರೋಶ ವ್ಯಕ್ತಪಡಿಸಿದರು. ಯಾವ ಸಮಾಜಕ್ಕೆ ಸಂಬಂಧಿಸಿದ ಈ ರೀತಿಯ ಪ್ರಕರಣಗಳನ್ನು ಹೀಗೆಯೇ ಪರಿಗಣಿಸುವುದಾಗಿ ಮೇಯರ್ ಶಿವಕುಮಾರ್ ಭರವಸೆ ನೀಡಿ, ಪರಿಸ್ಥಿತಿ ತಿಳಿಗೊಳಿಸಿದರು.

ಮೂರು ಸಮಿತಿಯ ಸದಸ್ಯರ ಆಯ್ಕೆ ಮುಂದೂಡಿಕೆ

ಮೈಸೂರು, ಜೂ.9 (ಎಂಟಿವೈ)– ಪುರಭವನ, ಸಿವೇಜ್ ಫಾರಂ ಹಾಗೂ ಅಂಬಳೆ ಅಣ್ಣಯ್ಯ ಪಂಡಿತ್ ಮ್ಯಾನೇಜ್‌ಮೆಂಟ್ ಸಮಿತಿಗೆ ಸದಸ್ಯರ ಆಯ್ಕೆ ಪ್ರಕ್ರಿಯೆ ರದ್ದುಪಡಿಸಲಾಗಿದೆ. ಮಹತ್ವದ ಪಾಲಿಕೆಯ ವಿಶೇಷ ಕೌನ್ಸಿಲ್ ಸಭೆಗೆ ತಡವಾಗಿ ಆಗಮಿಸಿದ ಸದಸ್ಯರಿಂದಾಗಿ ಮಾತಿನ ಚಕಮಕಿ ಹಾಗೂ ಕೋಲಾಹಲ ಉಂಟಾಯಿತು. ಪರಿಸ್ಥಿತಿ ಕೈ ಮೀರಿದ ಹಿನ್ನೆಲೆಯಲ್ಲಿ ಚುನಾವಣೆಯನ್ನು ರದ್ದುಪಡಿಸಿ ಮುಂದೆ ಚುನಾವಣೆ ದಿನಾಂಕ ಪ್ರಕಟಿಸಿ ಮೂರು ಸಮಿತಿಗಳಿಗೂ ಹೊಸದಾಗಿ ಪ್ರಕ್ರಿಯೆ ನಡೆಸಲಾಗುವುದು ಎಂದು ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.

ಶನಿವಾರ ನಡೆದ ಪಾಲಿಕೆಯ ವಿಶೇಷ ಕೌನ್ಸಿಲ್ ಸಭೆಯಲ್ಲಿ ಪುರಭವನ, ಸಿವೇಜ್ ಫಾರಂ ಹಾಗೂ ಅಂಬಳೆ ಅಣ್ಣಯ್ಯ ಪಂಡಿತ್ ಮ್ಯಾನೇಜ್‌ಮೆಂಟ್ ಸಮಿತಿಗೆ ಸದಸ್ಯರ ಆಯ್ಕೆಗೆ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಸಂಪ್ರದಾಯದಂತೆ ಮೊದಲಿಗೆ ಪುರಭವನ ಸಮಿತಿಗೆ ನಾಮಪತ್ರ ಆಹ್ವಾನಿಸಲಾಯಿತು. ಈ ವೇಳೆ ಮೂರು ಪಕ್ಷದಿಂದ 9 ಮಂದಿ ನಾಮಪತ್ರ ಸಲ್ಲಿಸಿದರು. ನಾಮಪತ್ರ ಸಲ್ಲಿಕೆ, ಹಿಂಪಡೆಯಲು ನೀಡಿದ್ದ ಸಮಯ ಮುಗಿದ ಸಾಕಷ್ಟು ಸಮಯದ ನಂತರ ಕೌನ್ಸಿಲ್ ಸಭಾಂಗಣಕ್ಕೆ 5–6 ಸದಸ್ಯರು ಆಗಮಿಸಿದರು. ಇದಕ್ಕೆ ಮಾಜಿ ಮೇಯರ್ ಅಯೂಬ್‌ಖಾನ್ ಆಕ್ಷೇಪಿಸಿ, ಚುನಾವಣಾ ಪ್ರಕ್ರಿಯೆ ಆರಂಭಕ್ಕೂ ಮುನ್ನ ಬಂದವರಿಗೆ ಮಾತ್ರ ಮತದಾನ ಮಾಡಲು ಅವಕಾಶ ನೀಡಬೇಕು. ತಡವಾಗಿ ಬಂದವರಿಗೆ ಅವಕಾಶ ನೀಡಬಾರದು ಎಂದು ಆಕ್ಷೇಪಿಸಿದರು. ಇದರಿಂದ ಆಡಳಿತ ಹಾಗೂ ವಿರೋಧ ಪಕ್ಷಗಳ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು. ಅಂತಿಮವಾಗಿ ಮೇಯರ್ ಶಿವಕುಮಾರ್ ಸಭೆಯನ್ನು 10 ನಿಮಿಷಗಳ ಕಾಲ ಸಭೆ ಮುಂದೂಡಿದರು. ಬಳಿಕ ಸಭೆ ಪುನಾರಂಭವಾದಾಗಲೂ ವಾದ–ಪ್ರತಿವಾದ ನಡೆಯಿತು. ನಂತರ ಚುನಾವಣಾ ಪ್ರಕ್ರಿಯೆಯನ್ನೇ ರದ್ದು ಮಾಡಲಾಗಿದ್ದು, ಮುಂದೆ ಚುನಾವಣಾ ದಿನಾಂಕ ಪ್ರಕಟಿಸಿ, ಮೂರು ಸಮಿತಿಗಳಿಗೆ ಹೊಸದಾಗಿ ಚುನಾವಣಾ ಪ್ರಕ್ರಿಯೆ ನಡೆಸಿ ಸದಸ್ಯರನ್ನು ಆಯ್ಕೆ ಮಾಡುವುದಾಗಿ ಘೋಷಿಸಿದರು.

ಶಿಥಿಲಗೊಂಡ ಕಟ್ಟಡ ತೆರವು ಮಾಡದ ಅಧಿಕಾರಿಗೆ ತರಾಟೆ

ಮೈಸೂರು,ಜೂ.9 (ಎಂಟಿವೈ)– ಶಿಥಿಲಗೊಂಡಿರುವ ಕಟ್ಟಡ ತೆರವುಗೊಳಿಸುವಂತೆ ಮನವಿ ಸಲ್ಲಿಸಿ 20 ತಿಂಗಳಾದರೂ ಯಾವುದೇ ಕ್ರಮ ತೆಗೆದುಕೊಳ್ಳದಿರುವ ವಲಯ ಕಚೇರಿಯ 1ರ ಅಧಿಕಾರಿ ವಿರುದ್ಧ ಸೂಕ್ತ ಕ್ರಮ ಜರುಗಿಸುವಂತೆ ಮೇಯರ್ ಶಿವಕುಮಾರ್ ಸೂಚಿಸಿದರು.

ಬಿಜೆಪಿ ಸದಸ್ಯ ಬಿ.ವಿ.ಮಂಜುನಾಥ್ ಅವರು, ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಮನೆಯ ಸಮೀಪದಲ್ಲಿ ಹಳೇ ಕಟ್ಟಡ ತೆರವುಗೊಳಿಸುವಂತೆ ದಿನಾಂಕ 12–10–2021ರಲ್ಲಿ ಮನವಿ ಸಲ್ಲಿಸಲಾಗಿದೆ. 20 ತಿಂಗಳು ಕಳೆದರೂ ಈ ಸಣ್ಣ ಕೆಲಸ ಆಗಿಲ್ಲ. ಜನರ ಜೀವದೊಂದಿಗೆ ಚೆಲ್ಲಾಟವಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಧ್ಯೆ ಪ್ರವೇಶಿಸಿದ ಬಿಜೆಪಿ ಸದಸ್ಯ ರಮೇಶ್ ಮೇಲಿನ ಅಧಿಕಾರಿಗಳನ್ನು ಬಿಟ್ಟು, ಕಿರಿಯ ಅಧಿಕಾರಿ ಮೇಲೆ ಕ್ರಮ ಜರುಗಿಸುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು. ಇದಕ್ಕೆ ಕುಪಿತರಾದ ಮೇಯರ್ ಶಿವಕುಮಾರ್, ಅಧಿಕಾರಿಗಳ ವಿಷಯದಲ್ಲಿ ಮಧ್ಯ ಪ್ರವೇಶಿಸದಂತೆ ಖಾರವಾಗಿ ಸೂಚಿಸಿದರು.

ಬಿಜೆಪಿಯವರು ಆರ್‌ಎಸ್‌ಎಸ್ ಸೇರಿದಂತೆ ತಮ್ಮದೇ ಸಂಸ್ಥೆಗಳಿಗೆ ಸರ್ಕಾರಿ ಭೂಮಿ ನೀಡಿದ್ದಾರೆ

ಸಚಿವ ದಿನೇಶ್ ಗುಂಡೂರಾವ್ ಗಂಭೀರ ಆರೋಪ

ಬೆಂಗಳೂರು: ಬಿಜೆಪಿ ಸರ್ಕಾರದ ಅಧಿಕಾರದಲ್ಲಿದ್ದಾಗ ಆರ್‌ಎಸ್‌ಎಸ್ ಮತ್ತು ತಮ್ಮ ಇತರೆ ಸಂಸ್ಥೆಗಳಿಗೆ ಸರ್ಕಾರಿ ಭೂಮಿ ಪರಭಾರೆ ಮಾಡಿದ್ದಾರೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಗಂಭೀರ ಆರೋಪ ಮಾಡಿದ್ದಾರೆ.



ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ರಾಜ್ಯದ ನೂರಾರು ಎಕರೆ ಸರ್ಕಾರಿ ಜಾಗವನ್ನು ಆರ್‌ಎಸ್‌ಎಸ್ ಸೇರಿದಂತೆ ಸಂಸ್ಥೆಗಳಿಗೆ ನೀಡಿದ್ದಾರೆ. ತಮ್ಮ ಪಕ್ಷ ಹಾಗೂ ಪಕ್ಷದ ಸಿದ್ಧಾಂತ ಬೆಳವಣಿಗೆಗೆ ಹೀಗೆ ಮಾಡಿದ್ದು, ಕಾನೂನು ಉಲ್ಲಂಘಿಸಿ ಭೂಮಿ ನೀಡಿರುವುದರ ಕುರಿತು ಸಿಎಂ ಹಾಗೂ ಕಂದಾಯ ಇಲಾಖೆ ಪರಿಶೀಲನೆ ನಡೆಸಲಿದೆ ಎಂದರು.

ಬಿಜೆಪಿಯವರು ಇತಿಹಾಸ ತಿರುಚುವ ಕೆಲಸ ಮಾಡಿದ್ದಾರೆ. ಅಧಿಕಾರದಲ್ಲಿದ್ದಾಗ ದ್ವೇಷ ಬಿತ್ತುವ ಕೆಲಸ ಮಾಡುತ್ತಿದ್ದರು. ಇದೇ ಕಾರಣಕ್ಕೆ ಶಾಲಾ ಪಠ್ಯ ಪುಸ್ತಕ ಪರಿಷ್ಕರಣೆ ಮಾಡಿದ್ದರು ಎಂದು ಬಿಜೆಪಿ ವಿರುದ್ಧ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಆರೋಪಗಳ ಸುರಿಮಳೆಗರೆದಿದ್ದಾರೆ.

ಸಂಘ ಪರಿವಾರಕ್ಕೆ ಸೇರಿದ ಅನೇಕ ಸಂಸ್ಥೆಗಳಿಗೆ ಸಾಕಷ್ಟು ಸರ್ಕಾರಿ ಆಸ್ತಿಗಳನ್ನು ಹಸ್ತಾಂತರಿಸಲಾಗಿದೆ. ಆದ್ದರಿಂದ, ನಾವು ಅವುಗಳನ್ನು ಸರಿಯಾಗಿ, ಕಾನೂನುಬದ್ಧವಾಗಿ ಮಾಡಲಾಗಿದೆಯೇ ಎಂದು ನೋಡಬೇಕು. ಆ ವಿಷಯಗಳಲ್ಲಿ ಏನು ಮಾಡಬಹುದು ಎಂದು ನೋಡುತ್ತಿದ್ದೇವೆ. ಆದರೆ ಖಂಡಿತವಾಗಿಯೂ, ಆರೆಸ್ಸೆಸ್ ಮತ್ತು ಬಿಜೆಪಿಗೆ ನಿಕಟ ಸಂಪರ್ಕ ಹೊಂದಿರುವ ಸಂಸ್ಥೆಗಳಿಗೆ ರಾಜ್ಯ ಸರ್ಕಾರದ ಸಾಕಷ್ಟು ಆಸ್ತಿಗಳನ್ನು ನೀಡಲಾಗಿದೆ ಎಂದರು.

ಇದೇ ವೇಳೆ ಪಠ್ಯ ಪುಸ್ತಕ ಪರಿಷ್ಕರಣೆ ಕುರಿತು ಮಾತನಾಡಿದ ಅವರು, 'ನಾವು ರಾಷ್ಟ್ರ ನಿರ್ಮಾಣಕ್ಕೆ ನಿಜವಾಗಿಯೂ ಕೊಡುಗೆ ನೀಡಿದ ಜನರ ಕಥೆಗಳನ್ನು ಹೊಂದಿರಬೇಕು. ನೀವು ಸ್ವಾತಂತ್ರ್ಯ ಹೋರಾಟದ ಬಗ್ಗೆ ಮಾತನಾಡಿದರೆ, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರು, ಅದರ ಇತಿಹಾಸವನ್ನು ಪ್ರತಿಬಿಂಬಿಸಬೇಕೇ ಹೊರತು ನಿಮ್ಮ ವೈಯಕ್ತಿಕ ಆಯ್ಕೆಗಳಲ್ಲ. ನೀವು ಯಾರನ್ನು ಆರಾಧಿಸುತ್ತೀರಿ. ಸೈದ್ಧಾಂತಿಕ ವಿಚಾರಗಳನ್ನು ಪಠ್ಯಪುಸ್ತಕಗಳಲ್ಲಿ ತುಂಬಲು ಪ್ರಯತ್ನಿಸಿದ್ದು ಸರಿಯಲ್ಲ. ಆದ್ದರಿಂದ ಕಾಂಗ್ರೆಸ್ ಪಕ್ಷವು ಇದನ್ನು ಗಂಭೀರವಾಗಿ ಪರಿಗಣಿಸಿ ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ. ಪ್ರಮುಖವಾಗಿ ಕೆಬಿ ಹೆಡ್ಗೇವಾರ್ ಅವರನ್ನೂ ಒಳಗೊಂಡಂತೆ ಹಿಂದಿನ ಬಿಜೆಪಿ ಸರ್ಕಾರವು ಪರಿಚಯಿಸಿದ ಪಠ್ಯಪುಸ್ತಕಗಳಿಂದ ಕೆಲವು ಪಾಠಗಳನ್ನು ತೆಗೆದುಹಾಕಲು ಕಾಂಗ್ರೆಸ್ ಸರ್ಕಾರ ಯೋಜಿಸುತ್ತಿದೆ ಎಂದು ಅವರು ಹೇಳಿದರು.

ಚಾಮರಾಜನಗರದ ಆಕ್ಸಿಜನ್ ದುರಂತದ ಮರುತನಿಖೆ

ಬೆಂಗಳೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿನ ವಿವಿಧ ಹಗರಣಗಳ ಆರೋಪಗಳ ಬಗ್ಗೆ ಹೊಸದಾಗಿ ತನಿಖೆ ಪ್ರಾರಂಭಿಸಲು ಮುಂದಾದ ಕಾಂಗ್ರೆಸ್ ಸರ್ಕಾರ, ಇದೀಗ ಚಾಮರಾಜನಗರದ ಆಕ್ಸಿಜನ್ ದುರಂತದ ಬಗ್ಗೆ ಮರು ತನಿಖೆ ನಡೆಸಲು ನಿರ್ಧರಿಸಿದೆ. ಈ ಬಗ್ಗೆ ಮಾಹಿತಿ ನೀಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಚಾಮರಾಜನಗರದ ಆಕ್ಸಿಜನ್ ದುರಂತದ ಬಗ್ಗೆ ಮರು ತನಿಖೆ ನಡೆಸಲಾಗುವುದು. ಈ ಹಿಂದೆ ಇದ್ದ ಸರ್ಕಾರ ತನಿಖೆಗೆ ಕೆಲವರನ್ನು ನೇಮಕ ಮಾಡಿತ್ತು. ಆದರೆ ಆಕ್ಸಿಜನ್ ದುರಂತದ ಬಗ್ಗೆ ತನಿಖೆ ಇನ್ನೂ ಪೂರ್ಣಗೊಂಡಿಲ್ಲ. ಹೊಸ ಸರ್ಕಾರ ಬಂದಿದ್ದರಿಂದ ಮರು ತನಿಖೆಗೆ ನಿರ್ಧಾರ ಮಾಡಿದ್ದೇವೆ. ಇದಕ್ಕಾಗಿ ಡಿಪಿಆರ್ ಕೂಡ ರೆಡಿಯಾಗುತ್ತಿದೆ ಎಂದರು.



ಆಕ್ಸಿಜನ್ ದುರ್ಘಟನೆ ಸಂಬಂಧ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ (ಕೆಎಸ್‌ಎಲ್‌ಎಸ್‌ಎ) ಕೋವಿಡ್ ನಿರ್ವಹಣಾ ಸಮಿತಿಯು ಹೈಕೋರ್ಟ್‌ಗೆ ಈಗಾಗಲೇ ವರದಿ ಸಲ್ಲಿಸಿದ್ದು, 2021ರ ಮೇ 2–3 ರ ರಾತ್ರಿ 36 ಒಳರೋಗಿಗಳ ಸಾವಿಗೆ ಆಮ್ಲಜನಕದ ಲಭ್ಯತೆ ಕೊರತೆಯೇ ಕಾರಣ ಎಂದು ಉಲ್ಲೇಖಿಸಿದೆ.

ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಚಾಮರಾಜನಗರದ ಸರ್ಕಾರಿ ಆಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆಯಿಂದ 36 ರೋಗಿಗಳು ಮೃತಪಟ್ಟಿದ್ದಕ್ಕೆ ಸಂಬಂಧಿಸಿದ ಆರೋಪ ಮತ್ತು ಇತರ ಹಗರಣಗಳ ಬಗ್ಗೆ ತನಿಖೆ ನಡೆಸುವಂತೆ ಇಲಾಖೆಯ ಅಧಿಕಾರಿಗಳಿಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಇತ್ತೀಚೆಗಷ್ಟೇ ಸೂಚಿಸಿದ್ದರು. ಸಾವಿಗೆ ಯಾರು ಹೊಣೆ ಮತ್ತು ತಪ್ಪಿತಸ್ಥರು ಯಾರು ಎಂಬುದರ ಪತ್ತೆಗೆ ಯಾವುದೇ ತನಿಖೆ ನಡೆದಿಲ್ಲ. ಹೀಗಾಗಿ ತಕ್ಷಣ ತನಿಖೆ ನಡೆಸಬೇಕು ಎಂದು ಅಧಿಕಾರಿಗಳಿಗೆ ಹೇಳಿದ್ದರು.

ಘಟನೆಯಲ್ಲಿ ಮೃತಪಟ್ಟ ರೋಗಿಗಳ ಕುಟುಂಬಸ್ಥರು ಜೂನ್ 5 ರಂದು ಚಾಮರಾಜನಗರದ ಪ್ರವಾಸಿ ಮಂದಿರದಲ್ಲಿ ಸಮಾಲೋಚನೆ ಸಭೆ ನಡೆಸಿದ್ದು, ಬಿಜೆಪಿ ಸರ್ಕಾರ ಪ್ರಕರಣದ ತನಿಖೆಯನ್ನು ಪಾರದರ್ಶಕವಾಗಿ ನಡೆಸಲಿಲ್ಲ. ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರವನ್ನು ಕೊಟ್ಟಿಲ್ಲ ಎಂದು ಆರೋಪಿಸಿದ್ದರು. ಅಲ್ಲದೆ, ಪ್ರಕರಣದ ಸೂಕ್ತ ತನಿಖೆ ನಡೆಸಲು ಕಾಂಗ್ರೆಸ್ ಮೇಲೆ ಒತ್ತಡ ಹೇರಲು ನಿರ್ಧರಿಸಿದ್ದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಮೃತರ ಕುಟುಂಬಕ್ಕೆ ಪರಿಹಾರ ಹಾಗೂ ಸರ್ಕಾರಿ ನೌಕರಿ ನೀಡುವ ಭರವಸೆ ನೀಡುವುದಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭರವಸೆ ನೀಡಿದ್ದರು. ಹೀಗಾಗಿ ಸದ್ಯ ಪರಿಹಾರ ಹಣಕ್ಕಿಂತ ನೌಕರಿಗೆ ಕುಟುಂಬಸ್ಥರು ಮನವಿ ಮಾಡಿದ್ದಾರೆ.

ಏನಿದು ಆಕ್ಸಿಜನ್ ದುರಂತ: ಮೇ 2, 2021ರಂದು ಚಾಮರಾಜನಗರ ಜಿಲ್ಲೆಯ ಕೊರೊನಾ ಆಸ್ಪತ್ರೆಯಲ್ಲಿ ಆಮ್ಲಜನಕ ಪೂರೈಕೆಯಾಗಬೇಕಿತ್ತು. ಆದರೆ ಮೈಸೂರಿನಿಂದ ಸಕಾಲದಲ್ಲಿ ಆಮ್ಲಜನಕ ಪೂರೈಕೆಯಾಗದೇ ರಾತ್ರಿ 10:30ರಿಂದ ಬೆಳಗಿನ ಜಾವ 2:30ರ ವರೆಗೆ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆ ಉಂಟಾಗಿ ವೆಂಟಿಲೇಟರ್, ಐಸಿಯುನಲ್ಲಿ ಹಾಗೂ ಉಸಿರಾಟ ತೊಂದರೆಯಿಂದ ರೋಗಿಗಳು ಸಾವನ್ನಪ್ಪಿದ್ದರು.

ದುರ್ಘಟನೆಯಲ್ಲಿ ಸರಕಾರದ ಅಂಕಿಅಂಶಗಳ ಪ್ರಕಾರ 24 ಮಂದಿ ಮೃತಪಟ್ಟಿದ್ದಾರೆ ಎಂದಿತ್ತು ಆದರೆ ಪ್ರಕರಣದ ತನಿಖೆಗಾಗಿ ಹೈಕೋರ್ಟ್ ನೇಮಿಸಿದ್ದ ತನಿಖಾ ಸಮಿತಿ 36 ಮಂದಿ ಮೃತಪಟ್ಟಿದ್ದಾರೆ ಎಂದು ವರದಿ ನೀಡಿತ್ತು. ಹೈಕೋರ್ಟ್‌ನ ಸೂಚನೆಯಂತೆ, ಮೃತಪಟ್ಟ 24 ಮಂದಿಯ ಕುಟುಂಬಗಳಿಗೆ ಕಳೆದ ವರ್ಷ 2021ರಲ್ಲಿ ಜೂನ್ ತಿಂಗಳ ಆರಂಭದಲ್ಲಿ ತಲಾ 2 ಲಕ್ಷ ರೂ. ಹಾಗೂ ಆಗಸ್ಟ್ ಎರಡನೇ ವಾರದಲ್ಲಿ 13 ಮಂದಿಗೆ ಹೆಚ್ಚುವರಿಯಾಗಿ ತಲಾ 3 ಲಕ್ಷ ಹಣವನ್ನು ತಾತ್ಕಾಲಿಕ ಪರಿಹಾರವನ್ನು ಜಿಲ್ಲಾಡಳಿತ ವಿತರಿಸಿತ್ತು.

ಕಾರಿನ ಕಿಟಕಿ ಗಾಜು ಒಡೆದು ಡ್ಯಾಶ್ ಬೋರ್ಡ್‌ನಲ್ಲಿದ್ದ 1.10 ಲಕ್ಷ ರೂ. ಕಳವು

ಸರಸ್ವತಿಪುರಂನಲ್ಲಿ ಘಟನೆ



ಮೈಸೂರು, ಜೂ. 9– ಕಾರಿನ ಗಾಜು ಒಡೆದು ಡ್ಯಾಶ್‌ಬೋರ್ಡ್‌ನಲ್ಲಿರಿಸಿದ್ದ 1.10 ಲಕ್ಷ ರೂ.ಗಳನ್ನು ಕಳವು ಮಾಡಿರುವ ಘಟನೆ ಸರಸ್ವತಿಪುರಂ 4ನೇ ಕ್ರಾಸ್‌ನಲ್ಲಿ ನಡೆದಿದೆ.

ವಿದ್ಯಾರಣ್ಯಪುರಂ ನಿವಾಸಿ ಹರಿರಾವ್ ಮಾನೆ(63) ಹಣ ಕಳೆದುಕೊಂಡವರಾಗಿದ್ದು, ಇವರು ಜೂನ್ 6ರಂದು ಬೆಳಗ್ಗೆ 11 ಗಂಟೆಗೆ ಚಾಮುಂಡಿಪುರಂನಲ್ಲಿರುವ ಕರ್ನಾಟಕ ಬ್ಯಾಂಕ್‌ನಲ್ಲಿ 1.10 ಲಕ್ಷ ರೂ. ಡ್ರಾ ಮಾಡಿಕೊಂಡು ತಮ್ಮ ಟಾಟಾ ಮಾಂಜಾ ಕಾರಿನ (ಕೆಎ 09–ಎಂಎ 5106) ಡ್ಯಾಶ್‌ಬೋರ್ಡ್‌ನಲ್ಲಿ ಹಣವನ್ನಿಟ್ಟು ಸರಸ್ವತಿಪುರಂಗೆ ಬಂದಿದ್ದಾರೆ. 11.20ರ ಸುಮಾರಿನಲ್ಲಿ ಸರಸ್ವತಿಪುರಂ 4ನೇ ಕ್ರಾಸ್‌ನಲ್ಲಿರುವ ಐಲೀನ್ ಕನ್‌ಸ್ಟ್ರಕ್ಷನ್ಸ್ ಮುಂಭಾಗ ಕಾರನ್ನು ನಿಲ್ಲಿಸಿ, ಕರ್ನಾಟಕ ಬ್ಯಾಂಕ್ ಸರಸ್ವತಿಪುರಂ ಶಾಖೆಗೆ ಹೋಗಿ 11.45ರಲ್ಲಿ ಹಿಂತಿರುಗಿದಾಗ ಕಾರಿನ ಎಡಭಾಗದ ಗಾಜನ್ನು ಒಡೆದು ಡ್ಯಾಶ್‌ಬೋರ್ಡ್‌ನಲ್ಲಿದ್ದ ಹಣ ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಸರಸ್ವತಿಪುರಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಪರಿಶಿಷ್ಟ ಜಾತಿ, ಪಂಗಡದ ಅನುದಾನ ಸಂಪೂರ್ಣ ಬಳಕೆಯಾಗಬೇಕು

ಜಿಲ್ಲಾಮಟ್ಟದ ಎಸ್‌ಸಿಪಿ, ಟಿಎಸ್‌ಪಿ ಸಭೆಯಲ್ಲಿ ಡಾ. ಕೆ.ವಿ.ರಾಜೇಂದ್ರ



ಮೈಸೂರು, ಜೂ.9– ಪರಿಶಿಷ್ಟ ಜಾತಿ ಹಾಗೂ ಪಂಗಡದ ಫಲಾನುಭವಿಗಳಿಗೆ ಮೀಸಲಿಟ್ಟ ಅನುದಾನ ಸಂಪೂರ್ಣ ಸದ್ಬಳಕೆಯಾಗಬೇಕು. ಇದಕ್ಕಾಗಿ ಪೂರ್ವಸಿದ್ಧತೆ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಬಾಬು ಜಗಜೀವನ್ ರಾಮ್ ಭವನದಲ್ಲಿ ಹಮ್ಮಿಕೊಂಡಿದ್ದ ಎಸ್‌ಸಿಪಿ, ಟಿಎಸ್‌ಪಿ ಪ್ರಗತಿ ಪರಿಶೀಲನಾ ಸಭೆ ಹಾಗೂ ಎಸ್.ಸಿ, ಎಸ್.ಟಿ, ದೌರ್ಜನ್ಯ ತಡೆ ಕಾಯ್ದೆ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ, ಪಂಗಡದ ಜನರಿದ್ದಾರೆ. ಕ್ರಿಯಾ ಯೋಜನೆಗಳನ್ನು ಕ್ರಮಬದ್ಧವಾಗಿ ಮಾಡಿಕೊಳ್ಳಬೇಕು. ನಿಗಧಿಪಡಿಸಿದ ಯೋಜನೆಗಳ ಅನುದಾನ ಬಂದೇ ಬರುತ್ತದೆ. ಕೆಲವೊಂದು ವೇಳೆ ಅನುದಾನವನ್ನು ಉತ್ತಮವಾಗಿ ಬಳಸಿದಾಗ ಬೇರೆ ಜಿಲ್ಲೆಗಳಲ್ಲಿ ಖರ್ಚಾಗದೇ ಉಳಿದ ಅನುದಾನ ನಮ್ಮ ಜಿಲ್ಲೆಗೆ ಬರುವ ಸಾಧ್ಯತೆ ಇರುತ್ತದೆ ಎಂದರು.

ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಶಾಲಾ–ಕಾಲೇಜುಗಳ ನೋಟಿಸ್ ಬೋರ್ಡ್‌ಗಳಲ್ಲಿ ಎಸ್.ಸಿ, ಎಸ್.ಟಿ. ವಿದ್ಯಾರ್ಥಿಗಳಿಗೆ ಇರುವ ಸೌಲಭ್ಯಗಳ ಕುರಿತು ಪಾಂಪ್ಲೆಟ್ಸ್‌ಗಳನ್ನು ಪ್ರದರ್ಶಿಸಬೇಕು, ಎಸ್.ಎಸ್.ಟಿ ಹಾಸ್ಟೆಲ್ ನಿರ್ಮಾಣಕ್ಕೆ ಜಾಗದ ಅಗತ್ಯವಿದ್ದರೆ ಮನವಿ ಸಲ್ಲಿಸಿ ನಿವೇಶನ ಬೇಕಿದ್ದರೆ ಮುಡಾದಿಂದ ಸಿಎ ನಿವೇಶನಗಳನ್ನು ನೀಡಲಾಗುವುದು ಎಂದರು.

ಸಾಕ್ಷಿದಾರರಿಗೆ ಟಿ.ಎ, ಡಿ.ಎ. ಹೆಚ್ಚಳ ಮಾಡಿ: ಪರಿಶಿಷ್ಟರ ದೌರ್ಜನ್ಯ ಪ್ರಕರಣಗಳಲ್ಲಿ ಸಾಕ್ಷಿ ಹೇಳುವವರಿಗೆ ನೀಡುತ್ತಿರುವ ಟಿ.ಎ, ಡಿ.ಎ, ಹೆಚ್ಚಳ ಮಾಡಿ, ಕನಿಷ್ಟ ಒಂದು ದಿನದ ಕೂಲಿಯಷ್ಟಾದರೂ ನೀಡಿದರೆ ಅವರಿಗೂ ಅನುಕೂಲವಾಗುತ್ತದೆ, ಈಗ ನೀಡುತ್ತಿರುವ ಟಿ.ಎ., ಡಿ.ಎ. ಪಡೆಯಲು ಎರಡ್ಮೂರು ಇಲಾಖೆಗಳನ್ನು ಸಂಪರ್ಕಿಸಬೇಕಾಗುತ್ತದೆ ಹಾಗಾಗಿ ಅವರಿಗೆ ಸಾಕ್ಷಿ ಹೇಳಿದ ದಿನವೇ ಟಿ.ಎ., ಡಿ.ಎ. ದೊರೆಯುವಂತಾಗಲಿ ಎಂದು ಸಮಿತಿಯ ಸದಸ್ಯರೊಬ್ಬರು ಅಭಿಪ್ರಾಯಪಟ್ಟರು. ಅದಕ್ಕೆ ದನಿಗೂಡಿಸಿದ ವಿ.ಪ ಸದಸ್ಯರುಗಳಾದ ತಿಮ್ಮಯ್ಯ ಹಾಗೂ ಮಂಜೇಗೌಡ ಈ ಬಗ್ಗೆ ಸದನದಲ್ಲಿ ಚರ್ಚಿಸುವುದಾಗಿ ತಿಳಿಸಿದರು.

ದೌರ್ಜನ್ಯದ ವಿರುದ್ಧ ಜಾಗೃತಿ ಕಾರ್ಯಕ್ರಮಗಳಾಗಲಿ: ಪರಿಶಿಷ್ಟರ ದೌರ್ಜನ್ಯದ ವಿರುದ್ಧ ಹೋಬಳಿ ಹಾಗೂ ತಾಲೂಕು ಮಟ್ಟದಲ್ಲಿ ಜಾಗೃತಿ ಕಾರ್ಯಕ್ರಮಗಳಾಗ ಬೇಕು. ಈ ಸಮುದಾಯಗಳಿಗಿರುವ ಕಾರ್ಯಕ್ರಮಗಳು, ಕಾನೂನಿನ ರಕ್ಷಣೆ, ಸೌಲಭ್ಯ ಸವಲತ್ತುಗಳ ಬಗೆಗೆ ಸಂವಾದ, ಕಮ್ಮಟ, ಬೀದಿನಾಟಕದಂತಹ ಕಾರ್ಯಕ್ರಮಗಳಾಗಬೇಕೆಂದು ಸಮಿತಿಯ ಸದಸ್ಯರೋರ್ವರು ತಿಳಿಸಿದರು.

ಅಂಬೇಡ್ಕರ್ ಹಾಗೂ ಬಾಬು ಜಗಜೀವನ ರಾಂ ಭವನ: ನಗರದಲ್ಲಿ ನಿರ್ಮಿಸಲಾಗುತ್ತಿರುವ ಅಂಬೇಡ್ಕರ್ ಭವನಕ್ಕೆ ಈಗಾಗಲೇ 20 ಕೋಟಿ ಖರ್ಚಾಗಿದ್ದು ಒಳಭಾಗದ ವಿನ್ಯಾಸ, ಆಸನ ಮತ್ತು ಧ್ವನಿ ಬೆಳಕಿನ ವ್ಯವಸ್ಥೆಗೆ 22 ಕೋಟಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಸಮಾಜ ಕಲ್ಯಾಣಾಧಿಕಾರಿ ತಿಳಿಸಿದರು. ಬಾಬು ಜಗಜೀವನರಾಂ ಭವನ ಸಮಾಜ ಕಲ್ಯಾಣ ಇಲಾಖೆಯ ಕಚೇರಿಯಾಗಿ ಬಳಕೆಯಾಗುತಿದ್ದು, ಸಮಾಜ ಕಲ್ಯಾಣ ಇಲಾಖೆಯ ಕಟ್ಟಡವನ್ನು ಬಾಬುಜಗಜೀವನ ರಾಂ ಭವನದಂತೆ ನಿರ್ಮಿಸಲು ಮುಡಾಗೆ ಜಾಗ ಕೋರಿ ಪತ್ರ ಬರೆಯಲಾಗಿದೆ ಹಾಗೂ 16 ಕೋಟಿ ಅನುದಾನ ಒದಗಿಸಲು ಇಲಾಖೆಯಿಂದ ಪತ್ರ ಬಂದಿದೆ ಎಂದರು.

ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಮಾತನಾಡಿ, ಯಾವುದೇ ಯೋಜನೆಯ ಸೌಲಭ್ಯ ಫಲಾನುಭವಿಗೆ ಪೂರ್ಣವಾಗಿ ತಲುಪಬೇಕು ಈ ಬಗ್ಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಪರಿಶೀಲನೆ ಮಾಡಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ನಂಜನಗೂಡು ವಿಧಾನಸಭಾ ಕ್ಷೇತ್ರದ ಶಾಸಕ ದರ್ಶನ್ ಧ್ರುವನಾರಾಯಣ್, ಪೊಲೀಸ್ ವರಿಷ್ಠಾಧಿಕಾರಿಗಳಾದ ಸೀಮಾ ಲಾಟ್ಕರ್ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ರಂಗೇಗೌಡ, ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಸ್ಕಾಲರ್‌ಶಿಪ್ ಆದ್ಯತೆಯಾಗಲಿ

ಎಸ್‌ಸಿ, ಎಸ್‌ಟಿ. ಜನಾಂಗದ ಮಕ್ಕಳಿಗೆ ನೀಡಲಾಗುವ ವಿದ್ಯಾರ್ಥಿವೇತನ ಸಮಯಕ್ಕೆ ದೊರೆತು ಅದರ ಪ್ರಯೋಜನ ಮಕ್ಕಳಿಗೆ ಸಿಗಲಿ, ರಾಜ್ಯ, ಕೇಂದ್ರ ಎಂದು ಒಬ್ಬರ ಮೇಲೊಬ್ಬರು ಹೇಳುವುದನ್ನು ಬಿಟ್ಟು ಅರ್ಹ ವಿದ್ಯಾರ್ಥಿಗಳಿಗೆ ಸಕಾಲಕ್ಕೆ ವಿದ್ಯಾರ್ಥಿ ವೇತನ ಸಿಗುವಂತೆ ನೋಡಿಕೊಳ್ಳಿ ಎಂದು ವಿಧಾನಪರಿಷತ್ ಸದಸ್ಯ ತಿಮ್ಮಯ್ಯ ಅಧಿಕಾರಿಗಳಿಗೆ ಸೂಚಿಸಿದರು.

ವಿಧಾನಪರಿಷತ್‌ನ ಸದಸ್ಯ ಮಂಜೇಗೌಡ ಮಾತನಾಡಿ, ಶಾಲಾ ಕಾಲೇಜುಗಳಲ್ಲಿ ವಿದಾರ್ಥಿವೇತನ ಪಡೆಯುತ್ತಿರುವವರ ಪಟ್ಟಿ ತಯಾರಿಸಿ ಅವರಲ್ಲಿ ಯಾರಿಗೆ ವಿದ್ಯಾರ್ಥಿ ವೇತನ ದೊರಕಿದೆ, ಯಾರಿಗೆ ವಿದಾರ್ಥಿ ವೇತನ ದೊರೆತಿಲ್ಲ. ವಿದ್ಯಾರ್ಥಿ ವೇತನ ಮಂಜೂರಾಗದೆ ಇರುವುದಕ್ಕೆ ಕಾರಣ ಏನೆಂಬುದನ್ನು ಗುರುತಿಸಿ ವಿದ್ಯಾರ್ಥಿ ವೇತನ ದೊರೆಯದಿರುವುದಕ್ಕೆ ವಿದ್ಯಾರ್ಥಿ ವೇತನ ನೀಡುವ ವ್ಯವಸ್ಥೆ ಮಾಡಿ ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಿಗೆ ಸೂಚಿಸಿದರು.

ಇಂದು ನೇತ್ರದಾನ ನೋಂದಣಿ ಶಿಬಿರ

ಮೈಸೂರು, ಜೂ.9– ಎಸ್‌ಬಿಆರ್‌ಆರ್ ಮಹಾಜನ ಪಿಯು ಕಾಲೇಜು ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್), ಸಮರ್ಥನಂ ಅಂಗವಿಕಲರ ಸಂಸ್ಥೆ ಮತ್ತು ಥಿಯೇಟರ್ ಫೋಕ್ಸ್ ತಂಡ ಮೈಸೂರು ಸಂಯುಕ್ತಾಶ್ರಯದಲ್ಲಿ ಜೂ.10ರಂದು ಮಧ್ಯಾಹ್ನ 12 ಗಂಟೆಗೆ ಜಯಲಕ್ಷ್ಮಿಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪದವಿ ಪೂರ್ವ ಕಾಲೇಜಿನ ವಿವೇಕಾನಂದ ಸಭಾಂಗಣದಲ್ಲಿ ವಿಶ್ವ ನೇತ್ರದಾನ ನೋಂದಣಿ ಶಿಬಿರ ಹಾಗೂ ನೇತ್ರದಾನ ಮಹತ್ವದ ಬಗ್ಗೆ ಜಾಗೃತಿ ಅಭಿಯಾನ ಆಯೋಜನೆ ಮಾಡಲಾಗಿದೆ. ನೇತ್ರದಾನ ಮಾಡಿದ ಕಾಲೇಜಿನ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ನೀಡಲಾಗುವುದು ಎಂದು ಪ್ರಾಂಶುಪಾಲರಾದ ಎಸ್.ವಿಷಕಂಠಮೂರ್ತಿ ತಿಳಿಸಿದ್ದಾರೆ.

ಮಹಿಳೆಯರಿಗೆ ಉಚಿತ ಪ್ರಯಾಣ; ಆಟೋ, ಖಾಸಗಿ ಬಸ್ ಮಾಲೀಕರ ವಿರೋಧ

ಮೈಸೂರು, ಜೂ.9(ಎಸ್‌ಪಿಎನ್)– ಕೆಎಸ್‌ಆರ್‌ಟಿಸಿ ಸಾರಿಗೆ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಬಸ್ ಪಾಸ್ ಘೋಷಣೆ ಮಾಡಿದ ಬೆನ್ನಲ್ಲೇ ಆಟೋ ಚಾಲಕರು ಮತ್ತು ಮಾಲೀಕರ ಸಂಘ ಹಾಗೂ ಖಾಸಗಿ ಬಸ್ ಮಾಲೀಕರ ಸಂಘ ರಾಜ್ಯ ಸರ್ಕಾರದ ನಡೆಗೆ ತೀವ್ರ ವಿರೋಧ ವ್ಯಕ್ತಪಡಿಸಿದೆ.

ಮೈಸೂರು ಜಿಲ್ಲಾ ಪ್ರವಾಸಿ ಟಾಕ್ಸಿ ಮಾಲೀಕರು ಮತ್ತು ಚಾಲಕರ ಸಂಘ ಇದರಿಂದ ನಮಗೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದೆ.

ಆಟೋ ಚಾಲಕರು ಮತ್ತು ಮಾಲೀಕರ ಸಂಘ ವಿರೋಧ: ಕೆಎಸ್‌ಆರ್‌ಟಿಸಿ ಸಾರಿಗೆ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಬಸ್ ಪಾಸ್ ವಿತರಣೆ ಮಾಡಲು ರಾಜ್ಯ ಸರ್ಕಾರ ತಯಾರಿ ನಡೆಸುತ್ತಿರುವ ಬೆನ್ನಲ್ಲೇ ರಾಜ್ಯಾದ್ಯಂತ ಆಟೋ ಚಾಲಕರು ಮತ್ತು ಮಾಲೀಕರ ಸಂಘದ ಪದಾಧಿಕಾರಿಗಳು ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಲು ಮುಂದಾಗುತ್ತಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಸುಮಾರು 10 ಸಾವಿರ ಮಂದಿ ಆಟೋ ರಿಕ್ಷಾಗಳನ್ನು ನಂಬಿ ಜೀವನ ನಡೆಸುತ್ತಿದ್ದು, ಉಚಿತ ಬಸ್ ಪ್ರಯಾಣ ಘೋಷಣೆಯಿಂದ ನಮಗೆ ತುಂಬಾ ಆರ್ಥಿಕ ಸಂಕಷ್ಟ ಎದುರಾಗಲಿದೆ ಎಂದು ಮೈಸೂರು ಜಿಲ್ಲಾ ಆಟೋ ಮತ್ತು ಮಾಲೀಕರ ಸಂಘದ ಅಧ್ಯಕ್ಷ ನಂಜುಂಡ ಸ್ವಾಮಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿಗಳನ್ನು ಘೋಷಿಸಿ, ಅಧಿಕಾರಕ್ಕೆ ಬಂದಿದೆ. ಇದರಲ್ಲಿ ಯಾವುದನ್ನು ಸರಿಯಾಗಿ ಅನುಷ್ಠಾನ ಮಾಡುವುದಿಲ್ಲ. ಈ ಯೋಜನೆಗಳಿಂದ ಇಡೀ ವ್ಯವಸ್ಥೆ ಹಾಳಾಗಲಿದೆ. ಎಲ್ಲಾ ಹಂತದ ಮಹಿಳೆಯರಿಗೆ ಉಚಿತ ಬಸ್ ಪಾಸ್ ಘೋಷಣೆ ಮಾಡುವುದರಿಂದ ಕೇವಲ ಆಟೋ ಚಾಲಕರು ಆರ್ಥಿಕ ಸಂಕಷ್ಟಕ್ಕೆ ಸಿಲುಕುವುದಿಲ್ಲ. ಖಾಸಗಿ ಬಸ್ ಮಾಲೀಕರು, ಕಾರ್ಮಿಕರ ಕುಟುಂಬದವರೂ ಆರ್ಥಿಕ ಸಂಕಷ್ಟಕ್ಕೆ ಸಿಲುಕಲಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಆಟೋ ಚಾಲಕರು ಎಂದಿಗೂ ಸರ್ಕಾರದಿಂದ ಸಬ್ಸಿಡಿ ಕೊಡಿ ಎಂದು ಕೇಳಿಲ್ಲ. ಇದೀಗ ಕೆಎಸ್‌ಆರ್‌ಟಿಸಿಯಲ್ಲಿ ಮಹಿಳೆಯರಿಗೆ ಉಚಿತ ಬಸ್ ಪಾಸ್ ವಿತರಣೆ ಮಾಡುವುದರಿಂದ ನಮಗೂ ಬೇರೆ ರೀತಿ ಅನುಕೂಲ ಮಾಡಿಕೊಡಲಿ. ಇಲ್ಲದಿದ್ದರೆ, ನಾವು ರಾಜ್ಯಾದ್ಯಂತ ರಸ್ತೆಗಿಳಿಯಲು ಚಿಂತನೆ ನಡೆಸುತ್ತೇವೆ. ಜೂ.11ರಂದು ರಾಜ್ಯ ಸರ್ಕಾರ ಈ ಯೋಜನೆಗೆ ಚಾಲನೆ ನೀಡಲಿದ್ದು, ಇದರ ಸಾಧಕ–ಬಾಧಕಗಳನ್ನು ನೋಡಿ ಮುಂದಿನ ಹೋರಾಟ ರೂಪಿಸುತ್ತೇವೆ ಎಂದು ಸ್ಪಷ್ಟಪಡಿಸಿದರು.

ಖಾಸಗಿ ಬಸ್ ಮಾಲೀಕರ ಸಂಘ ವಿರೋಧ

ಕೆಎಸ್‌ಆರ್‌ಟಿಯಲ್ಲಿ ಮಹಿಳೆಯರಿಗೆ ಉಚಿತ ಬಸ್ ಪಾಸ್ ವಿತರಣೆಯಿಂದ ಖಾಸಗಿ ಬಸ್ ಮಾಲೀಕರು ಮತ್ತು ಇದನ್ನು ನಂಬಿದ ಕಾರ್ಮಿಕರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಲಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಸುಮಾರು 80 ಖಾಸಗಿ ಬಸ್‌ಗಳು ಸಂಚಾರ ಮಾಡುತ್ತಿವೆ. ಈಗಾಗಲೇ ಸರ್ಕಾರದ ನಿಯಮಗಳಿಂದ ಖಾಸಗಿ ಬಸ್‌ಗಳನ್ನು ಸಂಚಾರ ದುಸ್ತರವಾಗಲಿದೆ. ಶಕ್ತಿ ಯೋಜನೆ ಪೂರ್ಣ ಪ್ರಮಾಣದಲ್ಲಿ ಜಾರಿಗೊಂಡರೆ ಮತ್ತಷ್ಟು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತೇವೆ. ಆದ್ದರಿಂದ ಜೂ.11ರಂದು ಈ ಯೋಜನೆ ಅನುಷ್ಠಾನದ ನಂತರ ಆಗುವ ಪರಿಣಾಮವನ್ನು ನೋಡಿಕೊಂಡು ಮುಂದಿನ ಹೋರಾಟವನ್ನು ರೂಪಿಸುತ್ತೇವೆ ಎಂದು ಮೈಸೂರು ಜಿಲ್ಲಾ ಖಾಸಗಿ ಬಸ್ ಮಾಲೀಕರ ಸಂಘದ ಅಧ್ಯಕ್ಷ ಪಿ.ಮಟ್ಟರಾಜು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಪ್ರವಾಸಿ ಟಾಕ್ಸಿಗಳಿಗೆ ತೊಂದರೆ ಇಲ್ಲ

ರಾಜ್ಯ ಸರ್ಕಾರ ಕೆಎಸ್‌ಆರ್‌ಟಿಸಿಯಲ್ಲಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣಕ್ಕೆ ಜೂ.11ರಂದು ಚಾಲನೆ ನೀಡುವುದರಿಂದ ಪ್ರವಾಸೋದ್ಯಮದಲ್ಲಿ ತೊಡಗಿಸಿಕೊಂಡಿರುವ ಟಾಕ್ಸಿಗಳಿಗೆ ಯಾವುದೇ ಆರ್ಥಿಕ ಹೊಡೆತ ಆಗುವುದಿಲ್ಲ. ಏಕೆಂದರೆ, ಬಸ್‌ನಲ್ಲಿ ಪ್ರಯಾಣಿಸುವ ಮಹಿಳೆಯರು ಎಂದಿಗೂ ಪ್ರವಾಸಿ ಟಾಕ್ಸಿಗಳನ್ನು ಬುಕ್ ಮಾಡಿ ಕೊಂಡು ರಾಜ್ಯಾದ್ಯಂತ ಪ್ರವಾಸ ಮಾಡು ವುದಿಲ್ಲ. ಹಾಗಾಗಿ ನಮ್ಮ ಉದ್ಯಮದ ಮೇಲೆ ಪರಿಣಾಮ ಬೀರುವುದಿಲ್ಲ. ಆಗೊಂದು ವೇಳೆ ಬೀರಿದರೂ ಶೇ.2ರಷ್ಟು ಮಾತ್ರ ಆಗಲಿದೆ ಎಂದು ಮೈಸೂರು ಜಿಲ್ಲಾ ಟ್ರಾಕ್ಸಿ ಮಾಲೀಕರು ಮತ್ತು ಚಾಲಕರ ಸಂಘದ ಗೌರವಾಧ್ಯಕ್ಷ ಪ್ರಶಾಂತ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಿಧನ



ಮಾಧವನ್ ಮ್ಯಾಥ್ಯೂ

ಮೈಸೂರು, ಜೂ.9–ಮೈಸೂರಿನ ರಾಮಕೃಷ್ಣನಗರ, ಇ ಅಂಡ್ ಎಫ್ ಬ್ಲಾಕ್, ಎಂಐಜಿ–26ರ ನಿವಾಸಿ ಮಾಧವನ್ ಮ್ಯಾಥ್ಯೂ ಗುರುವಾರ ನಿಧನರಾದರು. ಮೃತರು ಪತ್ನಿ ಫಿಲೋಮಿನಾ ಲೆವಿಸ್, ಓರ್ವ ಪುತ್ರ, ಪುತ್ರಿ ಹಾಗೂ ಅಪಾರ ಬಂಧು ಬಳಗ, ಸ್ನೇಹಿತರನ್ನು ಅಗಲಿದ್ದಾರೆ. ಲಿಂಗಾಬುದ್ಧಿ ಪಾಳ್ಯದಲ್ಲಿರುವ ಅವರ್ ಲೇಡಿ ಆಫ್ ಪರ್ಪೆಚುಯೆಲ್ ಸಕ್ಕರ್ ಚರ್ಚ್‌ನಲ್ಲಿ ಅಂತ್ಯಕ್ರಿಯೆ ಮಾಸ್ ನಡೆದ ನಂತರ ಸೌತ್ ಸಿಮೆಟ್ರಿಯಲ್ಲಿ ಶುಕ್ರವಾರ ಬೆಳಗ್ಗೆ ಅಂತಿಮ ಸಂಸ್ಕಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

10.6.2023 ಶನಿವಾರ, ಮಳೆ ನಕ್ಷತ್ರ: ಮೃಗಶಿರ, 08.06.2023 ರಿಂದ 21.06.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ,
ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಶತಭಿಷ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** "ಹೈಪೋಥೈರಾಯ್ಡಿಸಮ್" ಚಿಕಿತ್ಸಾ ಶಿಬಿರ, ಆಲನಹಳ್ಳಿ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30ರಿಂದ 4.30.
- **ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ :** ಮೈ ಗ್ರೀನ್ ವಸ್ತು ಪ್ರದರ್ಶನ, ಮುಖ್ಯ ಅತಿಥಿಗಳು: ಬಿಎಐ ಕರ್ನಾಟಕದ ರಾಜ್ಯಾಧ್ಯಕ್ಷ ಶ್ರೀನಿವಾಸ ರೆಡ್ಡಿ, ಸ್ಥಳ: ನಂಜರಾಜ ಬಹದ್ದೂರ್ ಚೌಲ್ಟ್ರಿ, ಮೆಟ್ರೋಪೋಲ್ ಸರ್ಕಲ್, ಬೆಳಗ್ಗೆ 10 ರಿಂದ.
- **ಡಾ.ಹಾ.ತಿ.ಕೃ. ಅಭಿನಂದನಾ ಸಮಿತಿ :** ಕೃಷ್ಣಯಾನ, ಡಾ.ಹಾ.ತಿ.ಕೃಷ್ಣೇಗೌಡ ಅವರ ಅಭಿನಂದನಾ ಗ್ರಂಥ ಲೋಕಾರ್ಪಣೆ ಸಮಾರಂಭ, ಅಧ್ಯಕ್ಷತೆ: ಸಾಹಿತಿ ಡಾ. ಸಿ.ಪಿ.ಕೃಷ್ಣಕುಮಾರ್, ಅಭಿನಂದನಾ ನುಡಿ: ಲೇಖಕ ಪ್ರೊ. ಡಿ.ಎ.ಶಂಕರ್, ಗ್ರಂಥ ಲೋಕಾರ್ಪಣೆ: ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಪ್ರೊ. ಅಂಬಳಿಕೆ ಹಿರಿಯಣ್ಣ, ಸ್ಥಳ: ಗಾನಭಾರತಿ, ವೀಣೆ ಶೇಷಣ್ಣ ಭವನ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.
- **ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಡಾ. ಬಿ.ಆರ್. ಅಂಬೇಡ್ಕರ್ ಪೀಠ :** 16ನೇ ವಿಧಾನಸಭಾ ಚುನಾವಣೆ: ಪ್ರಭಾವ, ಪರಿಣಾಮ ಮತ್ತು ಭವಿಷ್ಯದ ರಾಜಕೀಯ ಆಯಾಮಗಳು ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಆಶಯ ಮಾತು: ಪ್ರಗತಿಪರ ಚಿಂತಕ ಪ್ರೊ. ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷತೆ: ಸಂದರ್ಶಕ ಪ್ರಾಧ್ಯಾಪಕರಾದ ಪ್ರೊ. ಆರ್.ಇಂದಿರಾ, ಸ್ಥಳ: ವಿಶ್ವಜ್ಞಾನಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.
- **ಮೈಸೂರು ಆರ್ಟ್ ಗ್ಯಾಲರಿ :** ಸಾಧಕರೊಂದಿಗೆ ಸಂವಾದ, ತಿಂಗಳ ಸಾಧಕರು ಮುದ್ರಣ ಕಲೆಯ ಮಹಾ ಮುತ್ಸದ್ದಿಗಳಾದ ಹರ್ಷ ಪ್ರಿಂಟರ್ಸ್ ಸಂಸ್ಥಾಪಕ ಎಂ. ಚಿನ್ನಸ್ವಾಮಿ, ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಮಾಲೀಕ ಡಿ.ಎನ್. ಲೋಕಪ್ಪ, ಮುಖ್ಯ ಅತಿಥಿಗಳು: ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಅಧ್ಯಕ್ಷತೆ : ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ರಾಮಾನುಜ ರಸ್ತೆ, ಬೆಳಗ್ಗೆ 11ಕ್ಕೆ.
- **ವಿದ್ಯಾವರ್ಧಕ ಪಾಲಿಟೆಕ್ನಿಕ್ :** ವಿಶಿಷ್ಠ–2023 ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು: ಜೂಬಿಲೆಂಟ್ ಪಾರ್ಮೋವ್ ಲಿಮಿಟೆಡ್ ಸೀನಿಯರ್ ಮ್ಯಾನೇಜರ್ ಹೆಚ್.ಎನ್. ಸಿದ್ದೇಶ, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು: ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಆರ್.ಎನ್. ಸೆರಲತನ್, ಸ್ಥಳ: ಸಾಹುಕಾರ್ ಚನ್ನಯ್ಯ ಸಭಾಂಗಣ, ಬೆಳಗ್ಗೆ 11ಕ್ಕೆ.
- **ಕಲಾಸುರುಚಿ ಮತ್ತು ಕುತೂಹಲಿ:** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 779, ಕಥೆ ಹೇಳುವವರು : ಸಾಹಿತಿ ಕೆ. ಲಕ್ಷ್ಮೀ, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಸಂಜೆ 4.30ಕ್ಕೆ
- **ಭೂಮಿಕಾ ಭಾವೈಕ್ಯ ಬಳಗ :** ಜಗದಗಲಕ್ಕೂ ಮೀರಿದ ಮಾತೃ ಹೃದಯದ ವೈಶಾಲ್ಯತೆ ಕುರಿತು ವಿಚಾರ ಸಂಕಿರಣ, ಭೂಮಿಕಾ ಭಾವೈಕ್ಯ ಮಹಿಳಾ ಸಿರಿ ಪ್ರಶಸ್ತಿ ಪ್ರದಾನ, ಸಸಿ ವಿತರಣೆ ಕಾರ್ಯಕ್ರಮ, ವಿಚಾರ ಮಂಡನೆ: ರಾಜಯೋಗಿನಿ ಬ್ರಹ್ಮಕುಮಾರಿ ಲಕ್ಷ್ಮೀಜಿ, ಸ್ಥಳ: ಆರಾಧ್ಯ ಮಹಾಸಭೆ, ಜೆಎಲ್‌ಬಿ ರಸ್ತೆ, ಸಂಜೆ 4.30ಕ್ಕೆ.
- **ಅಖಿಲ ಭಾರತ ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ನೌಕರರ ಒಕ್ಕೂಟ:** 37ನೇ ಜನರಲ್ ಕೌನ್ಸಿಲ್ ಮೀಟಿಂಗ್ ಮತ್ತು ಪ್ಲಾಟಿನಮ್ ಜೂಬಿಲಿ ಸಂಭ್ರಮೋತ್ಸವ ಕಾರ್ಯಕ್ರಮ, ಉದ್ಘಾಟನೆ: ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು: ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಸಿಇಓ, ವ್ಯವಸ್ಥಾಪಕ ನಿರ್ದೇಶಕ ಅಜಯ್ ಕುಮಾರ್ ಶ್ರೀವತ್ಸ, ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಎಕ್ಸಿಕ್ಯೂಟಿವ್ ಡೈರೆಕ್ಟರ್‌ರಾದ ಶ್ರೀಮತಿ ಎಸ್. ಶ್ರೀಮತಿ, ಸಂಜಯ್ ವಿನಾಯಕ್ ಮುದಲಿಯಾರ್, ಪ್ರಾಸ್ತಾವಿಕ ನುಡಿ: ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸುಭೇಂದ್ರ ಕುಮಾರ್ ವರ್ಮ, ಸ್ಥಳ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಘಟಿಕೋತ್ಸವ ಸಭಾಂಗಣ, ಸಂಜೆ 5ಕ್ಕೆ.
- **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ, ಡಾ. ಕೆ. ಕೃಷ್ಣಮೂರ್ತಿ ಸದಂಶೋಧನಾ ಪ್ರತಿಷ್ಠಾನ :** ಪ್ರೊ. ಹೆಚ್.ಎಸ್. ಗೋಪಿನಾಥ್‌ಗೆ ಅಭಿನಂದನೆ ಹಾಗೂ ಶಂಕರ ಸ್ಮೃತಿ ಕೃತಿ ಬಿಡುಗಡೆ ಸಮಾ ರಂಭ, ಕೃತಿ ಲೋಕಾರ್ಪಣೆ : ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕೃತಿ ಕುರಿತು ಮಾತನಾಡುವವರು : ಸಂಸ್ಕೃತ ವಿದ್ವಾಂಸರಾದ ಡಾ. ಕೆ. ಲೀಲಾಪ್ರಕಾಶ್, ಮುಖ್ಯ ಅತಿಥಿಗಳು : ಮಾಜಿ ಶಾಸಕ ಆರ್. ಧರ್ಮಸೇನಾ, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಪ್ರೊ. ಹೆಚ್.ಎಸ್. ಹರಿಶಂಕರ್, ಪ್ರಾಸ್ತಾವಿಕ ನುಡಿ: ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಉಪಸ್ಥಿತರು : ಡಾ. ಕೆ. ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನ ಸಂಚಾಲಕ ಸಿ.ಎನ್. ಕೇಶವಪ್ರಕಾಶ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.
- **ಗಾನಭಾರತೀ:** ವಿದುಷಿ ಯೋಗವಂದನಾ ಅವರಿಂದ ವೀಣಾ ವಾದನ, ವಿದ್ವಾನ್ ಎ. ರಾಧೇಶ್–ಮೃದಂಗ, ವಿದ್ವಾನ್ ಶಮಿತ್‌ಗೌಡ–ಘಟ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 5.30ಕ್ಕೆ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಿಪಾಲಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ಸಂಗೀತ ವಿದುಷಿ ಶ್ರೀಮತಿ ಟಿ.ಪಿ. ಸುಭಾಷಿಣಿ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಸಿ. ಚೇತನ್–ಪಿಟೀಲು, ವಿದ್ವಾನ್ ಆರ್. ತಪನ್ ಶಂಕರ್–ಮೃದಂಗ, ಸ್ಥಳ: ಶ್ರೀ ರಾಮಮಂದಿರದ ಆವರಣ, ಶಿವರಾಂಪೇಟೆ, ಸಂಜೆ 6ಕ್ಕೆ.
- **ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನ ಸನ್ನಿಧಾನ:** ಶ್ರೀ ರಾಘವೇಂದ್ರ ಸ್ವಾಮಿಗಳ 76ನೇ ಬೃಂದಾವನ ಪ್ರತಿಷ್ಠಾಪನಾ ವರ್ಧಂತ್ಯುತ್ಸವ ಜ್ಞಾನಸತ್ರ, ಪಂಡಿತ್ ವಿದ್ವಾವಾಚಸ್ಪತಿ ಶ್ರೀ ಪ್ರಭಂಜನಾಚಾರ್ಯ ವ್ಯಾಸನಕೆರೆ, ಬೆಂಗಳೂರು ಅವರಿಂದ ಶ್ರೀ ಮನ್ಮಹಾಭಾರತ ಪ್ರವಚನ, ಸ್ಥಳ: ಶ್ರೀ ರಾಯರ ಮಠ, ಕೃಷ್ಣಮೂರ್ತಿಪುರಂ, ಸಂಜೆ 6ಕ್ಕೆ.
- **ಶ್ರೀ ಕೃಷ್ಣ ಗಾನಸಭಾ:** ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಕಾರ್ಯಕ್ರಮ, ಮುಖ್ಯ ಅತಿಥಿಗಳು: ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ, ಅಧ್ಯಕ್ಷತೆ: ಸಭಾ ಅಧ್ಯಕ್ಷ ಬಿ.ಎಸ್. ಶ್ರೀಧರರಾಜೇ ಅರಸು, ಸಂಗೀತ ಕಾರ್ಯಕ್ರಮ, ವಿದ್ವಾನ್ ಮಾನಸ ನಯನ ಅವರಿಂದ ಗಾಯನ, ವಿದ್ವಾನ್ ಕೇಶವಮೋಹನ್ ಕುಮಾರ್–ಪಿಟೀಲು, ವಿದ್ವಾನ್ ಹೆಚ್.ಎಲ್.ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ಎಸ್. ಮಂಜುನಾಥ್–ಘಟಂ, ಸ್ಥಳ: ಆಳ್ವಾರ್ ಕಲಾಭವನ, ಶ್ರೀ ಕೃಷ್ಣ ದೇವಸ್ಥಾನ, ಗೋಕುಲಂ 3ನೇ ಹಂತ, ಸಂಜೆ 6ಕ್ಕೆ.
- **ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್:** ಎಸ್.ಜಿ.ರಘುರಾಂ ಸಂಸ್ಮರಣೆ, ಭಾವಸಂಗಮ, ಎಸ್.ಜಿ. ರಘುರಾಂ ಸಂಗೀತ ನಿರ್ದೇಶನದ ಭಾವಗೀತೆಗಳು, ಸ್ಥಳ: ಸಂಗೀತ ಕಲಾನಿಧಿ, ವಾಸುದೇವಾಚಾರ್ಯ ಭವನ, ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ ಸಂಜೆ 6ಕ್ಕೆ.
- **ಕಲಾಸುರುಚಿ ಮತ್ತು ಕುತೂಹಲಿ:** ಸೈನ್ಸ್ ಸಂಜೆ, ಸಸ್ಯಗಳ ಪ್ರೀತಿ, ಪ್ರೇಮ, ಮತ್ಸರ ಕುರಿತು ಐಎನ್‌ಎಸ್‌ಎ ಹಿರಿಯ ವಿಜ್ಞಾನಿ ಪ್ರೊ. ಕೆ.ಎನ್. ಗಣೇಶಯ್ಯ ಅವರಿಂದ ಉಪನ್ಯಾಸ, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಸಂಜೆ 6.30ಕ್ಕೆ
- **ಶಶಿ ಥಿಯೇಟರ್ :** ಶಶಿ ಥಿಯೇಟರ್ ಕಲಾವಿದರಿಂದ 'ಉರಿಯ ಉಯ್ಯಾಲೆ' ನಾಟಕ ಪ್ರದರ್ಶನ, ರಚನೆ : ಡಾ. ಎಚ್.ಎಸ್. ವೆಂಕಟೇಶ್‌ಮೂರ್ತಿ, ನಿರ್ದೇಶನ: ಬಿ.ಎನ್. ಶಶಿಕಲಾ, ಸ್ಥಳ: ರಮಾಗೋವಿಂದ ರಂಗಮಂದಿರ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾಪರಂಪರೆ ಬಾನುಲಿ ಸರಣಿ, ಪ್ರಸ್ತುತಿ–ಡಾ.ಎ.ಎಸ್. ಚಂದ್ರಶೇಖರ್, 6.35 ಸಿಎಫ್‌ಟಿಆರ್‌ಐ ಸಿರಿಧಾನ್ಯದ ಸಿರಿ – ಪ್ರಾಯೋಜಿತ ಕಾರ್ಯಕ್ರಮ, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ–ಡಾ. ಮೈಸೂರು ಉಮೇಶ್, 7.15 ಭಾವಗೀತೆಗಳು, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ–ಬಾನುಲಿ ಸರಣಿ–ಆರೋಗ್ಯ ಬುತ್ತಿಯ ಆಲೂರು ಮೂರ್ತಿ ಅವರೊಡನೆ ಸಂದರ್ಶನ, ನಡೆಸಿಕೊಡುತ್ತಾರೆ– ದಿವಾಕರ ಹೆಗಡೆ, 10.00 ಡಾ. ಎಸ್. ರಾಜಾರಾಂ – ಹಾಡುಗಾರಿಕೆ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ–ಮರಿಸಿದ್ಧಮ್ಮ ಮತ್ತು ಸಂಗಡಿಗರು, 1.20 ಭಾವಗೀತೆ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.30 ಮಕ್ಕಳ ಮಂಟಪ–ಮೈಸೂರಿನ ಶ್ರೀನಗರದಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ "ದೇವಿ", ರಚನೆ– ಹೆಚ್. ಎಸ್. ಪಾರ್ವತಿ, ನಿರ್ದೇಶನ–ಹೆಚ್. ಎಸ್. ಸರಸ್ವತಿ, 4.30 ನೆನಪಿನಂಗಳ, 6.50 ಕೃಷಿರಂಗ–ತೋರಣ ಹೂರಣ, ಪ್ರಸ್ತುತಿ– ಜಿ. ಶಾಂತಕುಮಾರ್, 8.00 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಪಿ. ಅಪರ್ವ – ಹಾಡುಗಾರಿಕೆ

ಮಕ್ಕಾಜಿ ಚೌಕದಲ್ಲಿ ಹಾದುಹೋಗುವ ವಿನೋಬಾ ರಸ್ತೆ ಸಂಚಾರಕ್ಕೆ ಮುಕ್ತಗೊಳಿಸಿದ್ದಕ್ಕೆ ಆಕ್ಷೇಪಿಸಿದ ಪಾಲಿಕೆ, ಮೇವರಿಕ್ ಅರ್ಜಿ ವಜಾ

ಮೈಸೂರು, ಜೂ. 9(ಆರ್‌ಕೆ)– ಮೈಸೂರಿನ ಹೃದಯ ಭಾಗದಲ್ಲಿರುವ ಮಕ್ಕಾಜಿ ಚೌಕ ಹಾದುಹೋಗುವ ವಿನೋಬಾ ರಸ್ತೆಯನ್ನು ಸಾರ್ವಜನಿಕರ ಓಡಾಟಕ್ಕೆ ಮುಕ್ತಗೊಳಿಸಿದ ಕ್ರಮವನ್ನು ಆಕ್ಷೇಪಿಸಿ ಮೈಸೂರು ಮಹಾನಗರ ಪಾಲಿಕೆ ಮತ್ತು ಮೆ॥ ಮೇವರಿಕ್ ಹೋಲ್ಡಿಂಗ್ ಅಂಡ್ ಇನ್ವೆಸ್ಟ್‌ಮೆಂಟ್ ಪ್ರೈವೇಟ್ ಲಿಮಿಟೆಡ್ ಶುಕ್ರವಾರ ಸಲ್ಲಿಸಿದ್ದ ಪ್ರತ್ಯೇಕ ಅರ್ಜಿಗಳನ್ನು ಮೈಸೂರಿನ 4ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರಾದ ಶಾಂತಮ್ಮ ಮಲ್ಲಿಕಾರ್ಜುನಗೌಡ ವಜಾಗೊಳಿಸಿದರು.



ಇದೇ ನ್ಯಾಯಾಲಯ 2009ರಲ್ಲಿ ನೀಡಿದ್ದ ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದಿತ್ತು. ಅಲ್ಲದೇ ಕೋರ್ಟ್ ನಿರ್ದೇಶನದ ಮೇರೆಗೆ ನಿನ್ನೆ (ಗುರುವಾರ) ನ್ಯಾಯಾಲಯದ ಅಮೀನ್ ನಾಗರಾಜು ಮೂಲಕ ರಸ್ತೆಯನ್ನು ಸಾರ್ವಜನಿಕರ ಸಂಚಾರಕ್ಕೆ ಮುಕ್ತಗೊಳಿಸಲಾಗಿತ್ತು. ಇಂದು ನಗರಪಾಲಿಕೆ ಮತ್ತು ಮೇವರಿಕ್ ಸಂಸ್ಥೆ ನ್ಯಾಯಾಲಯಕ್ಕೆ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸಿ ರಸ್ತೆಯನ್ನು ಸಾರ್ವಜನಿಕರ ಸಂಚಾರಕ್ಕೆ ಮುಕ್ತಗೊಳಿಸಿದ್ದನ್ನು ಆಕ್ಷೇಪಿಸಿದ್ದರು. 2009ರ ಈ ನ್ಯಾಯಾಲಯದ ಆದೇಶಕ್ಕೆ 2017ರಲ್ಲಿ ಹೈಕೋರ್ಟ್ ತಡೆ ನೀಡಿತ್ತು ಎಂಬುದನ್ನು ಆಕ್ಷೇಪಣಾ ಅರ್ಜಿಯಲ್ಲಿ ಉಲ್ಲೇಖಿಸಲಾಗಿತ್ತು. ಇದೇ ವೇಳೆ ಮೈಕಾ ಪ್ರೇಮ್‌ಕುಮಾರ್ ಮತ್ತು ಮೋಹನ್ ಪರ ವಕೀಲರಾದ ಸಿ.ವಿ. ಕೇಶವಮೂರ್ತಿ ಮತ್ತು ಪಿ.ಜೆ. ರಾಘವೇಂದ್ರ ಅವರುಗಳು ಇದೇ ಮೇ 30ರಂದು ಹೈಕೋರ್ಟ್ ನೀಡಿದ ನಿರ್ದೇಶನದ ಮೇರೆಗೆ 2009ರ ಆದೇಶವನ್ನು ಪಾಲನೆ ಮಾಡಲಾಗಿದೆ ಎಂಬುದನ್ನು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟರು. ಇವರ ವಾದವನ್ನು ಪುರಸ್ಕರಿಸಿದ ನ್ಯಾಯಾಧೀಶರು, ಪಾಲಿಕೆ ಮತ್ತು ಮೇವರಿಕ್ ಸಂಸ್ಥೆಯ ಅರ್ಜಿಗಳನ್ನು ವಜಾಗೊಳಿಸಲು ಮುಂದಾಗುತ್ತಿದ್ದಂತೆಯೇ ಅವರ ಪರ ವಕೀಲರು 2009ರ ಸದರಿ ಕೋರ್ಟ್ ಆದೇಶಕ್ಕೆ ತಡೆಯಾಜ್ಞೆ ನೀಡುವಂತೆಯೂ ಮನವಿ ಮಾಡಿದರು. ಆದರೆ, ಹೈಕೋರ್ಟ್ ನಿರ್ದೇಶನದಂತೆ ಈ ನ್ಯಾಯಾಲಯವು 2009ರ ಆದೇಶವನ್ನು ಪಾಲನೆ ಮಾಡಿ, ಅನುಪಾಲನ ವರದಿಯು ಕೂಡ ಬಂದಿದ್ದು, ಈ ಪ್ರಕರಣದಲ್ಲಿ ನ್ಯಾಯಾಲಯದ ಪ್ರಕ್ರಿಯೆಗಳು ಮುಗಿದಿರುವುದರಿಂದ ಪಾಲಿಕೆ ಹಾಗೂ ಮೇವರಿಕ್ ಸಂಸ್ಥೆಯ ಅರ್ಜಿಗಳನ್ನು ಪುರಸ್ಕರಿಸಲು ಸಾಧ್ಯವಿಲ್ಲ ಎಂದು ನ್ಯಾಯಾಧೀಶರು ತಿಳಿಸಿ, ಅರ್ಜಿಗಳನ್ನು ವಜಾಗೊಳಿಸಿದರು.

ಮೂರನೇ ಪುಟದಿಂದ

ಕೆ.ಎನ್.ರಾಜಣ್ಣರಿಗೆ ಹಾಸನ ಉಸ್ತುವಾರಿ

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಬೃಹತ್ ಬೆಂಗಳೂರು ನಗರದ ಉಸ್ತುವಾರಿ ವಹಿಸಿದ್ದರೆ, ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪರಿಗೆ ಮೈಸೂರು ಜಿಲ್ಲಾ ಉಸ್ತುವಾರಿ, ಕೆ.ವೆಂಕಟೇಶ್‌ಗೆ ಚಾಮರಾಜನಗರ, ಚಲುವರಾಯಸ್ವಾಮಿಗೆ ಮಂಡ್ಯ, ಕಲ್ಲುಗಣ್ಣಿ ನಾಡಿನಿಂದ ಬಂದು ವಿಧಾನಮಂಡಲದ ಉಭಯ ಸದನದ ಸದಸ್ಯರಲ್ಲದ ಸಚಿವ ಬೋಸ್ ರಾಜ್ ಅವರಿಗೆ ಕೊಡಗು ಜಿಲ್ಲಾ ಹೊಣೆಗಾರಿಕೆ ನೀಡಲಾಗಿದೆ. ಇನ್ನೂ ಎಸ್.ಎಸ್. ಮಲ್ಲಿಕಾರ್ಜುನ್‌ರಿಗೆ ದಾವಣಗೆರೆ ಜಿಲ್ಲೆಯ ಉಸ್ತುವಾರಿ ನೀಡಲಾಗಿದೆ. ಕಂದಾಯ ಸಚಿವ ಕೃಷ್ಣ ಬೈರೇಗೌಡ ಹಾಗೂ ಪೌರಾಡಳಿತ ಸಚಿವ ರಹೀಂಖಾನ್ ಹೊರತು ಪಡಿಸಿ ಎಲ್ಲಾ ಸಚಿವರಿಗೂ ಜಿಲ್ಲಾ ಉಸ್ತುವಾರಿ ದೊರೆತಿದೆ. ಬಹುತೇಕ ಆಯಾ ಜಿಲ್ಲೆಗೆ ಅದೇ ಜಿಲ್ಲೆಯ ಸಚಿವರನ್ನು ಉಸ್ತುವಾರಿ ಮಾಡಲಾಗಿದ್ದು, ಜಿಲ್ಲೆಯಿಂದ ಹೆಚ್ಚುವರಿ ಆಗಿರುವವರಿಗೆ ಸಂಪುಟದಲ್ಲಿ ಪ್ರಾತಿನಿಧ್ಯವಿಲ್ಲದ ಜಿಲ್ಲೆಗಳ ಹೊಣೆ ವಹಿಸಲಾಗಿದೆ.

ಉಳಿದ ಉಸ್ತುವಾರಿ ಸಚಿವರು

ಡಾ.ಜಿ.ಪರಮೇಶ್ವರ್	–ತುಮಕೂರು
ಹೆಚ್.ಕೆ.ಪಾಟೀಲ್	–ಗದಗ
ಕೆ.ಎಚ್.ಮುನಿಯಪ್ಪ	–ಬೆಂಗಳೂರು ಗ್ರಾಮಾಂತರ
ರಾಮಲಿಂಗಾರೆಡ್ಡಿ	–ರಾಮನಗರ
ಕೆ.ಜೆ.ಜಾರ್ಜ್	–ಚಿಕ್ಕಮಗಳೂರು
ಎಂ.ಬಿ.ಪಾಟೀಲ್	–ವಿಜಯಪುರ
ದಿನೇಶ್ ಗುಂಡೂರಾವ್	– ದಕ್ಷಿಣ ಕನ್ನಡ
ಸತೀಶ್ ಜಾರಕಿಹೊಳಿ	–ಬೆಳಗಾವಿ
ಪ್ರಿಯಾಂಕ ಖರ್ಗೆ	–ಕಲಬುರಗಿ
ಶಿವಾನಂದ ಪಾಟೀಲ್	–ಹಾವೇರಿ
ಜಮೀರ್ ಅಹ್ಮದ್ ಖಾನ್	–ವಿಜಯನಗರ
ಶರಣ ಬಸಪ್ಪ ದರ್ಶನಾಪುರ್	–ಯಾದಗಿರಿ
ಈಶ್ವರ್ ಖಂಡ್ರೆ	–ಬೀದರ್
ಸಂತೋಷ್ ಲಾಡ್	–ಧಾರವಾಡ
ಡಾ.ಶರಣ ಪ್ರಕಾಶ್ ಪಾಟೀಲ್	–ರಾಯಚೂರು
ಆರ್.ಬಿ.ತಿಮ್ಮಾಪುರ್	–ಬಾಗಲಕೋಟೆ
ಶಿವರಾಜ್ ತಂಗಡಗಿ	–ಕೊಪ್ಪಳ
ಡಿ.ಸುಧಾಕರ್	–ಚಿತ್ರದುರ್ಗ
ಬಿ.ನಾಗೇಂದ್ರ	–ಬಳ್ಳಾರಿ
ಬಿ.ಎಸ್.ಸುರೇಶ್	–ಕೋಲಾರ
ಲಕ್ಷ್ಮೀ ಹೆಬ್ಬಾಳ್ಕರ್	–ಉಡುಪಿ
ಮಂಕಾಳ ವೈದ್ಯ	–ಉತ್ತರ ಕನ್ನಡ
ಮಧುಬಂಗಾರಪ್ಪ	–ಶಿವಮೊಗ್ಗ
ಡಾ. ಎಂ.ಸಿ.ಸುಧಾಕರ್	–ಚಿಕ್ಕಬಳ್ಳಾಪುರ

ಮತ್ತೆ ಸಂಘರ್ಷಕ್ಕೆ ನಾಂದಿ: ಗೌಡರ ಕುಟುಂಬದ ವಿರುದ್ಧ ಸದಾ ಸಂಘರ್ಷ ಮಾಡಿಕೊಂಡು, ಸಿದ್ದರಾಮಯ್ಯ ಪರ ವಕಾಲತ್ತು ವಹಿಸಿ ರಾಜಕಾರಣ ಮಾಡಿಕೊಂಡು ಬಂದವರು ರಾಜಣ್ಣ ಕಳೆದ ಲೋಕಸಭಾ ಚುನಾವಣೆಯಲ್ಲಿ ಅಂದಿನ ಮೈತ್ರಿ ಸರ್ಕಾರದ ಅಭ್ಯರ್ಥಿಯಾಗಿದ್ದ ಹೆಚ್.ಡಿ.ದೇವೇಗೌಡರ ವಿರುದ್ಧ ಕೆಲಸ ಮಾಡಿದ ಆರೋಪಕ್ಕೆ ಒಳಗಾಗಿದ್ದರು. ಅಲ್ಲದೆ, ಅವರ ವಿರುದ್ಧ ಕುಟು ಪದಗಳನ್ನು ಬಳಸಿ, ಸಾರ್ವಜನಿಕರ ಟೀಕೆಗೂ ಗುರಿಯಾಗಿದ್ದರು.

ತಲಾ 5 ಗುಂಟೆ ಭೂಮಿ ಮಂಜೂರು

ಸಂಬಂಧ ಕ್ರಮ ವಹಿಸಬೇಕೆಂದು ಹಲವು ಸದಸ್ಯರು ಅಭಿಪ್ರಾಯಿಸಿದರು. ಅಂತಿಮವಾಗಿ ಷರತ್ತುಗಳಿಗೆ ಒಳಪಟ್ಟು 46 ವೀಳ್ಯದೆಲೆ ಬೆಳೆಗಾರರಿಗೆ ಜಮೀನು ಮಂಜೂರು ಮಾಡಲು ಕೌನ್ಸಿಲ್ ಒಪ್ಪಿದೆ ಎಂದು ಮೇಯರ್ ಶಿವಕುಮಾರ್ ಪ್ರಕಟಿಸಿದರು.

ಷರತ್ತುಗಳೇನು?: ಜಮೀನು ಮಂಜೂರಾದ ದಿನದಿಂದ 15 ವರ್ಷದವರೆಗೆ ಮಾರಾಟ, ದಾನ, ಗುತ್ತಿಗೆ, ಪರಬಾರೆ, ಅಡಮಾನ ಹೀಗೆ ಯಾವ ವಿಧದಲ್ಲೂ ಬೇರೆಯವರಿಗೆ ನೀಡುವಂತಿಲ್ಲ. ವೀಳ್ಯದೆಲೆ ಬೆಳೆಯಲು ಮಾತ್ರ ಜಮೀನು ಉಪಯೋಗಿಸಿಕೊಳ್ಳಬೇಕು. ವಿಭಾಗ, ವಿಭಜನೆ ಮಾಡದೆ ಸ್ವಂತಕ್ಕೆ ಬಳಸಿಕೊಳ್ಳಬೇಕು. ನಿಯಮಬಾಹಿರವಾಗಿ ಯಾವುದೇ ಕಟ್ಟಡಗಳನ್ನು ನಿರ್ಮಿಸುವಂತಿಲ್ಲ. ಹಾಗೇನಾದರೂ ನಿರ್ಮಿಸಿದ್ದಲ್ಲಿ ಅದನ್ನು ತೆರವುಗೊಳಿಸಲು ಪಾಲಿಕೆ ಕ್ರಮ ವಹಿಸಬೇಕು. ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ ಕಾಯ್ದೆ 1976 ಹಾಗೂ ವ್ಯವಸಾಯ ಭೂ ಹಿಡುವಳಿ ನಿಯಮಗಳಂತೆ ಅನ್ವಯವಾಗುವ ಎಲ್ಲಾ ನಿಬಂಧನೆಗಳಿಗೂ ಒಳಪಡತಕ್ಕದ್ದು ಎಂದು ಷರತ್ತು ವಿಧಿಸಿರುವ ಸರ್ಕಾರ, ಯಾವುದೇ ಷರತ್ತನ್ನು ಉಲ್ಲಂಘಿಸಿದರೆ ಹಂಚಿಕೆಯ ಭೂಮಿಗೆ ಯಾವುದೇ ಪರಿಹಾರ ಕೊಡದೆ ರದ್ದುಗೊಳಿಸಿ, ಭೂಮಿಯನ್ನು ಪಾಲಿಕೆ ವಶಕ್ಕೆ ತೆಗೆದುಕೊಳ್ಳುವ ಹಕ್ಕನ್ನು ಆಯುಕ್ತರಿಗೆ ಕಾಯ್ದಿರಿಸಲಾಗಿದೆ ಎಂದು ಎಚ್ಚರಿಕೆ ನೀಡಿದೆ.

ಸರಸ್ವತಿಪುರಂ, ತೊಣಚಿಕೊಪ್ಪಲು, ಜಯನಗರ ಬಡಾವಣೆ ನಿರ್ಮಾಣಕ್ಕೆ 1949ರಲ್ಲಿ ಸಿಐಟಿಬಿ(ಇಂದಿನ ಮುಡಾ) ಭೂಸ್ವಾಧೀನಪಡಿಸಿಕೊಂಡು ಮಾಲೀಕರಿಗೆ ಪರಿಹಾರ ನೀಡಲಾಗಿದ್ದು, ಗುತ್ತಿಗೆ ಆಧಾರದಲ್ಲಿ ವೀಳ್ಯದೆಲೆ ತೋಟ ಮಾಡಿಕೊಂಡಿದ್ದ ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದರು. ಬಳಿಕ 1977ರಿಂದ 2018ರವರೆಗಿನ ಸರ್ಕಾರದ 4 ಆದೇಶಗಳನ್ವಯ ಒಟ್ಟು 245 ಪರಿಶಿಷ್ಟ ಜಾತಿ ರೈತರಿಗೆ ಪಾಲಿಕೆಗೆ ಸೇರಿದ ಸೀವೇಜ್ ಫಾರಂನಲ್ಲಿ ತಲಾ 5 ಗುಂಟೆ ಜಮೀನು ನೀಡಲು ಆದೇಶಿಸಲಾಗಿತ್ತು. ನಂತರ ಫಲಾನುಭವಿಗಳ ಅರ್ಜಿ ಹಾಗೂ ದಾಖಲಾತಿ ಪರಿಶೀಲಿಸಲು ಪಾಲಿಕೆ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಯಿತು. ಮೊದಲ ಹಂತದಲ್ಲಿ ಸಲ್ಲಿಕೆಯಾದ 160 ಅರ್ಜಿಗಳನ್ನು ಪರಿಶೀಲಿಸಿ, ದಾಖಲೆ ಹಾಗೂ ಆಕ್ಷೇಪಣೆಗಳನ್ನು ಪರಾಮರ್ಶಿಸಲಾಯಿತು. ಇದರಲ್ಲಿ ಬದುಕಿರುವ 25 ಜನರಲ್ಲಿ 18 ಅರ್ಹ ಫಲಾನುಭವಿಗಳನ್ನು ಗುರುತಿಸಲಾಗಿತ್ತು. ಅಲ್ಲದೆ ವಾರಸುದಾರರ ಪೈಕಿ ಸ್ವೀಕರಿಸಲಾದ ಒಟ್ಟು 135 ಅರ್ಜಿಗಳಲ್ಲಿ 28 ಮಂದಿ ಸಮರ್ಪಕ ದಾಖಲೆಗಳನ್ನು ಸಲ್ಲಿಸಿದರು. ಇದರನ್ವಯ ಆಯ್ಕೆ ಮಾಡಿದ ಒಟ್ಟು 46 ಫಲಾನುಭವಿಗಳಿಗೆ ತಲಾ 5 ಗುಂಟೆ ಜಮೀನು ಮಂಜೂರು ಮಾಡಲು ಕೌನ್ಸಿಲ್ ಒಪ್ಪಿದೆ. ಕೌನ್ಸಿಲ್ ಒಪ್ಪಿಗೆ ದೊರೆತಿದ್ದಕ್ಕೆ ಶಾಸಕರು, ಮೇಯರ್ ಸೇರಿದಂತೆ ಎಲ್ಲರಿಗೂ ಧನ್ಯವಾದ ತಿಳಿಸಿದ ಸದಸ್ಯೆ ಪಲ್ಲವಿ ಬೇಗಂ, ಅರ್ಜಿ ಸಲ್ಲಿಸಿದ್ದ ಎಲ್ಲಾ ಬೆಳೆಗಾರರ ವಂಶಸ್ಥರಿಗೂ ಜಮೀನು ನೀಡಲು ಕ್ರಮ ವಹಿಸಿ, ಅವರ ಜೀವನೋಪಾಯಕ್ಕೆ ನೆರವಾಗುವುದರ ಜೊತೆಗೆ ಭೌತಿಕ ಹೆಗ್ಗುರುತು ಮೈಸೂರು ವೀಳ್ಯದೆಲೆ ಬೆಳೆಗೆ ಪ್ರೋತ್ಸಾಹಿಸಬೇಕೆಂಬ ಮನವಿ ಮಾಡಿದರು.

ಕೃಷಿ ಪರಿಕರ ಮಾರಾಟಗಾರರು ರೈತಸ್ನೇಹಿಯಾಗಿ ಕಾರ್ಯನಿರ್ವಹಿಸಬೇಕು

ಪರಿಕರ ಮಾರಾಟಗಾರರು ಮತ್ತು ರೈತ ಮುಖಂಡರ ಸಭೆಯಲ್ಲಿ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕಿ ಡಾ.ಹೆಚ್.ಬಿ ಮಧುಲತಾ ಸೂಚನೆ



ಮೈಸೂರು,ಜೂ.9(ಎಂಟಿವೈ)– ಕೃಷಿ ಪರಿಕರ ಮಾರಾಟಗಾರರು ಯಾವಾಗಲೂ ರೈತಸ್ನೇಹಿಯಾಗಿರುವುದರೊಂದಿಗೆ ರಸಗೊಬ್ಬರ, ಬಿತ್ತನೆ ಬೀಜ ಸೇರಿದಂತೆ ಕೃಷಿ ಚಟುವಟಿಕೆಗೆ ಅಗತ್ಯವಾಗಿರುವ ವಸ್ತುಗಳನ್ನು ನಿಗದಿತ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡಿದರೆ ಲೈಸೆನ್ಸ್ ರದ್ದು ಮಾಡಲಾಗುವುದು ಎಂದು ಸಹಾಯಕ ಕೃಷಿ ನಿರ್ದೇಶಕಿ ಡಾ.ಹೆಚ್.ಬಿ.ಮಧುಲತಾ ಎಚ್ಚರಿಕೆ ನೀಡಿದ್ದಾರೆ.

ಮೈಸೂರಿನ ಕರ್ಜನ್ ಪಾರ್ಕ್‌ನಲ್ಲಿರುವ ಡಾ.ಎಂ.ಹೆಚ್.ಮರೀಗೌಡ ಸಭಾ ಭವನದಲ್ಲಿ ಕೃಷಿ ಇಲಾಖೆ ವತಿಯಿಂದ ಆಯೋಜಿಸಿದ್ದ ಕೃಷಿ ಪರಿಕರ ಮಾರಾಟಗಾರರ ಸಭೆಯಲ್ಲಿ ಮಾತನಾಡಿದರು.

ಮೈಸೂರು ತಾಲ್ಲೂಕಿನ ಎಲ್ಲಾ ರಸಗೊಬ್ಬರ, ಕೀಟನಾಶಕ ಮತ್ತು ಬಿತ್ತನೆ ಬೀಜ ಮಾರಾಟಗಾರರು ಹಾಗೂ ತಾಲ್ಲೂಕಿನ ರೈತ ಮುಖಂಡರ ಎಲ್ಲಾ ಪರಿಕರ ಮಾರಾಟಗಾರರು ದಾಸ್ತಾನು ಮಾಡಲಾಗಿರುವ ರಸಗೊಬ್ಬರ, ಬಿತ್ತನೆ ಬೀಜ, ಕೀಟನಾಶಕಗಳ ಪ್ರಮಾಣ, ಮಾರಾಟ ದರ ಹಾಗೂ ಮಾರಾಟಗಾರರ ಲೈಸೆನ್ಸ್ ಅನ್ನು ಗ್ರಾಹಕರಿಗೆ ಕಾಣುವಂತೆ ಪ್ರದರ್ಶಿಸಬೇಕು. ರೈತರು ಖರೀದಿಸುವ ಪದಾರ್ಥಗಳಿಗೆ ಕಡ್ಡಾಯವಾಗಿ ಬಿಲ್ ನೀಡಬೇಕು ಎಂದು ಸೂಚಿಸಿದರು.

ಇತ್ತೀಚಿನ ದಿನಗಳಲ್ಲಿ ನಕಲಿ ರಸಗೊಬ್ಬರಗಳ ಹಾವಳಿ ಕುರಿತಂತೆ ದೂರು ಕೇಳಿ ಬರುತ್ತಿವೆ. ರೈತರು ಗೊಬ್ಬರ ಖರಿದಿಸುವಾಗ ಎಚ್ಚರಿಕೆಯಿಂದ ಇರುವಂತೆ ಈಗಾಗಲೇ ಸಲಹೆ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ನಕಲಿ ರಸಗೊಬ್ಬರ ಹಾವಳಿ ತಡೆಗೆ ಹಾಗೂ ರೈತರಿಗೆ ಅನ್ಯಾಯವಾಗುವುದನ್ನು ತಡೆಗಟ್ಟುವುದಕ್ಕೆ ಮಾರಾಟ ಗಾರರು ಸಹಕರಿಸಬೇಕು. ರಸಗೊಬ್ಬರದ ಮೂಟೆ ಯಂತ್ರದಿಂದ ಹೊಲೆದಿರಬೇಕು. ಕೈಯಿಂದ ಚೀಲ ಹೊಲೆದಿದ್ದರೆ ಅದಕ್ಕೆ ಸೀಸದ ಮೊಹರನ್ನು ಕಡ್ಡಾಯ ವಾಗಿ ಹಾಕಿರಬೇಕು. ರಸಗೊಬ್ಬರ ಖರೀದಿಸಿದಾಗ, ತೂಕ ಮಾಡಿ ಖಾತ್ರಿ ಪಡಿಸಿಕೊಳ್ಳಬೇಕು. ರಸಗೊಬ್ಬರದ ಚೀಲದ ಮೇಲೆ ಕಡ್ಡಾಯವಾಗಿ ರಸಗೊಬ್ಬರವೆಂದು, ತಯಾರಕರ ಹೆಸರು ಮತ್ತು ವಿಳಾಸ, ಬ್ರ್ಯಾಂಡ್ ಹೆಸರು ಮುದ್ರಿತವಾಗಿರಬೇಕು ಎಂದು ತಿಳಿಸಿದರು.

ರಸಗೊಬ್ಬರದಲ್ಲಿರುವ ಕನಿಷ್ಠ ಶೇಕಡಾವಾರು ಪೋಷಕಾಂಶಗಳ ವಿವರ, ಗರಿಷ್ಠ ಮಾರಾಟ ಬೆಲೆ, ಗರಿಷ್ಠ ಮತ್ತು ನಿವ್ವಳ ತೂಕ, ರಸಗೊಬ್ಬರಗಳ ಮಿಶ್ರಣಗಳು, ಸಿಂಗಲ್ ಸೂಪರ್ ಪಾಸ್ಫೇಟ್, ಲಘು ಪೋಷಕಾಂಶಗಳು ಮತ್ತು ಅವುಗಳ ಮಿಶ್ರಣಗಳ ಚೀಲ ಅಥವಾ ಡಬ್ಬಾಗಳ ಮೇಲೆ ಬ್ಯಾಚ್ ಸಂಖ್ಯೆ ಮತ್ತು ನೋಂದಣಿ ಸಂಖ್ಯೆ ಇರಬೇಕು. ರಸಗೊಬ್ಬರವನ್ನು ಖರೀದಿಸಿದ್ದಕ್ಕೆ ನಮೂನೆ 'ಎಂ'ನಲ್ಲಿ ರಶೀದಿಯನ್ನು ಪಡೆಯಬೇಕು. ಅದರಲ್ಲಿ ವಿವರ ಭರ್ತಿ ಮಾಡಿ ರೈತರು, ಮತ್ತು ಮಾರಾಟಗಾರರು ಸಹಿ ಮಾಡ ಬೇಕು. ಆಧಾರ್ ಆಧಾರಿತ ಪಿಓಎಸ್ ಯಂತ್ರಗಳ ಮೂಲಕ ಕಡ್ಡಾಯವಾಗಿ ಹೆಬ್ಬೆಟ್ಟು ಪಡೆದು, ಬಿಲ್ ನೀಡಬೇಕು. ಈ ಎಲ್ಲಾ ಅಂಶಗಳನ್ನು ರೈತರು ಗಮನದಲ್ಲಿಟ್ಟುಕೊಂಡು ರಸಗೊಬ್ಬರ ಮತ್ತು ಬಿತ್ತನೆ ಬೀಜ ಹಾಗೂ ಕೀಟನಾಶಕ ಮಾರಾಟಗಾರರೊಂದಿಗೆ ವ್ಯವಹರಿಸಬೇಕು ಎಂದರು.

ಡೀಲರ್‌ಗಳು ರೈತರೊಂದಿಗೆ ಅನುಚಿತವಾಗಿ ವರ್ತಿಸಬಾರದು. ನಿಯಮಗಳನ್ನು ಮೀರಿ ನಡೆದುಕೊಳ್ಳುವುದು ಕಂಡು ಬಂದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ. ಪ್ರಸ್ತುತ ತಾಲ್ಲೂಕಿನ ಎಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿಯೂ ಸಹಾಯಧನದಲ್ಲಿ ಬಿತ್ತನೆ ಬೀಜಗಳಾದ ಮುಸುಕಿನ ಜೋಳ, ಹೆಸರು, ಉದ್ದು, ಅಲಸಂದೆ ಲಭ್ಯವಿದ್ದು, ರೈತರು ಈ ಸೌಲಭ್ಯಗಳನ್ನು ಪಡೆಯಲು ತಮ್ಮ ಆಧಾರ್ ಸಂಖ್ಯೆ ಅಥವಾ ಎಫ್‌ಐಡಿ ಸಂಖ್ಯೆ, ಪರಿಶಿಷ್ಟ ಜಾತಿ, ಪಂಗಡ ವರ್ಗದ ರೈತರು ಜಾತಿ ಪ್ರಮಾಣ ಪತ್ರ ಪ್ರತಿ ತರುವಂತೆ ಕೋರಿದರು.

ಸಭೆಯಲ್ಲಿ ತಾಲ್ಲೂಕು ಕೃಷಿಕ ಸಮಾಜದ ಅಧ್ಯಕ್ಷ ಕೆ.ಬಿ.ಲಿಂಗರಾಜು, ರೈತ ಮುಖಂಡರಾದ ವೆಂಕಟೇಶ್, ವಿಜಯೇಂದ್ರ, ವರಕೋಡು ಕೃಷ್ಣೇಗೌಡ, ಕಂದಾಯ ಇಲಾಖೆಯ ಶಿರಸ್ತೇದಾರ್ ಲೋಕೇಶ್, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಶಶಿಧರ್, ಕೃಷಿ ಅಧಿಕಾರಿಗಳಾದ ಪಿ.ಎನ್.ವೆಂಕಟೇಶ, ಆನಂದ ಕುಮಾರ್, ಪಿ.ಎನ್.ಜೀವನ್, ಸಿ.ಎಂ.ಕಾರ್ತಿಕ್ ಮತ್ತು ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಮೈಸೂರಲ್ಲಿ ವಿಭಾಗಮಟ್ಟದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ

ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್ ಪ್ರಸ್ತಾಪ

ಮೈಸೂರು, ಜೂ.9(ಆರ್‌ಕೆ)–ಮೈಸೂರಲ್ಲಿ ವಿಭಾಗಮಟ್ಟದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸುವುದಾಗಿ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್ ಘೋಷಿಸಿದ್ದಾರೆ.



ಬೆಂಗಳೂರಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೈಸೂರು ಸೇರಿದಂತೆ ರಾಜ್ಯದ ಐದು ಕಂದಾಯ ವಿಭಾಗಗಳಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ನಿರ್ಮಿಸಲಾಗುವುದು. ಮೈಸೂರು, ಕಲಬುರಗಿ ಮತ್ತು ಬೆಳಗಾವಿಯಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತೇವೆ ಎಂದರು.

ರೋಗಿಗಳಿಗೆ ಕಡಿಮೆ ದರದಲ್ಲಿ ಗುಣಮಟ್ಟದ ಚಿಕಿತ್ಸೆ ನೀಡಲು ನಿರ್ಧರಿಸಲಾಗಿದ್ದು, ಎಲ್ಲರಿಗೂ ಉತ್ತಮ ವೈದ್ಯಕೀಯ ಚಿಕಿತ್ಸಾ ಸೌಲಭ್ಯ ಒದಗಿಸಿ ಆರೋಗ್ಯ ಸುಸ್ಥಿರವಾಗಿರಿಸಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ. ಪ್ರಧಾನಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ (PMSSY)ಯಡಿ ರಾಜ್ಯದ ವಿವಿಧ ಕಡೆಗಳಲ್ಲಿ ಟೆರಿಟಿಯರಿ ಮಟ್ಟದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ನಿರ್ಮಿಸಲಾಗುವುದು ಎಂದು ಸಚಿವರು ತಿಳಿಸಿದ್ದಾರೆ.

ಕಂದಾಯ ವಿಭಾಗಗಳ ಕೇಂದ್ರ ಸ್ಥಾನಗಳಲ್ಲಿ ಕಾರ್ಡಿಯಾಕ್ ಮತ್ತು ಟ್ರಾಮಾ ಕೇರ್ ಸೆಂಟರ್‌ಗಳನ್ನೂ ಸ್ಥಾಪಿಸಲು ಸರ್ಕಾರ ಉದ್ದೇಶಿಸಿದ್ದು, ಆರ್ಥಿಕ ದುರ್ಬಲರು ಹಾಗೂ ಶ್ರೀಸಾಮಾನ್ಯನಿಗೆ ಎಲ್ಲಾ ಬಗೆಯ ತುರ್ತು ಚಿಕಿತ್ಸೆ ಲಭ್ಯವಾಗುವಂತೆ ಆಸ್ಪತ್ರೆಗಳನ್ನು ನಿರ್ಮಿಸಲು ಮುಂದಾಗಿದ್ದೇವೆ ಎಂದು ಡಾ. ಶರಣ ಪ್ರಕಾಶ್ ಪಾಟೀಲ್ ಅವರು ತಿಳಿಸಿದ್ದಾರೆ.

ಮತ್ತಷ್ಟು ಮಂದಿಗೆ ವೈದ್ಯಕೀಯ ಶಿಕ್ಷಣ ತಲುಪಿಸುವ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಬೇಕೆಂಬ ಉದ್ದೇಶವಿದ್ದು, ಈ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ನಿರ್ಧರಿಸುತ್ತೇವೆ ಎಂದು ಅವರು ತಿಳಿಸಿದ್ದಾರೆ.

ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಸೂರು ಜಿಲ್ಲಾ ಪ್ರವಾಸ



ಮೈಸೂರು, ಜೂ.9– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾಳೆ (ಶನಿವಾರ) ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದು, ಮಧ್ಯಾಹ್ನ 12.20ಕ್ಕೆ ಸುತ್ತೂರಿನ ಜೆಎಸ್‌ಎಸ್ ವಸತಿ ಶಾಲಾ ಮೈದಾನದ ಹೆಲಿಪ್ಯಾಡ್‌ಗೆ ಆಗಮಿಸುವರು. ನಂತರ ಅವರು ಮಧ್ಯಾಹ್ನ 12:35ಕ್ಕೆ ಬಿಳಿಗೆರೆ ಗ್ರಾಮದಲ್ಲಿ ಹಮ್ಮಿಕೊಂಡಿರುವ ಕೃತಜ್ಞತಾ ಸಮಾರಂಭದಲ್ಲಿ ಪಾಲ್ಗೊಳ್ಳುವರು.

ಮಧ್ಯಾಹ್ನ 2.45ಕ್ಕೆ ಸುತ್ತೂರು ಶ್ರೀ ಕ್ಷೇತ್ರಕ್ಕೆ ಭೇಟಿ ನೀಡಲಿದ್ದು, ಸಂಜೆ 4 ಗಂಟೆಗೆ ಮೈಸೂರಿನ ಜಿಲ್ಲಾ ಪಂಚಾಯಿತಿ ಕಚೇರಿಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಚರ್ಚಿಸುವರು. ಜೂನ್ 11ರಂದು ಬೆಳಗ್ಗೆ 9:30ಕ್ಕೆ ಮೈಸೂರು ವಿಮಾನ ನಿಲ್ದಾಣದಿಂದ ಬೆಂಗಳೂರಿಗೆ ಪ್ರಯಾಣ ಬೆಳೆಸುವರು ಎಂದು ಮುಖ್ಯಮಂತ್ರಿಗಳ ಅಪ್ತಕಾರ್ಯದರ್ಶಿ ಡಾ. ವೆಂಕಟೇಶಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಂಡ್ಯ ಪಿಇಎಸ್‌ಸಿಇ ಮುಕುಟಕ್ಕೆ ಮತ್ತೊಂದು ಗರಿ



ಮೈಸೂರು, ಜೂ.9(ಸಿಎನ್)– ಎನ್‌ಐಆರ್‌ಎಫ್ ರ‍್ಯಾಂಕ್ ಪಡೆದಿರುವ ತಾಂತ್ರಿಕ ವಿದ್ಯಾಸಂಸ್ಥೆಗಳ ಪಟ್ಟಿಯನ್ನು, ಜೂನ್ 6 ರಂದು ಕೇಂದ್ರ ಶಿಕ್ಷಣ ಸಚಿವರಾದ ಧರ್ಮೇಂದ್ರ ಪ್ರಧಾನ್ ಅವರು ಬಿಡುಗಡೆ ಮಾಡಿದ್ದಾರೆ.

ಈ ಪಟ್ಟಿಯಲ್ಲಿ ದೇಶದ ಐಐಟಿ, ಎನ್‌ಐಟಿ ಮತ್ತು ತಾಂತ್ರಿಕ ವಿಶ್ವ ವಿದ್ಯಾನಿಲಯಗಳು ಒಳಗೊಂಡಿದ್ದು, ಈ ಪೈಕಿ ಮಂಡ್ಯ ಪಿ.ಇ.ಎಸ್ ಇಂಜಿನಿಯರಿಂಗ್ ಕಾಲೇಜಿಗೆ, 2023ನೇ ಸಾಲಿನ ರಾಷ್ಟ್ರೀಯ ಮಟ್ಟದಲ್ಲಿ 151 ರಿಂದ 200ರ ಶ್ರೇಣಿಯಲ್ಲಿ ಸ್ಥಾನ ದಕ್ಕಿದೆ ಎಂದು ಪಿಇಎಸ್ ಕಾಲೇಜಿನ ಪ್ರಾಂಶುಪಾಲರಾದ ಡಾ.ಆರ್.ಎಂ.ಮಹಲಿಂಗೇಗೌಡ ಮಾಹಿತಿ ನೀಡಿದರು.

ನಗರದ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಮಂಡ್ಯ ಪಿಇಎಸ್ ಕಾಲೇಜು ಕಳೆದ 5 ವರ್ಷಗಳಿಂದ ಶ್ರೇಣಿಯ ಸ್ಥಿರತೆ ಕಾಯ್ದುಕೊಂಡು ಬಂದಿದೆ. ಇನ್ನು ಈ ಹಿಂದೆ 2019 ರಲ್ಲಿ 161ನೇ ರ‍್ಯಾಂಕ್, 2020ರಲ್ಲಿ 147, 2021ರಲ್ಲಿ 139 ಹಾಗೂ ಪ್ರಸಕ್ತ ಸಾಲಿನಲ್ಲಿ 151ನೇ ಶ್ರೇಣಿಯ ಬ್ಯಾಂಡ್‌ನಲ್ಲಿ ಸ್ಥಾನ ಉಳಿಸಿಕೊಂಡು ಬಂದಿರುವುದು ಹೆಮ್ಮೆಯ ವಿಚಾರವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಎಆರ್‌ಐಐಎ ಆವೃತ್ತಿಯನ್ನು ಎನ್‌ಐಆರ್‌ಎಫ್ ಇನ್ನೋವೇಷನ್ ಶ್ರೇಯಾಂಕ ಎಂದು ಮರು ನಾಮಕರಣ ಮಾಡಲಾಗಿದ್ದು, ಇದು ಎಆರ್‌ಐಐಎ ಚೌಕಟ್ಟಿನಲ್ಲಿ ನಿಯತಾಂಕಗಳು ಮತ್ತು ಪ್ರಮುಖ ಕಾರ್ಯಕ್ಷಮತೆ ಸೂಚನೆಗಳನ್ನು ಒಳಗೊಂಡಿದೆ. 4ನೇ ಆವೃತ್ತಿಯಲ್ಲಿ ನಮ್ಮ ಪಿಇಎಸ್ ಇಂಜಿನಿಯರ್ ಕಾಲೇಜು ರಾಷ್ಟ್ರಮಟ್ಟದಲ್ಲಿ 50 ಕಾಲೇಜುಗಳ ಪೈಕಿ 11ನೇ ಸ್ಥಾನ ಪಡೆದಿದ್ದು, ಕರ್ನಾಟಕದಲ್ಲಿ ಮೂರನೇ ಸ್ಥಾನದಲ್ಲಿದ್ದು, ಸರ್ಕಾರಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಮೊದಲನೆ ಸ್ಥಾನ ಪಡೆದಿದೆ ಎಂದು ತಿಳಿಸಿದರು.

ಎನ್‌ಐಆರ್‌ಎಫ್ ನೀಡುವ ಪ್ರಕ್ರಿಯೆಯಲ್ಲಿ ಬೋಧನೆ, ಕಲಿಕೆ ಮತ್ತು ಸಂಪನ್ಮೂಲಗಳು, ಸಂಶೋಧನೆ ಮತ್ತು ವೃತ್ತಿಪರ ಅಭ್ಯಾಸಗಳು, ಪದವಿ ಫಲಿತಾಂಶ ಮೊದಲಾದವನ್ನು ಪರಿಗಣಿಸಲಾಗುತ್ತದೆ. ಇನ್ನು ದೇಶದ 4500 ಇಂಜಿನಿಯರಿಂಗ್ ಕಾಲೇಜುಗಳ ಪೈಕಿ ಸುಮಾರು 2500 ಇಂಜಿನಿಯರಿಂಗ್ ಸಂಸ್ಥೆಗಳು ಈ ಪದವಿಗಾಗಿ ಅರ್ಜಿ ಸಲ್ಲಿಸಿದ್ದವು ಎಂದು ವಿವರಿಸಿದರು.

ರ‍್ಯಾಂಕ್ ವಿಚಾರವಾಗಿ ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ, ಖಾಸಗಿಯವರು ನೀಡುವ ಶ್ರೇಣಿಗೂ ಸರ್ಕಾರ ನೀಡುವ ಶ್ರೇಣಿಗೂ ಸಾಕಷ್ಟು ವ್ಯತ್ಯಾಸವಿದೆ. ಗೌರವಾನ್ವಿತ ಕೇಂದ್ರ ಸರ್ಕಾರದಿಂದ ನೀಡಿದ ಶ್ರೇಣಿಯ ಬಗ್ಗೆ ನಾವು ಯಾವುದೇ ಚಕಾರ ಎತ್ತುವುದಿಲ್ಲ. ರ‍್ಯಾಂಕ್ ಹಂಚಿಕೆ ನ್ಯಾಯ ಸಮ್ಮತವಾಗಿದೆ ಎಂದು ಅಭಿಪ್ರಾಯಿಸಿದರು.

ಗೋಷ್ಠಿಯಲ್ಲಿ ಪಿಇಎಸ್ ಕಾಲೇಜು ಮುಖ್ಯಸ್ಥರಾದ (ಡೀನ್) ಆರ್.ಗಿರೀಶ್, ಸಹ ಮುಖ್ಯಸ್ಥರಾದ ಡಿ.ಆರ್.ಡಾ. ಉಮೇಶ್, ಸಿಓಇ ಡಾ.ಕೆ.ಜೆ.ಮಹೇಂದ್ರ ಬಾಬು, ಟಿಪಿಓ ಡಾ.ವಿನಯ್ ಎಸ್, ಎನ್‌ಐಆರ್‌ಎಫ್‌ಸಿ ಎಂ.ಸಿ.ಗಿರೀಶ್ ಬಾಬು, ಐಎನ್‌ಎನ್‌ಸಿ ಸಿದ್ದೇಶ್ ಕುಮಾರ್ ಎನ್.ಎಂ ಇದ್ದರು.

ಇಂದು ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದಿಂದ ಶಾಸಕ ಶ್ರೀವತ್ಸಗೆ ಅಭಿನಂದನೆ



ಮೈಸೂರು, ಜೂ. 9– ಮೈಸೂರಿನ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ವತಿಯಿಂದ ಜೂನ್ 10ರಂದು ಸಂಜೆ 5 ಗಂಟೆಗೆ ಕೃಷ್ಣರಾಜ ಕ್ಷೇತ್ರದ ನೂತನ ಶಾಸಕ ಟಿ.ಎಸ್. ಶ್ರೀವತ್ಸ ಅವರಿಗೆ ಅಭಿನಂದನಾ ಸಮಾರಂಭ ಆಯೋಜಿಸಲಾಗಿದೆ. ಜೆಎಲ್‌ಬಿ ರಸ್ತೆಯಲ್ಲಿರುವ ಸಂಘದ ಕೇಂದ್ರ ಕಚೇರಿಯ ಶ್ರೀ ಶಾರದಾ ನಿಕೇತನ ಸಭಾಂಗಣದಲ್ಲಿ ನಡೆಯಲಿರುವ ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಎಂ. ವಿಶ್ವನಾಥಯ್ಯ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಾಳೆ ಮೈಸೂರಿನಲ್ಲಿ ದಿ ಹಿಂದೂ ಎಜುಕೇಶನ್ ಪ್ಲಸ್ ಕರಿಯರ್ ಕೌನ್ಸೆಲಿಂಗ್

ಮೈಸೂರು, ಜೂ.9– ವಿದ್ಯಾರ್ಥಿಗಳ ಭವಿಷ್ಯದ ಹಾದಿಗೆ ಮಾರ್ಗದರ್ಶಿಯಾದ 'ದಿ ಹಿಂದೂ ಎಜುಕೇಶನ್ ಪ್ಲಸ್ ಕರಿಯರ್ ಕೌನ್ಸೆಲಿಂಗ್' 20ನೇ ಆವೃತ್ತಿ ಮೈಸೂರಿನಲ್ಲಿ ಆರಂಭಗೊಳ್ಳಲಿದ್ದು, ಜೂನ್ 11ರ ಭಾನುವಾರ ಬೆಳಗ್ಗೆ 9.30ರಿಂದ ಉಚಿತವಾಗಿ ದಾಖಲಾತಿ ಮತ್ತು 10.00ಕ್ಕೆ ಕಾರ್ಯಕ್ರಮವು ವಿದ್ಯಾವರ್ಧಕ ಕಾಲೇಜ್ ಆಫ್ ಇಂಜಿನಿಯರಿಂಗ್‌ನ ಸಾಹುಕಾರ್ ಚನ್ನಯ್ಯ ಸಭಾಂಗಣದಲ್ಲಿ ನಡೆಯಲಿದೆ.

ವೈದ್ಯಕೀಯ, ಎಂಜಿನಿಯರಿಂಗ್ ಸಹಿತ ವೃತ್ತಿಪರ ಕೋರ್ಸ್‌ಗಳು, ಸಿಇಟಿ, ನೀಟ್‌ನಂತಹ ಪ್ರವೇಶ ಪರೀಕ್ಷೆಗಳು, ಕಾನೂನು ಹೀಗೆ ವಿವಿಧ ಪದವಿ ಮತ್ತಿತರ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅಗತ್ಯ ಮಾರ್ಗದರ್ಶನ ನೀಡಲಾಗುವುದು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಭಾಗವಹಿಸಲಿದ್ದು, ಇಂಜಿನಿಯರಿಂಗ್ ಶಿಕ್ಷಣ ಕುರಿತು ವಿದ್ಯಾವರ್ಧಕ ಕಾಲೇಜ್ ಆಫ್ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ. ಬಿ.ಸದಾಶಿವೇಗೌಡ, ವೈದ್ಯಕೀಯ ಶಿಕ್ಷಣ ಕುರಿತು ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ಕಮ್ಯುನಿಟಿ ಮೆಡಿಕಲ್ ವಿಭಾಗದ ಮುಖ್ಯಸ್ಥ ಡಾ. ಎಸ್.ಎನ್.ಮಂಜುನಾಥ್, ಸಿಇಟಿ ಕೌನ್ಸೆಲಿಂಗ್ ಕುರಿತು ಉದಯ್ ಶಂಕರ್ ಹಾಗೂ ಇನ್ನಿತರ ಶಿಕ್ಷಣ ಅವಕಾಶಗಳ ಕುರಿತು ಸಿಗ್ಮಾ ಸಂಸ್ಥೆಯ ಆಮಿನ್ ಇ ಮುದಸಿರ್ ಮಾರ್ಗದರ್ಶನ ನೀಡಲಿದ್ದಾರೆ.

ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಣ ಸಂಸ್ಥೆಗಳ ನಡುವೆ ಸಂಪರ್ಕ ಕೊಂಡಿಯಾಗಿ ಕಾರ್ಯನಿರ್ವಹಿಸುವ ಈ ಕರಿಯರ್ ಕೌನ್ಸೆಲಿಂಗ್, ಸೂಕ್ತ ಮಾರ್ಗದರ್ಶನದಿಂದಾಗಿ ವಿದ್ಯಾರ್ಥಿಗಳು ಶೈಕ್ಷಣಿಕ ಜೀವನದಲ್ಲಿ ಸರಿಯಾದ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಲು ನೆರವಾಗಲಿದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ ಬಿ.ರಾಜೇಶ್–9448871715

ರಕ್ತದಾನ ಹಾಗೂ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಜೂ. 9– ಎಎಪಿ ಮುಖಂಡ ಎ.ಎಸ್.ಸತೀಶ್ ಅವರು ರಕ್ತದಾನ ಮತ್ತು ಆರೋಗ್ಯ ತಪಾಸಣಾ ಶಿಬಿರವನ್ನು, ಇದೇ ಜೂನ್ 10ರಂದು, ನಗರದ ಗೋಕುಲಂ ಕ್ರೀಡಾ ಮೈದಾನದಲ್ಲಿ ಹಮ್ಮಿಕೊಂಡಿದ್ದಾರೆ. ಭಾಗಿಯಾಗುವ ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಮೊ.70199647578 ನಂಬರ್ ಸಂಪರ್ಕಿಸಬಹುದು.



ಕೆ.ಸಿ.ಮಹೇಶ್ ಗೌಡರವರ ಹುಟ್ಟುಹಬ್ಬವನ್ನು ಆರೋಗ್ಯ ತಪಾಸಣೆ ಹಾಗೂ ನೇತ್ರ ತಪಾಸಣೆ ಶಿಬಿರದ ಮೂಲಕ ಕೆ.ಜಿ.ಕೊಪ್ಪಲಿನಲ್ಲಿ ಆಚರಿಸಲಾಯಿತು. ಈ ವೇಳೆ ಜಯರಾಮಣ್ಣ, ಶಿವಮಾದು, ಚಿಕ್ಕಣ್ಣ, ರತ್ನಮ್ಮ, ಗಿರೀಶ, ಮಹೇಶ್, ರಾಮಕೃಷ್ಣ, ಚೆಲುವೇಗೌಡ, ಸುರೇಶ, ಮಹಾದೇವ, ಜವರೇಗೌಡ, ರಾಮಸ್ವಾಮಿ, ರಾಜೇಂದ್ರ, ರಮೇಶ್, ಕಿಶೋರ್, ವಿನೋದ, ಬೋರೇಗೌಡ, ಚೆಲುವಣ್ಣ, ಮಂಜು, ಶಶಿ, ಹರ್ಷ, ಯಶವಂತ್ ಹಾಗೂ ಕುಂಬಾರಕೊಪ್ಪಲಿನ ಗ್ರಾಮಸ್ಥರು ಹಾಜರಿದ್ದರು.

ಅಜ್ಜಿಯನ್ನು ಕೊಂದು, ಸುಟ್ಟು ಹಾಕಿದ ಮೊಮ್ಮಗನ ಬಂಧನ

ಕಾರಿನಲ್ಲಿ ಅಜ್ಜಿ ಶವ ಇರಿಸಿಕೊಂಡು ನಾಪತ್ತೆ ಪ್ರಕರಣ ದಾಖಲಿಸಿದ ನಿರ್ದಯಿ!

ಮೈಸೂರು, ಜೂ.9– ತನ್ನ ಅಜ್ಜಿಯನ್ನೇ ಹತ್ಯೆ ಮಾಡಿ, ಆಕೆಯ ಶವಕ್ಕೆ ಬೆಂಕಿ ಇಟ್ಟಿದ್ದ ಮೊಮ್ಮಗನನ್ನು ಪೊಲೀಸರು ಬಂಧಿಸಿದ್ದಾರೆ. ಮೈಸೂರಿನ ಗಾಯತ್ರಿಪುರಂ ನಿವಾಸಿ ಸುಪ್ರೀತ್(23)ನನ್ನು ಪೊಲೀಸರು ಬಂಧಿಸಿದ್ದು, ಈತ ಸ್ವಂತ ಅಜ್ಜಿ ಸುಲೋಚನ(75) ಅವರನ್ನು ಹತ್ಯೆ ಮಾಡಿ, ಶವಕ್ಕೆ ಬೆಂಕಿ ಇಟ್ಟಿದ್ದಲ್ಲದೆ ಅವರು ನಾಪತ್ತೆಯಾಗಿದ್ದಾರೆಂದು ನಾಟಕವಾಡಿದ್ದ ಎನ್ನಲಾಗಿದೆ.

ತಾಲೂಕಿನ ಹೊಸಕೋಟೆ ಬಳಿ ಕೆಆರ್‌ಎಸ್ ಹಿನ್ನೀರು ಪ್ರದೇಶದ ಹಳ್ಳವೊಂದರಲ್ಲಿ ಮೇ 31ರಂದು ಮಹಿಳೆಯ ಶವ ಅರೆಬೆಂದ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಪ್ರಕರಣದ ಜಾಡು ಹಿಡಿದು ಹೊರಟ ಇಲವಾಲ ಠಾಣೆ ಪೊಲೀಸರು ಸುಪ್ರೀತ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಹತ್ಯೆ ಪ್ರಕರಣ ಬೆಳಕಿಗೆ ಬಂದಿದೆ.

ಅಜ್ಜಿ ಸದಾ ನನ್ನನ್ನು ಬೈಯ್ಯುತ್ತಿದ್ದಳು. ಹಾಗಾಗಿ ಆಕೆಯನ್ನು ಹತ್ಯೆ ಮಾಡಿದ್ದಾಗಿ ಸುಪ್ರೀತ್ ತಿಳಿಸಿದ್ದಾನೆ. ಅಜ್ಜಿಯನ್ನು ಹತ್ಯೆ ಮಾಡಿದ ಬಳಿಕ ಶವವನ್ನು ಪ್ಲಾಸ್ಟಿಕ್ ಚೀಲದಲ್ಲಿ ಸುತ್ತಿ ರಟ್ಟಿನ ಬಾಕ್ಸ್‌ನಲ್ಲಿಟ್ಟು ಕಾರಿನಲ್ಲಿ ಸಾಗಿಸಿ ಕೆಆರ್‌ಎಸ್ ಹಿನ್ನೀರು ಪ್ರದೇಶದ ಹಳ್ಳದಲ್ಲಿ ಸುಟ್ಟುಹಾಕಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಅಜ್ಜಿಯ ಶವ ಕಾರಿನಲ್ಲಿರಿಸಿಕೊಂಡೇ ಅವರು ನಾಪತ್ತೆಯಾಗಿದ್ದಾರೆಂದು ಪೊಲೀಸರಿಗೆ ದೂರು ನೀಡಿದ್ದ ಎಂದು ತಿಳಿದುಬಂದಿದೆ. ಪ್ರಕರಣ ಭೇದಿಸಿದ ಸಿಪಿಐ ಜಿ.ಸ್ವರ್ಣ ಹಾಗೂ ತಂಡವನ್ನು ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಪ್ರಶಂಸಿಸಿದ್ದಾರೆ.

10 ದಿನಗಳ ಉಚಿತ ಯೋಗ ಶಿಬಿರ

ಮೈಸೂರು, ಜೂ. 9–ಜೂ.21ರಂದು ವಿಶ್ವ ಯೋಗ ದಿನದ ಪ್ರಯುಕ್ತ, ಪರಮಹಂಸ ಯೋಗ ವಿದ್ಯಾಲಯ ಹಾಗೂ ಮೈಸೂರು ಯೋಗ ಒಕ್ಕೂಟಗಳ ವತಿಯಿಂದ, ಜೂ.12 ರಿಂದ 21ರವರೆಗೆ, 10 ದಿನಗಳ ಕಾಲ ಉಚಿತ ಯೋಗ, ಧ್ಯಾನ, ಪ್ರಾಣಾಯಾಮ ಶಿಬಿರವನ್ನು, ಮೈಸೂರಿನ ರಾಮಕೃಷ್ಣ ನಗರದ ಯೋಗ ಪಾರ್ಕ್ ಪಕ್ಕದ, ಪರಮಹಂಸ ಯೋಗ ವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದೆ.

ಆಸಕ್ತರು ತಮ್ಮ ಹೆಸರುಗಳನ್ನು ಜೂ.11ರ ಒಳಗಾಗಿ ನೋಂದಾಯಿಸಿಕೊಳ್ಳುವಂತೆ ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ. 9035506790 ಅಥವಾ 9008727172 ನಂಬರ್‌ಗಳಿಗೆ ಸಂಪರ್ಕಿಸಬಹುದು.

ಎಸ್ಸಿ, ಎಸ್ಟಿ ಕೈಗಾರಿಕೋದ್ಯಮಿಗಳಿಗೆ ಹೆಚ್ಚಿನ ಅನುದಾನ ನೀಡಲು ಒತ್ತಾಯ ಹೇರಬೇಕು



ಮೈಸೂರು, ಜೂ.9(ಎಸ್‌ಪಿಎನ್)– ಎಸ್‌ಇಪಿ–ಟಿಎಸ್‌ಪಿ ಅನುದಾನದಲ್ಲಿ ಎಸ್ಸಿ–ಎಸ್ಟಿ ಕೈಗಾರಿಕೋದ್ಯಮಿಗಳಿಗೆ ಹೆಚ್ಚಿನ ಅನುದಾನ ಮೀಸಲಿಡುವಂತೆ ಒತ್ತಡ ತರಬೇಕು ಎಂದು ಕರ್ನಾಟಕ ದಲಿತ ಉದ್ದಿಮೆದಾರರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ.ಶ್ರೀನಿವಾಸನ್ ಒತ್ತಾಯಿಸಿದರು.

ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ಮೈಸೂರು ಜಿಲ್ಲಾ ಪಜಾತಿ ಮತ್ತು ಪಪಂಗಡದ ಉದ್ದಿಮೆದಾರರ ಸಂಘದ ವತಿಯಿಂದ ಆಯೋಜಿಸಿದ್ದ ರಾಷ್ಟ್ರಮಟ್ಟದ ಪ.ಜಾತಿ ಮತ್ತು ಪ.ಪಂಗಡ ಕೈಗಾರಿಕೋದ್ಯಮಿಗಳ ಮಹಾ ಸಮ್ಮೇಳನದ ಪೂರ್ವಭಾವಿ ಸಭೆ ಹಾಗೂ ಕುಂದುಕೊರತೆ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಎಸ್ಸಿ–ಎಸ್ಟಿ ಸಮುದಾಯದವರು ಕೈಗಾರಿಕೆಗಳನ್ನು ಸ್ಥಾಪಿಸಬಹುದು ಎಂಬ ವಿಶ್ವಾಸ ಮೂಡಿಸಿದ್ದು ಸಿದ್ದರಾಮಯ್ಯನವರು, ಇವರ ನಂತರ ಅಧಿಕಾರಕ್ಕೆ ಬಂದ ಬಿ.ಎಸ್. ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಅವರು, ಹೆಚ್ಚಿನ ಅನುದಾನ ನೀಡಿ, ಪ್ರೋತ್ಸಾಹಿಸಿದ್ದಾರೆ. ಇದೇ ರೀತಿಯ ಪ್ರೋತ್ಸಾಹ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ದೊರಕಿಸಿಕೊಡಲು ಜಿಲ್ಲಾ ಹಂತದ ಕೈಗಾರಿಕೋದ್ಯಮಿಗಳು ಸರ್ಕಾರದ ಮೇಲೆ ಒತ್ತಡ ತರುವಂತೆ ಮನವಿ ಮಾಡಿದರು.

ರಾಷ್ಟ್ರಮಟ್ಟದಲ್ಲಿ ಎಸ್ಸಿ–ಎಸ್ಟಿ ಕೈಗಾರಿಕೋದ್ಯಮಿಗಳ ಮಹಾ ಸಮ್ಮೇಳನ ಆಯೋಜಿಸಲು ಸಿದ್ದತೆ ನಡೆಸಲಾಗಿದೆ. ಆ ಕಾರ್ಯಕ್ರಮಕ್ಕೆ ಗುಜರಾತ್, ಕರ್ನಾಟಕ, ಪಂಜಾಬ್ ಸೇರಿದಂತೆ ಇತರೆ ರಾಜ್ಯಗಳ ಮುಖ್ಯಮಂತ್ರಿಗಳನ್ನು ಮುಖ್ಯ ಅತಿಥಿಗಳಾಗಿ ಕರೆಯಲು ಚಿಂತನೆ ನಡೆಸಲಾಗುತ್ತಿದೆ. ಇದಕ್ಕಾಗಿ ಜಿಲ್ಲಾ ಮತ್ತು ತಾಲೂಕು ಹಂತದ ಕೈಗಾರಿಕೋದ್ಯಮಿಗಳಲ್ಲಿ ಅರಿವು ಮೂಡಿಸುವ ಕೆಲಸ ಮಾಡಲಾಗುತ್ತಿದೆ ಎಂದು ತಿಳಿಸಿದರು.

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಎಸ್‌ಇಪಿ ಮತ್ತು ಟಿಎಸ್‌ಪಿಯಿಂದ ಎಸ್ಸಿ–ಎಸ್ಟಿ ಕೈಗಾರಿಕೋದ್ಯಮಿಗಳಿಗೆ ಶೇ.2ರಷ್ಟು ಸಿಗುತ್ತಿಲ್ಲ. ಈ ಅನುದಾನವನ್ನು ಮತ್ತಷ್ಟು ಹೆಚ್ಚಿಸಲು ಜಿಲ್ಲಾ ಹಂತದ ಎಸ್ಸಿ–ಎಸ್ಟಿ ಉದ್ಯಮಿಗಳು ರಾಜ್ಯ ಸರ್ಕಾರದ ವಿರುದ್ಧ ಒತ್ತಡ ತರಬೇಕು. ನಮ್ಮ ಸಂಘದ ಯಾವುದೇ ಪಕ್ಷದ ಪರ ಕೆಲಸ ಮಾಡುವುದಿಲ್ಲ ಬದಲಾಗಿ ಸಮುದಾಯದಲ್ಲಿ ಉದ್ಯಮಿಗಳನ್ನು ಬೆಂಬಲಿಸಿ ಕೆಲಸ ಮಾಡುತ್ತಿದೆ ಎಂದರು.

ಜಿಲ್ಲಾ ಮತ್ತು ತಾಲೂಕು ಹಂತದ ಎಸ್ಸಿ–ಎಸ್ಟಿ ಉದ್ಯಮಿಗಳು ಹೆಚ್ಚಿನ ರೀತಿಯಲ್ಲಿ ನಮ್ಮ ಸಂಘಕ್ಕೆ ಬೆಂಬಲ ವ್ಯಕ್ತಪಡಿಸಿದರೆ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ನಮ್ಮ ಸಮುದಾಯ ಉದ್ಯಮಿಗಳಿಗೆ ಹೆಚ್ಚಿನ ಅನುದಾನ ನೀಡುವಂತೆ ಒತ್ತಾಯಿಸಲು ಅನುಕೂಲವಾಗುತ್ತದೆ ಎಂದು ಸಭೆಗೆ ಮನವರಿಕೆ ಮಾಡಿಕೊಟ್ಟರು.

ಈ ವೇಳೆ ಮೈಸೂರು ಜಿಲ್ಲಾ ಪ.ಜಾತಿ ಮತ್ತು ಪ.ಪಂಗಡದ ಉದ್ದಿಮೆದಾರರ ಸಂಘದ ಅಧ್ಯಕ್ಷ ಆರ್.ಮಂಜುನಾಥ್, ಕಾರ್ಯದರ್ಶಿ ವಿಜಯಶಂಕರ್, ಡಿ.ಈಶ್ವರ ಚಕ್ಕಡಿ ಉಪಸ್ಥಿತರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

FOR SALE
East Facing House 35x50, Good Location Near Police booth, J.P.Nagar
9880181918

WANTED
Drivers Wanted for Construction Company in Hinkal Mysore (For Outside Halting Available)
9902076396

ಶಾಶ್ವತ ವಿದ್ಯಾಮಂದಿರ (ಇಂಗ್ಲೀಷ್ ಮಾಧ್ಯಮ)
ಸಿದ್ದರಾಮನಹುಂಡಿ ವರುಣಾ ಹೋಬಳಿ,
TEACHERS WANTED
English / Spoken English Social, Nursery, P.T. Teachers & Bus Driver
9740032559
9964236933

SITES FOR SALE
MUDA Approved & DTCP Athmananda Sagara, Paramananda Sagara, Nithyananda Sagara & Kuberananda Sagara.
Price: Rs. 8 Lakhs to 50 Lakhs.
30x40, 60x40 & 50x80
JK, 8951144240

ಬೇಕಾಗಿದ್ದಾರೆ
1. ಸೆಕ್ಯೂರಿಟಿ (ಯುವತಿಯರು)
ಸ್ಥಳ: ಇಟ್ಟಿಗೆಗೂಡು ಸುತ್ತಮುತ್ತ
2. ಸೆಕ್ಯೂರಿಟಿ ಗಾರ್ಡ್‌ಗಳು (ಪುರುಷ)
* ತೂಬಿನಕೆರೆ ಇಂಡಸ್ಟ್ರಿಯಲ್ ಏರಿಯಾ
* ಮೈಸೂರಿನ ಸಿಟಿ ಹಾಗೂ ಕುರುಬಾರಹಳ್ಳಿ ಸರ್ಕಲ್
9686422400
9242406261

30X40 ಅಳತೆ ಸೈಟು ಬೇಕಾಗಿದೆ
ಪೂರ್ವ (East Face) ದಿಕ್ಕಿನಲ್ಲಿರುವ ಸೈಟು ರಾಮಕೃಷ್ಣನಗರ, ಕುವೆಂಪುನಗರ, ನಿವೇದಿತ ನಗರಗಳಲ್ಲಿ ಬೇಕಾಗಿದೆ
Broker Excuse
9740576241
9945287336

ಬೇಕಾಗಿದ್ದಾರೆ
ವ್ಯವಹಾರ ಜ್ಞಾನವುಳ್ಳ ಆರ್ಥಿಕ ವಹಿವಾಟು ನಮ್ಮ ಸಂಸ್ಥೆಯಲ್ಲಿ ಉದ್ಯೋಗವಕಾಶ ಯುವಕ/ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ವಯಸ್ಸು ಮಿತಿ ಇಲ್ಲ ಉದ್ಯೋಗದಲ್ಲಿದ್ದು ಸಂಬಳ 12000 ದಿಂದ 18000, ESI & PF ಸೌಲಭ್ಯ ಇರುತ್ತದೆ.
8050699742
ಸೂಚನೆ: ಉದ್ಯೋಗಕ್ಕೋಸ್ಕರ ಹಣ ಕಟ್ಟುವ ಅಗತ್ಯವಿಲ್ಲ
7760043596

ಉಚಿತವಾಗಿ ಪಡೆಯಿರಿ
26 Kg BT ರೈಸ್‌ನ್ನು ಖರೀದಿಸಿದರೆ 3Ltr ಸನ್‌ಫ್ಲವರ್ ಎಣ್ಣೆ ಅಥವಾ ಫ್ರೀಡಂ ಎಣ್ಣೆ ಮತ್ತು 2 Kg ಸಕ್ಕರೆಯನ್ನು ಉಚಿತವಾಗಿ ಪಡೆಯಿರಿ ಬೆಲೆ ರೂ. 1650/- ಮಾತ್ರ (ಸರಬರಾಜು ಉಚಿತ)
ಶ್ರೀ ಅನ್ನಪೂರ್ಣೇಶ್ವರಿ ರೈಸ್ ಕಾರ್ನರ್
1498, ಶಿವರಾಂಪೇಟೆ, ಪೋಸ್ಟ್ ಆಫೀಸ್ ಎದುರು ರಸ್ತೆ, ಮೈಸೂರು–570001
9741859037
9902158019

ಬೇಕಾಗಿದ್ದಾರೆ
ಹುದ್ದೆ –1. Office Manager ಹುದ್ದೆಗೆ ಮೈಸೂರಿನಲ್ಲಿರುವ ಸ್ವಯಂಸೇವಾ ಸಂಸ್ಥೆಗೆ Office Manager ಹುದ್ದೆಗೆ 5 ವರ್ಷಗಳ ಅನುಭವವುಳ್ಳ ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : Any Master Degree
ಹುದ್ದೆ–2. Office Attender ಹುದ್ದೆಗೆ 2 ವರ್ಷಗಳ ಅನುಭವವಿರುವ ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ SSLC
Email:ksf.mysorebranch@gmail.com Ph:0821-2301564, 9686221564, 9945752592

FOR RENT
2 BHK House available for RENT Near Vivekananda Circle. Contact :
9686375607
0821-3568262

ಮುಡಾ ಸೈಟು ಮಾರಾಟಕ್ಕಿದೆ
40x60
ಈಸ್ಟ್ ಫೇಸ್
ಸಾತಗಳ್ಳಿ 'ಬಿ' ವಲಯ, ಮೈಸೂರು.
Mob: 9164056988

ಮಂಟಪ ಮನೆ

ನಿತ್ಯ ಪೂಜೆ ಮಾಡಲು ನಿಮಗೆಂದು ದೇವರ ಮಂಟಪ ಬೇಕೇ ಬೀಟೆ ಮತ್ತು ಹಲಸು ಮರದಿಂದ ತಯಾರಿಸುತ್ತೇವೆ
ಸಂಪರ್ಕಿಸಿ: ಶ್ರೀನಗರ ಮೈಸೂರು
9448207634
9036742526

WANTED
FEMALE WAITERS FOR CAFE
LOCATION - K.D.ROAD
9739499933
7899999038

ಬೇಕಾಗಿದ್ದಾರೆ
ಹೆಲ್ಪರ್‌ಗಳು ಬೇಕಾಗಿದ್ದಾರೆ
ಅನುಭವ ಬೇಕಾಗಿಲ್ಲ
ಭೈರವ್ ಮಾರ್ಕೆಟಿಂಗ್
Call: 0821-4252464

FLAT FOR RENT
2 BHK Fully Furnished Cots, BED, Sofa Set, Dining Set, Fridge, TV, Modular Kitchen, Utility, Sitout, Curtains, Gas Near DRC Theater Jayalakshmipuram,
9632233118
Sreenivasakumar

TO-LET
ಬಾಡಿಗೆಗೆ ದೊರೆಯುತ್ತದೆ
ಸಿದ್ಧಾರ್ಥನಗರ
5 Rooms & Dormitory Hall available (P.G.Space, Office Space, Dance Class, yoga Class Space Available
7353682106,9482139665

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಕೆಲಸಕ್ಕೆ ಬೇಕಾಗಿದ್ದಾರೆ
ಡಿ.ಟಿ.ಪಿ ಆಪರೇಟರ್ (M/F) ಕನ್ನಡ (ನುಡಿ) ಮತ್ತು ಇಂಗ್ಲೀಷ್ ಟೈಪಿಂಗ್ ಕಡ್ಡಾಯವಾಗಿ ಗೊತ್ತಿರಬೇಕು.
ಸ್ಥಳ: ಸಂಕ್ರಾಂತಿ ಸರ್ಕಲ್ ಹತ್ತಿರ, ಹೂಟಗಳ್ಳಿ, ಮೈಸೂರು
9900525880
8105946168

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

HOUSE FOR SALE
20x30 MUDA, New 3 BHK, Duplex Fully Furnished House, N/F Door at Dattagalli, Near Triveni Supermarket, Price-79 Lakhs, Contact Owner
6361295132

DTCP SITES FOR SALE
DTCP Sites Rs. 699 per sq.ft., Near Jayapura, H.D. Kote Road, Mysore.
9590491194,9606783264

ಮುಡಾ ಸೈಟ್ ಸೇಲ್
30x40 ಈಸ್ಟ್ ಫೇಸಿಂಗ್ ಮುಡಾ ಖಾತೆ, ಮೈಸೂರು
ಬೆಲೆ : 25 ಲಕ್ಷ
ಡೈರೆಕ್ಟ್ ಓನರ್
9342123373

HOUSE FOR RENT
2BHK Houses on I & II Floor with all modern amenities, Solar, 2 wheeler Parking only and fully furnished in Thyagaraja Road, 4th Cross, Near Agrahara Circle only for Strict Vegetarian Hindu families
6362728440

ಕೆಲಸ ಕೆಲಸ ಕೆಲಸ
ಕನ್ನಡ ಮಾತನಾಡಬಲ್ಲ 18 ವರ್ಷ ಮೇಲ್ಪಟ್ಟ 7th, SSLC, PUC, ITI, DIPLOMA, PASS/FAIL ಆಗಿರುವ ಯುವಕ / ಯುವತಿಯರಿಗೆ ನೇರ ನೇಮಕಾತಿ. ಸಂಬಳ 18000,ದಿಂದ 28000ವರೆಗೆ ಸಿಗುತ್ತದೆ. ಸೌಲಭ್ಯ ಊಟ, ರೂಂ , ESI, PF, ID CARD ಸಿಗುತ್ತದೆ, ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ. ರಾಧ
9035023710, 9538905503

NEW HOUSE FOR SALE
30x40, N/F, 3 BHK Duplex House, Vijayanagar 4th Stage, 2nd Phase, Mysore Brokers Excuse. Contact:
9986206577/8073375718

40x60 SITE FOR SALE
West Facing, Auction Site DIRECTLY MUDA
Rajeeva Nagar, Ali Miyan Road Near Dharu Salam Masjid, MYSORE
Rs. 94 Lacs
Call : 9845286583

ಹೊಸ ಮನೆ ಮಾರಾಟಕ್ಕಿದೆ
1400 ಅಡಿ ಪೂರ್ವ ದಿಕ್ಕು ಹಾಗೂ ಸೈಟುಗಳು ದೊರೆಯುತ್ತವೆ ಶ್ರೀನಗರ ಹಿಂಭಾಗ ಶ್ರೀರಾಂಪುರ ರಿಂಗ್ ರೋಡ್, ಮೈಸೂರು
8050345574

ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಉತ್ತಮವಾದ ಸಂಬಳ ವಯೋಮಿತಿ 30 ರಿಂದ 45 ರವರೆಗೆ ಮೇಟಗಳ್ಳಿ, ಬೆಳವಾಡಿ, ಹೆ.ಹಿನಕಲ್, ಬೋಗಾದಿ ಹಾಗೂ ಮೈಸೂರು ಸುತ್ತಮುತ್ತ ಇರುವ ಪ್ರದೇಶಗಳಿಗೆ ದೂರವಾಣಿ ಸಂಖ್ಯೆ
9538886328
9108100117

BIG BIG OFFER
ಸೋಮವಾರದಿಂದ ಶನಿವಾರ ಕಾಫೀ ಕುಡಿಯಿರಿ ಭಾನುವಾರ ಉಚಿತವಾಗಿ ಪಡೆಯಿರಿ. ಸಂಪರ್ಕಿಸಿ
8904331226

CHANGE OF NAME
I, ABDUL MAJID, residing at # 322, 6th Cross, 'C' layout Bannimantap, Mysore 570015, have changed my name from ABDUL MAJEED to ABDUL MAJID on my own free will sworn in before Notary C.R. SEETHARAM B.Sc, LL.B Mysore City And My Father Name has Spelling Mistake MOHAMED SAFFI But my Father Correct Name is MOHAMMED SHAFI admitted dated 06-06-2023
Sd/- Abdul Majid

SITE FOR SALE
30X40 Corner Premium Site for Sale Back Side of Golf Course
9611346288

ಸಂಪು ಕ್ಲೀನಿಂಗ್
ಸಂಪರ್ಕಿಸಿ:
8431541631

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ. ಸಂಬಳ:ರೂ. 15200/- to 86000/-
9740733021
9535028750



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಅಗ್ರಹಾರ ಸರ್ಕಲ್ ಹತ್ತಿರ ಅಂಗಡಿಯಲ್ಲಿ ಕೆಲಸ ಮಾಡಲು Sales Boys & Girls ಬೇಕಾಗಿದ್ದಾರೆ
9886640503

SITE FOR SALE
30X40 North Site Sale Gayatry Layout (Near New R T Nagar and Dattagalli)
9880273834

ಹೊಸ ಮನೆ ಮಾರಾಟಕ್ಕಿದೆ
20x30, 2 floor, ಶ್ರೀ ವಿನಾಯಕ ಗಾರ್ಡನ್ ಸಿಟಿ ಡೈಮಂಡ್, ಸೆಂಟ್ ಜೋಸೆಫ್ ಸ್ಕೂಲ್ ಹತ್ತಿರ ಇಲವಾಲ, ಮೈಸೂರು
9740461780
9945704998

Document Lost
Mohammed Sahibulla, No. 803, LIG First Floor, Devanur Extn., 2nd Stage, Rajivnagar, Mysuru-570 019, have lost my sale deed paper of House No. EWS 1124, size 6x9 Mtr. in my house shifting. *Finders please contact:*
Mob: 8660621369

ಬ್ಯುಸಿನೆಸ್ ಪ್ಲಾನ್
ಬ್ಯುಸಿನೆಸ್ ಪ್ಲಾನ್ ನಿಮ್ಮದು. ಬಂಡವಾಳ ನಮ್ಮದು. ಬಂದ ಆದಾಯದಲ್ಲಿ 50–50. ಈ ರೀತಿ ಬ್ಯುಸಿನೆಸ್ ಪ್ಲಾನ್ ಇರುವವರು ಕೂಡಲೇ ಸಂಪರ್ಕಿಸಿ
9901080314

ಪತ್ರ ಬರಹಗಾರರು
ಜಿ. ಪ್ರಫುಲ್ಲ ಚಂದ್ರ, ನೋಂದಣಿ ಸಲಹೆಗಾರರು, ಕ್ರಯಪತ್ರ, ಕರಾರು ಪತ್ರ, ರಿಜಿಸ್ಟ್ರೇಷನ್‌ಗಳಿಗೆ ಸಂಪರ್ಕಿಸಿ: #386, 14ನೇ ಮೇನ್, ಸರಸ್ವತಿಪುರಂ
Mob: 9480379977

ಮುಡಾ ಸೈಟು ಮಾರಾಟಕ್ಕಿದೆ
ಶ್ರೀನಿಧಿ ಲೇಔಟ್, ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ, ನಿವೇಶನ ಸಂಖ್ಯೆ 35 ಪೂರ್ವಕ್ಕೆ ರಸ್ತೆ 30x50 ಅಡಿ. ಸಂಪರ್ಕಿಸಿ:
Mob: 94491 84269

SITE FOR SALE
30x40 KHB, Nisarga Layout, Yelwala, 3rd Block, North facing.
Contact:
Mob: 7619328883

ಪಾರ್ಟ್ ಟೈಮ್ ಜಾಬ್
ನಿಮ್ಮ ಬಿಡುವಿನ ವೇಳೆಯಲ್ಲಿ ಮನೆಯಿಂದಲೇ ಕೆಲಸ ಮಾಡಿ ಗಳಿಸಿ 12000 ದಿಂದ 25000 ಪ್ಯಾಕಿಂಗ್, ರೈಟಿಂಗ್ ಹಾಗೂ ಡೇಟಾ ಎಂಟ್ರಿ ಕೆಲಸಗಳು ವಯೋಮಿತಿ ಇಲ್ಲ
9739492315

3BHK FLAT FOR SALE
Spacious, Ground Floor 3BHK N/F Flat For Immediate SALE in Posh VV Mohalla, Mysore. Brokers Excuse Genuine Buyers Contact
9480308402
9004470320

ಸುವರ್ಣ ಯಾತ್ರ
ಚಾರ್‌ಧಾಮ್ ಪ್ರವಾಸ: ಯಮುನೋತ್ರಿ, ಗಂಗೋತ್ರಿ, ಕೇದಾರನಾಥ, ಬದ್ರಿನಾಥ, ಹರಿದ್ವಾರ್, ಋಷಿಕೇಶ್ 13 ದಿನಗಳು, 21–9–2023 ಅಥವಾ 05–10–2023 ಅಥವಾ 27–10–2023.
9019462508, 9008381022

House Sale or Rent
New modern house 30x40 ground floor and first floor, Kandaya Badavane, Srirampura, near Hari College.
Mob: 9448810250

New House for Sale
Newly built 30x40 house for sale in Vijayanagar 4th Stage, 2nd Phase, MUDA 3 BHK house for sale in Vijayanagar 4th Stage, 2nd Phase, near NPS School.
For more details contact:
Mob: 9880089750

ಸೋಲಾರ್ ವಾಟರ್ ಹೀಟರ್
Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

ಸಂಪು
ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

READY TO REGISTRATION SITES
ಮೈಸೂರಿನ ಇಲವಾಲ ಸುತ್ತಮುತ್ತ MUDA & DTCP Approved ಸೈಟುಗಳು ಕೇವಲ ರೂ.10 ಲಕ್ಷಕ್ಕೆ ದೊರೆಯುತ್ತದೆ ಹಾಗೂ ಬ್ಯಾಂಕ್ ಲೋನ್ ಲಭ್ಯವಿದೆ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
6363082326

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ 10th/PUC (30 Yrs to 50 Yrs) (ಮೈಸೂರು, ನಂಜನಗೂಡು) ಪುರುಷರು/ಮಹಿಳೆಯರು
2) ಹೌಸ್ ಕೀಪಿಂಗ್ – ಹುಡುಗರು/ಮಹಿಳೆಯರು (ಮೈಸೂರು/ನಂಜನಗೂಡು)
ESI & PF ಸೌಲಭ್ಯವಿರುತ್ತದೆ.
9739166772
9880419847

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
87490 98879

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ಮೈಸೂರು ಇಲ್ಲಿ ಬೇಗನೆ ಮಾಡಿಸಲಾಗುವುದು

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್ 9741250896
ವಿಳಾಸ: ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಹತ್ತ ಸಿದ್ಧಾರ್ಥ ನಗರ, ಮೈಸೂರು

Vokkaliga Matrimony
Doctor / Engineer / CA / M.Sc. / MBA / MCA / Govt. Employee & all qualification
ಒಕ್ಕಲಿಗ ಜಾತಿಯ ವಧು–ವರರಿಗಾಗಿ ಸಂಪರ್ಕಿಸಿ:
Mob: 9343175000

WANTED
1. Science Teacher - BSc. BEd. BSEd (Hi) - 1 Post
2. Computer Teacher - BCA - 1 Post
3. Warden (Male) - PUC - 1 Post
Please apply to sairangadeafschool@gmail.com on or before 15-6-2023
For further details contact:
9342112736

WANTED TEACHERS
For Coaching Center Kuvempunagar Mysore
B.Sc, B.Ed Maths Science
B.A, BEd Social English, Hindi, Sanskrit
M.Sc. (P.C.M.B)
8197969078

ಬೇಕಾಗಿದ್ದಾರೆ
ಹೈವೇ ಸರ್ಕಲ್ ಹತ್ತಿರ 5 ಸ್ಟಾರ್ ಹೋಟೆಲ್‌ನಲ್ಲಿ ಹೌಸ್ ಕೀಪಿಂಗ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಊಟ ವಸತಿ (PF, ESI) ಸೌಲಭ್ಯವಿರುತ್ತದೆ. ಸಂಬಳ: 10,000/-
8710040058
9901607889

ಬೇಕಾಗಿದೆ
ಲಾಲ್‌ಬಹದ್ದೂರು ಶಾಸ್ತ್ರಿ ನಗರ, ಗೋಪಾಲಗೌಡ ನಗರ ಹಾಗೂ ಲಲಿತಾದ್ರಿನಗರಗಳಲ್ಲಿ ಸೈಟುಗಳು ಬೇಕಾಗಿದೆ.
20x30, 30x40
9731204530

WANTED
We require ITI Turner, Fitter, Electricians and Diploma in Mechanical, Preferably Female
0821-2582668,7204445679
Address: MYSTECH MACHINES # Q113, 4th Cross, 8th Main, Hebbal Industrial Estate, Mysore-570016

ಬೇಕಾಗಿದ್ದಾರೆ
ಕಂಪ್ಯೂಟರ್ ಆಫೀಸ್‌ನಲ್ಲಿ "ಡೆಲಿವರಿ ಬಾಯ್" ಕೆಲಸಕ್ಕೆ SSLC or PUC ಮಾಡಿರುವ, 25 ವರ್ಷದೊಳಗಿನ ದ್ವಿಚಕ್ರ ವಾಹನ ಮತ್ತು ಲೈಸೆನ್ಸ್ ಹೊಂದಿರುವ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ.
8073393505

WANTED
Sales Boys & Girls For a SPORTS SHOP at MYSORE Immediately
7760109047
8105368325

ಚೈತ್ರ ಟಿಂಬರ್ಸ್
ಬೇವಿನ ಮರ, ಸಾಗುವಾನಿ ಮರ ದೊರೆಯುತ್ತದೆ. 5 ಆಕರ್ಷಕ ಸಾಗುವಾನಿ ಮಂಚ ಕಡಿಮೆ ಬೆಲೆಗೆ ಮಾರಾಟಕ್ಕಿದೆ. ಅಕ್ಬರ್ ರಸ್ತೆ, ಲಷ್ಕರ್ ಮೊಹಲ್ಲಾ, ಮೈಸೂರು
9986562429

ಬೇಕಾಗಿದ್ದಾರೆ
ಮ್ಯಾಟ್ರಸ್ ಮ್ಯಾನುಫ್ಯಾಕ್ಚರಿಂಗ್ ಕಂಪನಿಗೆ ಹೆಲ್ಪರ್ ಹುದ್ದೆಗೆ ಪುರುಷ ಅಭ್ಯರ್ಥಿಗಳು ವಯೋಮಿತಿ 20 ರಿಂದ 40 ವರ್ಷ ಆಕರ್ಷಕ ಸಂಬಳ +ESI ಸೌಲಭ್ಯವಿರುತ್ತದೆ. ಸಂಪರ್ಕಿಸಿ
9611417014

ವಾಣಿಜ್ಯ ಮಳಿಗೆ ಹಾಗೂ ರೂಂ ಬಾಡಿಗೆಗಿದೆ
ಬ್ಯಾಂಕ್, ಫೈನಾನ್ಸ್, ಹೋಟೆಲ್ ನಡೆಸಲು ಹಿನಕಲ್, ಮೈಸೂರು ಹುಣಸೂರು ಮುಖ್ಯರಸ್ತೆ, ವಿಜಯನಗರ 3ನೇ ಹಂತದಲ್ಲಿ 60x40 ಸೈಟ್ ಬೇಕಾಗಿದೆ
9844576436

30x40 DTCP 'A'
ಖಾತೆಯುಳ್ಳ ಸೈಟು ಮಾರಾಟಕ್ಕಿದೆ 10 ಲಕ್ಷದ 80 ಸಾವಿರಗಳು ಮಾತ್ರ ನಿರ್ಮಾಣ್ ಲೇಔಟ್ ತಳೂರು ಸರ್ಕಲ್ ಹತ್ತಿರ ಮೈಸೂರು
9742198093

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಗಾರ್ಡ್ ವಯಸ್ಸಿನ ಮಿತಿ ಅಗತ್ಯವಿಲ್ಲ ಹೌಸ್ ಕೀಪಿಂಗ್ ಕೆಲಸಕ್ಕೆ ಮಹಿಳೆಯರು ಮತ್ತು ಹುಡುಗರು 35 ರಿಂದ 40ರ ತನಕ 8 ಗಂಟೆ ಪಾಳಿಗಾಗಿ
9035367083
8123769346

HOUSE FOR RENT
3 BED ROOM, Ground Floor, with Solar for Rent in Kuvempunagar Near A to Z Super Market
9945516373

WANTED
Female Graduates for Montessori Pre School in Bogadi
9113257683

ನಿರುದ್ಯೋಗಿಗಳಿಗೆ ಸುವರ್ಣಾವಕಾಶ
ಸಿದ್ಧಾರ್ಥ ಗುರುಕುಲ
1) ಮಾಂಟೆಸರಿ ಟ್ರೈನಿಂಗ್
2) ಎನ್.ಟಿ.ಟಿ. ಟ್ರೈನಿಂಗ್
3) ಬೆಸ್ಟ್ ಟ್ಯುಟೋರಿಯಲ್
ಎಲ್ಲಾ ತರಹದ ಉದ್ಯೋಗ ಅವಕಾಶಗಳು & ಉದ್ಯೋಗ ಪ್ಲಾನ್‌ಗಳನ್ನು ತಿಳಿಸುತ್ತೇವೆ.
9036822577

HOUSES FOR RENT
@ Saraswathipuram Kuvempunagar & Surroundings
S.S. Property Services (Opp. Kuvempu School) S.S. Puram
9342125252

ಬೇಕಾಗಿದ್ದಾರೆ
ಪ್ರತಿಷ್ಠಿತ ಕಂಪನಿಯಲ್ಲಿ Loan recovery ಮಾಡಲು Collection Executive ಗಳು ಮೈಸೂರು ನಗರ, ಹುಣಸೂರು, ಚಾಮರಾಜನಗರ, ಕೊಳ್ಳೇಗಾಲ ಈ ಸ್ಥಳಗಳಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಸ್ವಂತ ದ್ವಿಚಕ್ರ ವಾಹನವುಳ್ಳವರು ಮತ್ತು ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿ ಪಾಸಾದವರಿಗೆ ಆದ್ಯತೆ
Interview Date: 12-06-2023 & 13-06-2023
9980929313

30x40 ಸೈಟು@ Rs.25 ಲಕ್ಷ
Muda Approved Layout ತಕ್ಷಣ ನೋಂದಣಿ/ ಬ್ಯಾಂಕ್‌ಲೋನ್ ಲಭ್ಯ ಚಾಮುಂಡಿ ಬೆಟ್ಟದ ಹಿಂಭಾಗ ರಿಂಗ್ ರೋಡ್‌ನಿಂದ 3 ಕಿ.ಮೀ
9538583377

WANTED
OFFICE STAFF (Female) CADD, EST, BILLING (System Work) Diploma or BE Civil For Construction Company
9844439360

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧುವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ.
ಡಾ. ಗುರೂಜಿ
9448229184
7899625268

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರರಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

ತಂದೆ ತಂದ ಅನುದಾನದಿಂದ ಪೂರ್ಣಗೊಂಡ!
ಚೈತನ್ಯ ಭವನ ಉದ್ಘಾಟಿಸಿದ ಪುತ್ರ



ಹನಗೋಡು, ಜೂ.9– ಸರ್ಕಾರಿ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಪ್ರಾಥಮಿಕ ಹಂತದಲ್ಲೇ ಕೌಶಲ್ಯ ತರಬೇತಿ ಶಿಕ್ಷಣ ನೀಡುವುದರೊಂದಿಗೆ ಅವರ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಮಾಡಬೇಕೆಂದು ಶಾಸಕ ಜಿ.ಡಿ.ಹರೀಶ್ ಗೌಡ ತಿಳಿಸಿದರು.

ತಾಲೂಕಿನ ಹನಗೂಡು ಸರ್ಕಾರಿ ಪದವಿ ಕಾಲೇಜಿನಲ್ಲಿ ತಮ್ಮ ತಂದೆ ಜಿ.ಟಿ. ದೇವೇಗೌಡರು ನೀಡಿದ್ದ ಎರಡು ಕೋಟಿ ರೂ. ಅನುದಾನದಲ್ಲಿ ನಿರ್ಮಿಸಿರುವ ನೂತನ ಚೈತನ್ಯ ಭವನವನ್ನು (ಆಡಿಟೋರಿಯಂ) ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಮಕ್ಕಳಿಗೆ ಕೌಶಲ್ಯ ತರಬೇತಿ ತುಂಬಾ ಅತ್ಯವಶ್ಯವಾಗಿದೆ, ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರಾಥಮಿಕ ಹಂತದಲ್ಲೇ ಇಂಗ್ಲಿಷ್ ಮಾಧ್ಯಮಕ್ಕೆ ಹೆಚ್ಚು ಒತ್ತು ನೀಡುತ್ತವೆ. ಅದೇ ರೀತಿ ಸರ್ಕಾರಿ ಶಾಲೆ, ಕಾಲೇಜುಗಳಲ್ಲಿಯೂ ಇಂಗ್ಲಿಷ್ ಭಾಷೆಗೆ ಒತ್ತು ನೀಡುವುದರೊಂದಿಗೆ ಕೌಶಲ್ಯ ತರಬೇತಿಯನ್ನು ಪ್ರಾಥಮಿಕ ಹಂತದಲ್ಲೇ ನೀಡಬೇಕು ಎಂದರು.

ರಾಜ್ಯದಲ್ಲಿ ಪ್ರತಿವರ್ಷ ಒಂದು ಲಕ್ಷದ ಮೂವತ್ತೈದು ಸಾವಿರ ವಿದ್ಯಾರ್ಥಿಗಳು ಪದವಿ ಪಡೆಯುತ್ತಿದ್ದಾರೆ. ಈ ನಿಟ್ಟಿನಲ್ಲಿ ಪದವಿ ಪಡೆದ ಎಲ್ಲರಿಗೂ ಸರ್ಕಾರಿ ಕೆಲಸ ಸಿಗಲು ಸಾಧ್ಯವಿಲ್ಲ, ಆದ್ದರಿಂದ ವಿದ್ಯಾರ್ಥಿಗಳಿಗೆ ಆಸಕ್ತಿ ಇರುವ ಕ್ಷೇತ್ರದಲ್ಲಿ ಬೆಳೆಯಲು ಅವಕಾಶ ನೀಡಿ ಪ್ರೋತ್ಸಾಹಿಸುವುದರೊಂದಿಗೆ ಮುಂದೆ ಅವರು ಸ್ವ ಉದ್ಯೋಗದ ಮೇಲೆ ಜೀವನ ರೂಪಿಸಿಕೊಳ್ಳಲು ಶಕ್ತರಾಗುವಂತೆ ರೂಪಿಸಬೇಕೆಂದರು.

ವಿದ್ಯಾರ್ಥಿಗಳು ಕೌಶಲ್ಯಾಭಿವೃದ್ಧಿ ಜ್ಞಾನದೊಂದಿಗೆ ಗುಣಮಟ್ಟದ ಶಿಕ್ಷಣ ಪಡೆಯುವಲ್ಲಿ ಗಮನಹರಿಸಬೇಕು. ಗ್ರಾಮಾಂತರದಲ್ಲಿ ವಿದ್ಯಾಭ್ಯಾಸ ಮಾಡಿದ ಮಕ್ಕಳು ಸಮಾಜಕ್ಕೆ ಶಕ್ತಿಯಾಗಿ ಹೊರಹೊಮ್ಮಲಿ ಎಂದು ಹಾರೈಸಿದರು.

ಕಾಲೇಜನ್ನು ನ್ಯಾಕ್ ಶ್ರೇಣಿಗೆ ಸೇರಿಸಲು ಸಹಕರಿಸಿ: ಕಾಲೇಜಿನ ಪ್ರಾಂಶುಪಾಲ ಡಾ. ಬಸವರಾಜ್ ಮಾತನಾಡಿ, ಇದೇ ಜೂನ್ 22 ಮತ್ತು 23ನೇ ತಾರೀಖಿನಂದು ಹನಗೋಡು ಪದವಿ ಕಾಲೇಜಿಗೆ ನ್ಯಾಕ್ ಸಮಿತಿ ಆಗಮಿಸುತ್ತಿದೆ. ಸಮಿತಿಯು ಕಾಲೇಜಿನ ಶೈಕ್ಷಣಿಕ ಪ್ರಗತಿ ಸೇರಿದಂತೆ ಎಲ್ಲಾ ಮೂಲಭೂತ ಸೌಕರ್ಯಗಳ ಬಗ್ಗೆ ಮಾಹಿತಿ ಪಡೆಯಲಿದೆ. ಆದ್ದರಿಂದ ಕಾಲೇಜು ಅಭಿವೃದ್ಧಿ ಸಮಿತಿ, ಹಳೆ ವಿದ್ಯಾರ್ಥಿ ಸಂಘ, ಪೋಷಕರು ಮತ್ತು ಗ್ರಾಮಸ್ಥರು ಕಾಲೇಜಿನ ಮೂಲ ಸೌಕರ್ಯಗಳಿಗೆ ನೆರವು ನೀಡಬೇಕೆಂದು ಮನವಿ ಮಾಡಿದರು. ಕಾಲೇಜು ಉನ್ನತ ಶ್ರೇಣಿ ಪಡೆಯಲು ಎಲ್ಲಾ ರೀತಿಯಲ್ಲೂ ಸಹಕರಿಸುವೆ ಎಂದು ಶಾಸಕ ಜಿಡಿ ಹರೀಶ್ ಗೌಡರು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಕಿರಂಗೂರು ಬಸವರಾಜು, ಹನಗೋಡು ಗ್ರಾ.ಪಂ. ಅಧ್ಯಕ್ಷೆ ರತ್ನಶ್ರೀಧರ್, ಉಪಾಧ್ಯಕ್ಷ ಬೋರೇಗೌಡ, ದೊಡ್ಡ ಹೆಜ್ಜೂರು ಗ್ರಾಪಂ ಅಧ್ಯಕ್ಷ ಮುದಗನೂರು ಸುಭಾಷ್, ಮಾಜಿ ಅಧ್ಯಕ್ಷ ದಾ.ರಾ. ಮಹೇಶ್, ಹನಗೋಡು ಸಹಕಾರ ಬ್ಯಾಂಕ್ ಅಧ್ಯಕ್ಷ ರವಿಕುಮಾರ್, ಜಿ.ಪಂ. ಮಾಜಿ ಸದಸ್ಯ ಕಟ್ಟನಾಯಕ, ತಾ.ಪಂ. ಮಾಜಿ ಸದಸ್ಯರಾದ ಎಚ್.ಆರ್. ರಮೇಶ್, ತಟ್ಟೆಕೆರೆ ಶ್ರೀನಿವಾಸ್, ಅಶ್ರಫ್, ರಾಮಚಂದ್ರ ಪಿಡಿಓ ರಾಮಣ್ಣ ಸೇರಿದಂತೆ ಗ್ರಾಪಂ ಸದಸ್ಯರು, ಸಿಡಿಸಿ ಸಮಿತಿ ಸದಸ್ಯರು, ಕಾಲೇಜು ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು, ಪೋಷಕರು ಇದ್ದರು.

ಜಿಟಿಡಿ ಅನುದಾನ, ಹರೀಶ್‌ಗೌಡ ಉದ್ಘಾಟನೆ

2018– 19ನೇ ಸಾಲಿನ ಸಮ್ಮಿಶ್ರ ಸರ್ಕಾರದಲ್ಲಿ ನಮ್ಮ ತಂದೆ ಜಿ.ಟಿ. ದೇವೇಗೌಡರು ಉನ್ನತ ಶಿಕ್ಷಣರಾಗಿದ್ದು, ಅಂದು ಹನಗೋಡು ಪದವಿ ಕಾಲೇಜಿಗೆ ಕಾಲೇಜಿನ ಮಹಡಿ ಕೊಠಡಿಗಳ ನಿರ್ಮಾಣಕ್ಕೆ ಎರಡು ಕೋಟಿ ರೂ. ಮತ್ತು ಸಭಾಭವನ ಹಾಗೂ ಕಾಂಪೌಂಡ್ ನಿರ್ಮಾಣ ಕಾಮಗಾರಿಗೆ ಎರಡು ಕೋಟಿ ರೂ. ಸೇರಿದಂತೆ ಒಟ್ಟು ನಾಲ್ಕು ಕೋಟಿ ರೂ ಅನುದಾನ ನೀಡಿದ್ದರು. ಅವರ ಮಗನಾದ ನಾನು ಇಂದು ಹುಣಸೂರಿನ ಜನತೆಯ ಆಶೀರ್ವಾದದಿಂದ ಶಾಸಕನಾಗಿ ಸಭಾಭವನವನ್ನು ಉದ್ಘಾಟನೆ ಮಾಡುತ್ತಿರುವುದು ಹೆಮ್ಮೆ ಎನಿಸುತ್ತಿದೆ ಎಂದರು.

ವರುಣ ಚುನಾವಣೆಯಲ್ಲಿ ಸಿದ್ದು, ಸೋಮಣ್ಣರಿಂದ ಹಣದ ಹೊಳೆ

ಕ್ರಮಕ್ಕೆ ಆಗ್ರಹಿಸಿ ಚುನಾವಣಾ ಆಯೋಗಕ್ಕೆ ತೋಟದಪ್ಪ ಬಸವರಾಜು ದೂರು



ತಿ.ನರಸೀಪುರ, ಜೂ.9– ವ್ಯಾಪಕ ಅಕ್ರಮ ನಡೆಸಿ ವರುಣದಲ್ಲಿ ಹಣದ ಹೊಳೆ ಹರಿಸಿದ ಮಾಜಿ ಸಚಿವ ಸೋಮಣ್ಣ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮುಂದಿನ 10 ವರ್ಷಗಳ ಕಾಲ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸದಂತೆ ಅನರ್ಹಗೊಳಿಸಬೇಕು ಎಂದು ವರುಣ ಕ್ಷೇತ್ರದ ಪರಾಜಿತ ಅಭ್ಯರ್ಥಿ ತೋಟದಪ್ಪ ಬಸವರಾಜು ಚುನಾವಣಾ ಆಯೋಗಕ್ಕೆ ತಹಸೀಲ್ದಾರ್ ಡಿ.ಜೆ. ಗೀತಾ ಅವರ ಮೂಲಕ ದೂರು ನೀಡಿದ್ದಾರೆ.

ಚುನಾವಣೆ ಅಕ್ರಮದ ಬಗ್ಗೆ ತನಿಖೆ ನಡೆಸಿ ಇವರ ಮೇಲೆ ಸಂವಿಧಾನದ ಆಶಯದಂತೆ ಕಾನೂನು ಕ್ರಮ ಜರುಗಿಸಿ ಪ್ರಜಾ ಪ್ರಭುತ್ವದ ಮೌಲ್ಯವನ್ನು ಎತ್ತಿಹಿಡಿಯಬೇಕೆಂದು ಅವರು ತಮ್ಮ ದೂರಿನಲ್ಲಿ ಮನವಿ ಮಾಡಿದ್ದಾರೆ.

ಸಿದ್ದರಾಮಯ್ಯ ಮತ್ತು ಸೋಮಣ್ಣ ಅವರು ಮೇ 10 ರಂದು ನಡೆದ ವಿಧಾನಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ನೀತಿ ಸಂಹಿತೆಗೆ ವಿರುದ್ಧವಾಗಿ ಕ್ಷೇತ್ರದ ಪ್ರತಿ ಮತದಾರರಿಗೆ ಮತ ಪಡೆಯಲು ತಲಾ 2 ಸಾವಿರ ರೂ.ಗಳನ್ನು ಹಂಚಿದ್ದಾರೆ. ಹಾಗೂ ಚುನಾವಣೆಯಲ್ಲಿ ಅಕ್ರಮ ಮತ್ತು ವಾಮಮಾರ್ಗ ಅನುಸರಿಸಿ ಪ್ರಜಾಪ್ರಭುತ್ವ ಹಾಗೂ ಸಂವಿಧಾನಕ್ಕೆ ಅಪಪ್ರಚಾರ ಎಸಗಿರುತ್ತಾರೆ. ಹಾಗಾಗಿ ಇಬ್ಬರ ಆಯ್ಕೆಯನ್ನು ಅಸಿಂಧುಗೊಳಿಸಿ ಶಾಸಕ ಸ್ಥಾನದಿಂದ ವಜಾಗೊಳಿಸಿ ತೆರವಾದ ಸ್ಥಾನಕ್ಕೆ ಮರು ಚುನಾವಣೆ ನಡೆಸಬೇಕು ಎಂದು ತಹಶೀಲ್ದಾರ್ ಸಿ.ಜೆ.ಗೀತಾ ರವರ ಮೂಲಕ ಚುನಾವಣಾ ಆಯುಕ್ತರಿಗೆ ಸಲ್ಲಿಸಿರುವ ದೂರಿನಲ್ಲಿ ತಿಳಿಸಿದ್ದಾರೆ.

ಬೈಕಿನಿಂದ ಬಿದ್ದು, ಗ್ರಾಪಂ ಸದಸ್ಯ ಸಾವು



ತಿ.ನರಸೀಪುರ, ಜೂ.9– ಬೈಕಿನಿಂದ ಬಿದ್ದು ಗ್ರಾಪಂ ಸದಸ್ಯರೊಬ್ಬರು ಸಾವನ್ನಪ್ಪಿರುವ ಘಟನೆ ಮೈಸೂರು ಮುಖ್ಯ ರಸ್ತೆ ಎಡತೊರೆ ಬಳಿ ಸಂಭವಿಸಿದೆ.

ತಾಲೂಕಿನ ಶಂಭುದೇವನಪುರ ಗ್ರಾಮದ ಲೇಟ್ ಶಿವನಂಜಪ್ಪನವರ ಪುತ್ರ ಹಾಗೂ ರೈಸ್ ಮಿಲ್ ಮಾಲೀಕ, ಟಿ.ದೊಡ್ಡಪುರ ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದ ಶ್ರೀ ಗುರುಪ್ರಸಾದ್(40) ಎಂಬವರೇ ಸಾವನ್ನಪ್ಪಿದವರು.

ತಮ್ಮ ಬೈಕಿನಲ್ಲಿ ಮೈಸೂರಿಂದ ಟಿ. ನರಸೀಪುರಕ್ಕೆ ಬರುವಾಗ ಎಡದೊರೆ ಗ್ರಾಮದ ಬಳಿ ಬೈಕ್ ಸ್ಕಿಡ್ಡಾಗಿ ಬಿದ್ದು ತಲೆಗೆ ತೀವ್ರವಾಗಿ ತಲೆಗೆ ಪೆಟ್ಟಾಗಿತ್ತು. ಅವರನ್ನು ಮೈಸೂರಿಗೆ ಕರೆದೊಯ್ಯುವ ಮಾರ್ಗ ಮಧ್ಯೆ ಸಾವನಪ್ಪಿದ್ದಾರೆ. ಅಂತ್ಯಕ್ರಿಯೆಯು ಸ್ವಗ್ರಾಮದಲ್ಲಿ ಶನಿವಾರ (ಜೂ.10) ಮಧ್ಯಾಹ್ನ ಸುಮಾರು 2 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮನುಕುಲದ ಉಳಿವಿಗಾಗಿ ಪರಿಸರ ಸಂರಕ್ಷಣೆ ಅಗತ್ಯ



ಪಿರಿಯಾಪಟ್ಟಣ, ಜೂ.9– ನಮ್ಮ ಅಮೂಲ್ಯ ಪರಿಸರವನ್ನು ಉಳಿಸುವ ಏಕೈಕ ಉದ್ದೇಶದಿಂದ ವಿಶ್ವ ಪರಿಸರ ದಿನವನ್ನು ಆಚರಿಸಲಾಗುತ್ತಿದೆ. ಆದ್ದರಿಂದ ಮನುಕುಲದ ಉಳಿವಿಗಾಗಿ ಪ್ರತಿಯೊಬ್ಬರು ಪರಿಸರ ಉಳಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಬೇಕೆಂದು ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯ ಹಾಗೂ ಬಿಜೆಪಿ ಯುವ ಮುಖಂಡ ಪಿ.ಪ್ರಶಾಂತ್ ಗೌಡ ಅಭಿಪ್ರಾಯ ಪಟ್ಟಿದ್ದಾರೆ.

ಇಂದು ಪಟ್ಟಣದ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ತೆಂಗಿನ ಗಿಡ ನೆಡುವುದರ ಮೂಲಕ ಪರಿಸರ ದಿನಾಚರಣೆಯನ್ನು ಆಚರಿಸಿ ಮಾತನಾಡುತ್ತಿದ್ದ ಅವರು, ಮಾನವರಾದ ನಾವು ಭೂಮಿಯ ಸಾಮಾನ್ಯ ಸಮತೋಲನವನ್ನು ಹಾಳು ಮಾಡಿದ್ದೇವೆ. ಅದು ನಿಧಾನವಾಗಿ ನಮ್ಮ ಪರಿಸರದ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡುತ್ತದೆ ಆದ್ದರಿಂದ ನಮ್ಮ ಉಳಿವಿಗಾಗಿ ನಾವು ಮಾಡಿದ ಹಾನಿಯನ್ನು ಹಿಮ್ಮೆಟ್ಟಿಸುವುದು ಮತ್ತು ನಮ್ಮ ಪರಿಸರವನ್ನು ಅನುಕೂಲಕರವಾಗಿಸುವುದು ಸಮಾಜದ ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯ ಎಂದರು.

ಈ ಸಂದರ್ಭ ಬಿಜೆಪಿ ತಾಲೂಕು ಅಧ್ಯಕ್ಷ ಎಂ.ಎಂ.ರಾಜೇಗೌಡ, ಮುಖಂಡರುಗಳಾದ ಬೆಳತೂರು ಮನು, ಮೋಹನ್ ಕಿರಂಗೂರು, ರಾಜು, ಪ್ರಾಂಶುಪಾಲರಾದ ಪ್ರವೀಣ್, ಗೋವಿಂದೇಗೌಡ, ಮುಖ್ಯಶಿಕ್ಷಿ ದಿವ್ಯ ಹಾಗೂ ಸಂಸ್ಥೆಯ ಬೋಧಕರು, ವಿದ್ಯಾರ್ಥಿಗಳು ಇದ್ದರು.

ಚುನಾವಣೆ ವೇಳೆ ಹೊಲಿಗೆ ಯಂತ್ರ ಕೊಟ್ರು, ಸೋತ ಮೇಲೆ ಕಿತ್ಕೊಂಡ್ರು

ಹೆಚ್.ಡಿ.ಕೋಟೆ ತಾಲೂಕಿನಲ್ಲೊಂದು ವಿಲಕ್ಷಣ ಪ್ರಕರಣ



ಹೆಚ್.ಡಿ. ಕೋಟೆ, ಜೂ.9– ಸಮಾಜ ಸೇವೆ ಹೆಸರಿನಲ್ಲಿ ಜನರಿಗೆ ಚುನಾವಣೆ ವೇಳೆ ಕೊಟ್ಟಿದ್ದ ಹೊಲಿಗೆ ಯಂತ್ರಗಳನ್ನು ಪರಾಜಿತ ಅಭ್ಯರ್ಥಿ ವಾಪಸ್ ಪಡೆದಿರುವ ವಿಚಾರ ಬೆಳಕಿಗೆ ಬಂದಿದೆ.

ಪಟ್ಟಣದ ಶ್ರೀ ಶಕ್ತಿ ಒಕ್ಕೂಟದ ಅಧ್ಯಕ್ಷೆ ಶೈಲಾ ಸುಧಾಮಣಿ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ್ದು, ತಾಲೂಕಿನ ರಕ್ಷಾ ಸೇವಾ ಟ್ರಸ್ಟಿನ ಮಾಲೀಕರು ಎಂದು ಹೇಳಿಕೊಂಡು ಗಿರಿಜಾಂಬ ಮತ್ತು ದೊರೆಸ್ವಾಮಿ ಎಂಬ ದಂಪತಿಗಳು ತಾವು ಕೊಟ್ಟ ಹೊಲಿಗೆ ಯಂತ್ರಗಳನ್ನು ವಾಪಸ್ ಪಡೆಯುವ ಮೂಲಕ ಮಹಿಳೆಯರಿಗೆ ಅನ್ಯಾಯ ಮಾಡಿದ್ದಾರೆ ಎಂದು ಆರೋಪಿಸಿದರು.

ಕೋಟೆ ಹಾಗೂ ಸರಗೂರು ತಾಲೂಕಿನಲ್ಲಿ ಸಮಾಜ ಸೇವೆ ಮಾಡುವ ಅನೇಕ ಮಹಿಳೆಯರನ್ನು ಈ ದಂಪತಿ ಬಳಸಿಕೊಂಡು ಸಮಾಜಸೇವೆಯ ಹೆಸರಿನಲ್ಲಿ ಮಹಿಳೆಯರು ಹಾಗೂ ಬಡ ಹೆಣ್ಣುಮಕ್ಕಳನ್ನು ಸಬಲೀಕರಣಗೊಳಿಸುವುದಾಗಿ ನಂಬಿಸಿ ಉಚಿತವಾಗಿ ಹೊಲಿಗೆ ಯಂತ್ರಗಳನ್ನು ಕೊಟ್ಟು ತರಬೇತಿ ನೀಡಿ ನಂತರ ಪ್ರಮಾಣ ಪತ್ರವನ್ನು ಕೊಟ್ಟು ನಮ್ಮೆಲ್ಲರನ್ನು ಗಾರ್ಮೆಂಟ್ಸ್ ಮಾಡಿ ನಮ್ಮಲ್ಲಿ ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ ಎಂದು ತಿಳಿಸಿದ್ದರು ಎಂದು ಶೈಲಾ ಸುಧಾಮಣಿ ಆಪಾದಿಸಿದರು. ಅದಕ್ಕೆ ನಾವೆಲ್ಲ ಸರಗೂರು, ಕುಂದೂರು, ಅಂತರಸಂತೆ, ಹ್ಯಾಂಡ್ ಪೋಸ್ಟ್ ಗ್ರಾಮಗಳಲ್ಲಿ ಎಲ್ಲ ಮಹಿಳೆಯರು ಮತ್ತು ಹೆಣ್ಣು ಮಕ್ಕಳನ್ನು ಸೇರಿಸಿ ಗಿರಿಜಾಂಬ ದೊರೆಸ್ವಾಮಿ ಅವರ ಸಮ್ಮುಖದಲ್ಲಿ ಕಾರ್ಯಕ್ರಮ ನಡೆಸಿಕೊಟ್ಟೆವು. ನಂತರ ಎರಡು ತಿಂಗಳು ತರಬೇತಿಯನ್ನು ನೀಡಿ ಹೊಲಿಗೆ ಯಂತ್ರಗಳನ್ನು ಕೊಟ್ಟರು ಎಂದು ಹೇಳಿದರು.

ಆ ಮೇಲೆ ಗಿರಿಜಾಂಬ ದೊರೆ ಸ್ವಾಮಿಯವರು ಇದ್ದಕ್ಕಿದಂತೆ ರಾಜಕೀಯಕ್ಕೆ ಪ್ರವೇಶಿಸಿ ಇತ್ತೀಚೆಗೆ ಮುಕ್ತಾಯಗೊಂಡ ವಿಧಾನ ಸಭಾ ಚುನಾವಣೆಯಲ್ಲಿ ಹೆಚ್.ಡಿ. ಕೋಟೆಯಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದರು. ಆದರೆ ಅವರು ಪರಾಜಿತರಾದರು. ಚುನಾವಣೆಯಲ್ಲಿ ಸೋತ ನಂತರ ಮಹಿಳೆಯರಿಗೆ ಕೊಟ್ಟಿದ್ದ ಹೊಲಿಗೆ ಯಂತ್ರಗಳನ್ನು ಪುನಃ ವಾಪಸ್ ಪಡೆದುಕೊಂಡಿದ್ದಾರೆ. ಇದನ್ನು ಫಲಾನುಭವಿಗಳು ಪ್ರಶ್ನಿಸಿದಾಗ ಹೊಲಿಗೆ ಯಂತ್ರಗಳನ್ನು ನಾವು ರಿಪೇರಿ ಮಾಡಿಸುತ್ತೇವೆ ಎಂದು ಸುಳ್ಳು ಹೇಳಿ ಮಹಿಳೆಯರಿಗೆ ಮೋಸ ಮಾಡಿ ಎಲ್ಲಾ ಹೊಲಿಗೆ ಯಂತ್ರಗಳನ್ನು ಖುದ್ದಾಗಿ ಗಿರಿಜಾಂಬ ದೊರೆಸ್ವಾಮಿ ಅವರೇ ವಾಹನವನ್ನು ತಂದು ತುಂಬಿಕೊಂಡು ಹೋಗಿದ್ದಾರೆ ಎಂದು ಆಪಾದಿಸಿದರು. ನಮಗೆ ಹೊಲಿಗೆ ಯಂತ್ರಗಳನ್ನು ಕೊಡುವಾಗಲೇ ನಾವು ಚುನಾವಣೆಯಲ್ಲಿ ಸ್ಪರ್ಧಿಸುತ್ತೇವೆ. ನಮಗೆ ಮತ ಹಾಕಿ ಎಂದು ಹೊಲಿಗೆ ಯಂತ್ರಗಳನ್ನು ನೀಡಿದ್ದರೆ ಇವರನ್ನು ನಮ್ಮ ಗ್ರಾಮಗಳಿಗೆ ಕರೆ ತರುತ್ತಿರಲಿಲ್ಲ. ಸಮಾಜ ಸೇವೆ ಮಾಡುತ್ತೇವೆ ಎಂದು ಬಂದವರು ಈಗ ಇಂಥ ಕೆಲಸ ಮಾಡುವುದು ಎಷ್ಟರಮಟ್ಟಿಗೆ ಸರಿ ಎಂದು ಬೇಸರ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಪಬ್ಲಿಕ್ ಆಫ್ ಪಾರ್ಟಿ ಆಫ್ ಇಂಡಿಯಾ ಜಿಲ್ಲಾ ಅಧ್ಯಕ್ಷೆ ಅನುಷಾ, ರಕ್ಷಣಾ ವೇದಿಕೆ ತಾಲೂಕು ಅಧ್ಯಕ್ಷೆ ಸುಧಾ, ಟೌ ಉಪಾಧ್ಯಕ್ಷೆ ಮೀನಾ, ಶ್ರೀ ಶಕ್ತಿ ಒಕ್ಕೂಟದ ನಿರ್ದೇಶಕಿ ಚಿಕ್ಕಮ್ಮ, ಹಾಜರಿದ್ದರು.

> ಸಮಾಜ ಸೇವೆ ಮಾಡುತ್ತೇವೆ ಎಂದು ಬಂದು ಮಹಿಳೆಯರಿಗೆ ಹೊಲಿಗೆ ಯಂತ್ರವನ್ನು ಕೊಟ್ಟು ಅವರಿಗೆ ತರಬೇತಿ ನೀಡುವುದರ ಮೂಲಕ ನಾವೆ ಸ್ವತಃ ಗಾರ್ಮೆಂಟ್ಸ್ ಮಾಡಿ ಅಲ್ಲಿ ಉದ್ಯೋಗ ಕಲ್ಪಿಸಿ ಕೊಡುತ್ತೇವೆ ಎಂದು ನಂಬಿಸಿ ಈಗ ಚುನಾವಣೆಯಲ್ಲಿ ನಮಗೆ ಮತ ಹಾಕಿಲ್ಲ. ಅದಕ್ಕೆ ಹೊಲಿಗೆ ಯಂತ್ರವನ್ನು ವಾಪಸ್ ಪಡೆದು ಮೋಸ ಮಾಡಿರುವಂತಹ ಗಿರಿಜಾಂಬ ದೊರೆಸ್ವಾಮಿ ಅವರು ತಾಲೂಕಿನ ಯಾವುದೇ ಗ್ರಾಮದಲ್ಲಿ ಸಮಾಜ ಸೇವೆ ಮಾಡುತ್ತೇನೆ ಎಂದು ಗ್ರಾಮಗಳಿಗೆ ಬಂದರೆ ಮಹಿಳೆಯರು ತಕ್ಕ ಪಾಠ ಕಲಿಸುತ್ತೇವೆ.
>
> **–ಅನುಷಾ, ಪಬ್ಲಿಕ್ ಆಫ್ ಪಾರ್ಟಿ ಆಫ್ ಇಂಡಿಯಾ ಜಿಲ್ಲಾ ಅಧ್ಯಕ್ಷೆ.**

ಜೂ.13, 14ರಂದು ಮೈಸೂರಿನ ಕೆಲವೆಡೆ ನೀರು ಸರಬರಾಜಲ್ಲಿ ವ್ಯತ್ಯಯ

ಮೈಸೂರು, ಜೂ. 9– ನಿರ್ವಹಣಾ ಕಾರ್ಯ ನಿಮಿತ್ತ ಜೂ.13 ಮತ್ತು 14ರಂದು ಮೈಸೂರು ನಗರಪಾಲಿಕೆ ವಾರ್ಡ್ ನಂ.9ರಿಂದ 16, 28ರಿಂದ 39, 52, 53 ವ್ಯಾಪ್ತಿಗೆ ಬರುವ ಪ್ರದೇಶಗಳಾದ ಕೆಸರೆ, ರಾಜೇಂದ್ರನಗರ, ಸುಭಾಷ್‌ನಗರ, ಎನ್.ಆರ್. ಮೊಹಲ್ಲಾ, ಗಾಂಧಿನಗರ, ಉದಯಗಿರಿ, ರಾಜೀವ್‌ನಗರ 1, 2 ಮತ್ತು 3ನೇ ಹಂತ, ಶಾಂತಿನಗರ, ಕಲ್ಯಾಣಗಿರಿ, ಡಾ. ರಾಜ್‌ಕುಮಾರ್ ರಸ್ತೆಗೆ ಸೇರಿಕೊಂಡ ಪ್ರದೇಶಗಳು, ಯರಗನಹಳ್ಳಿ, ಸಿದ್ಧಾರ್ಥ ಬಡಾವಣೆ, ಆಲನಹಳ್ಳಿ, ನಂದಿನಿ ಬಡಾವಣೆ, ಗಿರಿದರ್ಶಿನಿ ಬಡಾವಣೆ, ಗೌಸಿಯಾನಗರ, ಕ್ಯಾತಮಾರನಹಳ್ಳಿ ಹಾಗೂ ಇನ್ನಿತರ ಪ್ರದೇಶಗಳಲ್ಲಿ ನೀರು ಸರಬರಾಜಲ್ಲಿ ವ್ಯತ್ಯಯವಾಗಲಿದೆ ಎಂದು ವಾಣಿವಿಲಾಸ ವಾಟರ್ ವರ್ಕ್ಸ್ ಪ್ರಕಟಣೆ ತಿಳಿಸಿದೆ.

ಶಾಲಾ ವಿದ್ಯಾರ್ಥಿನಿ ನಿಧನ



ನಂಜನಗೂಡು, ಜೂ.9– ಅನಾರೋಗ್ಯದಿಂದ ಬಳಲುತ್ತಿದ್ದ ನಗರದ ರೋಟರಿ ಶಾಲೆಯ ವಿದ್ಯಾರ್ಥಿನಿ ಜಿ.ಎಂ.ಪೂಜಾ ಶುಕ್ರವಾರ ನಿಧನರಾಗಿದ್ದಾರೆ. ತಾಲೂಕಿನ ಗಟವಾಡಿಪುರ ಗ್ರಾಮದ ಮಲ್ಲಿಕಾರ್ಜುನ್ ಮತ್ತು ಹೇಮಾವತಿ ದಂಪತಿಗಳ ಪುತ್ರಿ ನಗರದ ರೋಟರಿ ಶಾಲೆಯಲ್ಲಿ 6ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಳು. ಹುಟ್ಟಿನಿಂದಲೇ ಸಕ್ಕರೆ ಕಾಯಿಲೆಯಿಂದ ಬಳಲುತ್ತಿದ್ದ ವಿದ್ಯಾರ್ಥಿನಿ ಪೂಜಾ ಕಳೆದ ಮೂರು ದಿನಗಳಿಂದ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಶುಕ್ರವಾರ ಬೆಳಗ್ಗೆ ನಿಧನರಾಗಿದ್ದಾರೆ. ವಿದ್ಯಾರ್ಥಿನಿ ಸಾವಿನ ನಿಮಿತ್ತ ಗೌರವ ಪೂರ್ವಕವಾಗಿ ಶಾಲೆಗೆ ಒಂದು ದಿನ ರಜೆಯನ್ನು ಘೋಷಿಸಲಾಗಿತ್ತು.

ಮೂಡಲ ಮಠದ ಶತಾಯುಷಿ ಚನ್ನಬಸವದೇವರು



ಸರಗೂರು, ಜೂ.9– ಪಟ್ಟಣದ 12ನೇ ವಾರ್ಡಿನ ಮೂಡಲ ಮಠದ ಶತಾಯುಷಿ ಚನ್ನಬಸವದೇವರು (104) ಶುಕ್ರವಾರ ಬೆಳಗ್ಗೆ ನಿಧನರಾಗಿದ್ದಾರೆ. ಮೃತರು ಇಬ್ಬರು ಪುತ್ರರು, ಐವರು ಪುತ್ರಿಯರು ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಯನ್ನು ಶುಕ್ರವಾರ ಸಂಜೆ ಮೃತರ ತೋಟದಲ್ಲಿ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗ್ರಾಪಂ ಸದಸ್ಯ ವೆಂಕಟೇಶ್ ನಾಯಕ



ಹೆಚ್.ಡಿ.ಕೋಟೆ, ಜೂ.9– ಮಾದಾಪುರ ಗ್ರಾಮದ ಕಾಂಗ್ರೆಸ್ ಮುಖಂಡ ಹಾಗೂ ಗ್ರಾಪಂ ಸದಸ್ಯ ವೆಂಕಟೇಶ್ ನಾಯಕ(39) ಹೃದಯಾಘಾತದಿಂದ ಗುರುವಾರ ನಿಧನರಾಗಿದ್ದಾರೆ. ಮೃತರು ಪತ್ನಿ, ಓರ್ವ ಪುತ್ರಿ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶುಕ್ರ ವಾರ ಮಾದಾಪುರ ಗ್ರಾಮದಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿ ಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನರಸೀಪುರದಲ್ಲಿ ರಸ್ತೆ ಅಪಘಾತ ತಡೆಗೆ ಸಾರಿಗೆ ಇಲಾಖೆ ಕ್ರಮ

ನಿಯಮ ಪಾಲಿಸದ ಆಟೋ, ಓವರ್ ಲೋಡ್, ಫಿಟ್ನೆಸ್ ಸರ್ಟಿಫಿಕೇಟ್ ಇಲ್ಲದ ವಾಹನಗಳು ವಶಕ್ಕೆ



ತಿ.ನರಸೀಪುರ, ಜೂ.9– ಅಪಘಾತಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಕರ್ನಾಟಕ ಸಾರಿಗೆ (ಆರ್‌ಟಿಓ) ಇಲಾಖೆ ವತಿಯಿಂದ ಎರಡು ತಂಡಗಳನ್ನು ರಚಿಸಿ ರಸ್ತೆ ಸುರಕ್ಷತೆ ಬಗ್ಗೆ, ವಾಹನ ಚಾಲನೆ ಪರವಾನಿಗೆ, ಓವರ್ ಲೋಡ್‌ಗಳನ್ನು ಪರಿಶೀಲಿಸಿ ದಂಡವಿಧಿಸಿ, ವಾಹನಗಳನ್ನು ತಮ್ಮ ವಶಕ್ಕೆ ಪಡೆಯಲಾಗಿದೆ ಎಂದು ಮೈಸೂರು ವಿಭಾಗದ ಜಂಟಿ ಸಾರಿಗೆ ಆಯುಕ್ತರಾದ ಡಾ. ಸಿ.ಟಿ. ಮೂರ್ತಿ ತಿಳಿಸಿದರು.

ಪಟ್ಟಣದಲ್ಲಿ ವಾಹನಗಳನ್ನು ವಶಕ್ಕೆ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇತ್ತೀಚೆಗೆ ಖಾಸಗಿ ಬಸ್ ಹಾಗೂ ಇನೋವಾ ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲಿ 11 ಮಂದಿ ಮೃತಪಟ್ಟ ಘಟನೆ ಹಿನ್ನೆಲೆಯಲ್ಲಿ ತಿ.ನರಸೀಪುರಕ್ಕೆ ಭೇಟಿ ನೀಡಿ ಓವರ್ ಲೋಡ್ ವಾಹನಗಳು, ಪರವಾನಿಗೆ ಇಲ್ಲದೆ ಸಂಚರಿಸುತ್ತಿರುವ ಹಾಗೂ ಲೈಸೆನ್ಸ್ ಇಲ್ಲದೆ ವಾಹನ ಚಲಾಯಿಸುವ ಚಾಲಕರಿಗೆ ದಂಡ ವಿಧಿಸಲಾಗಿದೆ. ಸಂಚಾರಿ ನಿಯಮ ಉಲ್ಲಂಘಿಸಿರುವ 20ಕ್ಕೂ ಹೆಚ್ಚು ಆಟೋಗಳನ್ನು ಹಾಗೂ ಫಿಟ್ನೆಸ್ ಸರ್ಟಿಫಿಕೇಟ್ ಇಲ್ಲದೆ ಸಂಚರಿಸುತ್ತಿದ್ದ ನಾಲ್ಕು ಬಸ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಮಾಹಿತಿ ನೀಡಿದರು.

ಪ್ರತಿ ವಾರಕ್ಕೊಮ್ಮೆ ಸಾರಿಗೆ ಸಾಗಾಣಿಕೆ ಇಲಾಖೆ ವತಿಯಿಂದ ತಾಲೂಕಿನಾದ್ಯಂತ ವಾಹನಗಳ ತಪಾಸಣೆ ನಡೆಸಿ, ರಸ್ತೆ ಸುರಕ್ಷತೆಯ ಬಗ್ಗೆ ಅರಿವು ಮೂಡಿಸಲಾಗುವುದು. ಅಪಘಾತಗಳನ್ನು ತಡೆಗಟ್ಟಲು ಅಗತ್ಯ ಕ್ರಮ ವಹಿಸುವುದಾಗಿ ತಿಳಿಸಿದರು.

ಈಗಾಗಲೇ ಅಪಘಾತಗಳನ್ನು ತಡೆಗಟ್ಟುವ ಬಗ್ಗೆ ಉನ್ನತ ಅಧಿಕಾರಿಗಳ ಜೊತೆ ಸಭೆ ನಡೆಸಲಾಗಿದ್ದು, ಅಪಘಾತಗಳು ಆಗದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಲು ಎಲ್ಲಾ ರೀತಿಯ ಕ್ರಮವಹಿಸಲು ಚರ್ಚಿಸಲಾಗಿದೆ. ನಂತರ ತಾಲೂಕಿನಲ್ಲಿರುವ ಹೆದ್ದಾರಿಗಳಲ್ಲಿ ಹಲವು ಕಡೆ ಎಸ್ ಮಾದರಿಯ ತಿರುವುಗಳು ಹೆಚ್ಚಾಗಿದ್ದು, ಅದರ ಬದಲಾವಣೆ ಬಗ್ಗೆ ಕ್ರಮವಹಿಸಲಾಗುವುದು, ಮತ್ತು ದ್ವಿಚಕ್ರ ವಾಹನರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ರಸ್ತೆ ಸುರಕ್ಷತೆಯ ಬಗ್ಗೆ ಅರಿವು ಮೂಡಿಸಿ ಸ್ಪೀಡ್ ಮಿತಿಯನ್ನು ಅನುಸರಿಸಿ, ತಿರುವುಗಳಲ್ಲಿ ಓವರ್ ಟ್ರ್ಯಾಕ್ ಮಾಡಬಾರದೆಂದು ವಾಹನ ಚಾಲಕರುಗಳಿಗೆ ತಿಳಿಸಿ. ಕಡ್ಡಾಯವಾಗಿ ನಿಯಮಗಳನ್ನು ಪಾಲಿಸುವ ಮೂಲಕ ಅಪಘಾತಗಳನ್ನು ತಡೆಗಟ್ಟಿ ಸುರಕ್ಷಿತ ವಾಹನ ಸಂಚಾರಕ್ಕೆ ಆದ್ಯತೆ ನೀಡುವಂತೆ ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಆರ್‌ಟಿಓಗಳಾದ ಎಲ್.ದೀಪಕ್, ಭೀಮನಗೌಡ, ಶಫಿವುದ್ದಿನ್ ಖಾನ್, ಪೊಲೀಸ್ ವೃತ್ತ ನಿರೀಕ್ಷಕ ಮಹೇಶ್, ಸಿಬ್ಬಂದಿಯಮಾದ ಸಿದ್ದರಾಜು, ನಾಗರಾಜು, ಹೇಮಂತ್ ಗೌಡ ಇತರರು ಇದ್ದರು.

ಅಪರಿಚಿತ ಶವ ಪತ್ತೆ

ಮೈಸೂರು, ಜೂ.9– ಜೂ.8ರ ಮಧ್ಯಾಹ್ನ 1 ಗಂಟೆಯಲ್ಲಿ ರಮ್ಮನಹಳ್ಳಿ ಗ್ರಾಮದ ಮಹದೇವಪುರ ಮುಖ್ಯ ರಸ್ತೆಯ ಭಾರತ್ ನಗರದ ಸನ್‌ಫ್ಯೂರ್ ಗಾರ್ಡನ್ ಬಡಾವಣೆ ಮುಂಭಾಗದ ರಸ್ತೆ ಬದಿಯಲ್ಲಿ ಸುಮಾರು 40 ವರ್ಷದ ಅಪರಿಚಿತ ಗಂಡಸಿನ ಶವ ಪತ್ತೆಯಾಗಿದ್ದು, ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತ ವ್ಯಕ್ತಿಯ ಬಗ್ಗೆ ವಿವರ ಅಥವಾ ಮಾಹಿತಿ ತಿಳಿದು ಬಂದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ದೂ.ಸಂ.0821–2520040, ಜಿಲ್ಲಾ ಕಂಟ್ರೋಲ್ ರೂಂ ದೂ.ಸಂ.0821–2444800 ಹಾಗೂ ದೂ.ಸಂ.0821–2444955 ಅನ್ನು ಸಂಪರ್ಕಿಸಿ.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿ ಕೇರಳ ಸ್ಟೋರಿ (ಹಿಂ): ಬೆ.10.25ಕ್ಕೆ, ಮ.1.20ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 2	ಡೇರ್‌ಡೆವಿಲ್ ಮುಸ್ತಫಾ (ಕ): ಬೆ.10.05ಕ್ಕೆ, ಸಂ.6.50ಕ್ಕೆ, ಗಾರ್ಡಿಯನ್ಸ್ ಆಫ್ ಗ್ಯಾಲಕ್ಸಿ ವಾಲ್ಯೂಂ 3 (3ಡಿ)(ಇಂ): ಮ.1.10ಕ್ಕೆ, ಜೆರ್ಸಿ ನಂಬರ್ 10 (ಕ): ಸಂ.4.05ಕ್ಕೆ, ರಾಘವೇಂದ್ರ ಸ್ಟೋರ್ಸ್ (ಕ): ರಾ.10ಕ್ಕೆ.
ಸ್ಕ್ರೀನ್ 3	ಇವಿಲ್ ಡೆಡ್ ರೈಸ್ (ಇಂ): ಬೆ.11ಕ್ಕೆ, ಪಿಚ್ಚೈಕಾರನ್2 (ತ): ಮ.1.20ಕ್ಕೆ, ಸಂ.4.25ಕ್ಕೆ, ರಾಘವೇಂದ್ರ ಸ್ಟೋರ್ಸ್ (ಕ): ರಾ.7.30ಕ್ಕೆ, ಚಾರ್ಲ್ಸ್ ಎಂಟರ್‌ಪ್ರೈಸಸ್ (ಮ): ಸಂ.9.55ಕ್ಕೆ.
ಸ್ಕ್ರೀನ್ 4	ಫಾಸ್ಟ್ X (3ಡಿ)(ಇಂ): ಬೆ.10.45ಕ್ಕೆ, ಮ.1.35ಕ್ಕೆ, ಸಂ.4.25ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಫಾಸ್ಟ್ X (3ಡಿ)(ಇಂ): ಬೆ.10.30, ಮ.1.30ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ದಿ ಕೇರಳ ಸ್ಟೋರಿ (ಹಿಂ): ಬೆ.10ಕ್ಕೆ, ಮ.12.55ಕ್ಕೆ, ಮ.3.50ಕ್ಕೆ, ಸಂ.6.45ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 3	ದಿ ಕೇರಳ ಸ್ಟೋರಿ (ಹಿಂ): ಬೆ.11ಕ್ಕೆ, ಮ.1.55ಕ್ಕೆ, ಸಂ.4.50ಕ್ಕೆ, ರಾ.10.30ಕ್ಕೆ, ಅನುರಾಗಂ (ಮ): ರಾ.7.45ಕ್ಕೆ.
ಸ್ಕ್ರೀನ್ 4	ಫಾಸ್ಟ್ X (3ಡಿ)(ಇಂ): ಬೆ.9.30ಕ್ಕೆ, ಪಿಚ್ಚೈಕಾರನ್ 2(ತ): ಮ.12.20ಕ್ಕೆ, ರಾ.10.05ಕ್ಕೆ, ಡೇರ್‌ಡೆವಿಲ್ ಮುಸ್ತಫಾ (ಕ): ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, **1 ರಾಬರಿ ಕಥೆ (ಕ):** ಸಂ.4.50ಕ್ಕೆ, **ಚೌಕಾಬಾರ (ಕ):** ರಾ.7.50ಕ್ಕೆ, **ಕ್ರಿಡ್ 3 (ಇಂ):** ಬೆ.11.35ಕ್ಕೆ, **ತು ಜೂಠಿ ಮೇನ್ ಮಕ್ಕರ್ (ಹಿಂ):** ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, **ತು ಜೂಠಿ ಮೇನ್ ಮಕ್ಕರ್ (ಹಿಂ):** ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, **ತುರಮುಖಂ (ಮ):** ರಾ.10.30ಕ್ಕೆ, **ಅಜಿಲನ್ ಕಿಂಗ್ ಆಫ್ ದಿ ಓಷನ್ (ತ):** ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, **ಸ್ಕ್ರೀಮ್ 6 (ಇಂ):** ಮ.2.45ಕ್ಕೆ, ರಾ.7.45ಕ್ಕೆ, **65 (ಇಂ):** ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಟಕ್ಕರ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಟ್ರಾನ್ಸ್‌ಫಾರ್ಮರ್(ಇ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಟೈನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಗಾಡ್‌ಫಾದರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ದರ್ಬಾರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೇರ್ ಡೆವಿಲ್ ಮುಸ್ತಾಫಾ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಟ್ರಾನ್ಸ್‌ಫಾರ್ಮರ್(ಇ) 3 ಪ್ರದರ್ಶನಗಳು, ಕೇರಳ ಸ್ಟೋರಿ(ಹಿಂ) 1 ಪ್ರದರ್ಶನಗಳು	
ಸಂಗಂ	
ಗದಾಯುದ್ಧ (ಕ)	4 ಪ್ರದರ್ಶನಗಳು
ಲಿಡೋ	
ಪಿಎಸ್–2 (ತ)	4 ಪ್ರದರ್ಶನಗಳು
ತಿಬ್ಬಾದೇವಿ	
ಪಿಚ್ಚೈಕ್ಕಾರನ್–2 (ತ)	4 ಪ್ರದರ್ಶನಗಳು
ಪ್ರಭಾ	
ವೀರಂ (ಕ)	4 ಪ್ರದರ್ಶನಗಳು